## ಮಂಗಳವಾರ, ೧೫ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯ, ನವದೆಹಲಿಯ ಸಂವಿಧಾನಸಭೆಯಲ್ಲಿ ಮಧ್ಯಾಹ್ನ ೩ ಘಂಟೆಗೆ ಸಮಾವೇಶಗೊಂಡಿತು. [ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್] ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪರಿಚಯಪತ್ರಗಳ ಸಲ್ಲಿಕೆ : ರಿಜಿಸ್ಟರ್‌ನಲ್ಲಿ ಸಹಿ ಮಾಡುವುದು ಕೆಳಕಂಡ ಸದಸ್ಯರು ತಮ್ಮ ಪರಿಚಯ ಪತ್ರಗಳನ್ನು ಸಲ್ಲಿಸಿ ರಿಜಿಸ್ಟರ್‌ಗೆ ಸಹಿ ಮಾಡಿದರು.

೧. ಗೌರವಾನ್ವಿತ ಶ್ರೀ ಹುಸೇನ್ ಇಮಾಮ್ (ಬಿಹಾರ್–ಮುಸ್ಲಿಮ್)

೨. ಶ್ರೀ ಎನ್. ಮಾಧವ್‌ರಾವ್ (ಪೂರ್ವ ರಾಜ್ಯಗಳು–ಸಮೂಹ ೩)

೩. ಶ್ರೀ ರಾವ್ ರಾಜಾ ಜಯೇಂದ್ರ ಸಿಂಗ್ ದೇವ್ (ಮಧ್ಯಭಾರತ ಸಮೂಹ)

೪. ಪಂಡಿತ್ ಠಾಕೂರ್ ದಾಸ್ ಭಾರ್ಗವ (ಪೂರ್ವ ಪಂಜಾಬ್)

೫. ಶ್ರೀ ಜಸಿಮುದ್ದೀನ್ ಅಹ್ಮದ್ (ಪಶ್ಚಿಮ ಬಂಗಾಳ–ಮುಸ್ಲಿಮ್)

### ನಿಯಮಗಳ ತಿದ್ದುಪಡಿ

**ಮಾನ್ಯ ಅಧ್ಯಕ್ಷರು** : ನಾನೀಗ ನಿಯಮಗಳ ತಿದ್ದುಪಡಿಯನ್ನು ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇವೆ.

### ೨ನೇ ನಿಯಮ

**ಶ್ರೀ ಕೆ.ಎಂ. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯರೆ, ನನ್ನ ತಿದ್ದುಪಡಿಗಳನ್ನು ಒಂದಾದ ವೇಲೊಂದರಂತೆ ಪ್ರಸ್ತಾಪಿಸುತ್ತೇನೆ. ಪ್ರಾಯಶಃ ಸದನಕ್ಕೆ ಅದು ಹೆಚ್ಚು ಅನುಕೂಲಕರ ಮಾನ್ಯರೆ, ನಾನು ಪ್ರಸ್ತಾಪಿಸುತ್ತೇನೆ.

"೨ನೇ ನಿಯಮದ 'ಬಿ' ಖಂಡದಲ್ಲಿ 'ವಿಭಾಗಗಳು ಅಥವಾ' ಎಂಬ ಪದಗಳನ್ನು ಬಿಡಬೇಕು ಮತ್ತು 'ಎಫ್' ಖಂಡವನ್ನು ಬಿಡಬೇಕು."

ಎರಡೂ ಖಂಡಗಳು ವರ್ಗಗಳಿಗೆ ಅನ್ವಯವಾಗುವುದನ್ನು ಸದನ ಮನಗಾಣಬಹುದು. ನಿಯಮ ೨ರ 'ಬಿ' ಖಂಡ ಹೀಗಿದೆ:

" 'ಅಧ್ಯಕ್ಷ' ಎಂದರೆ ತತ್ಕಾಲದಲ್ಲಿ ಸಭೆಯ ವ್ಯಕ್ತಿ ಅಥವಾ ಅದರ 'ವಿಭಾಗಗಳು ಅಥವಾ' ಸಮಿತಿಗಳ ಅಧ್ಯಕ್ಷತೆ ವಹಿಸುವ ವ್ಯಕ್ತಿ."

'ವಿಭಾಗಗಳು ಇಲ್ಲದೆ ಇರುವುದರಿಂದ 'ವಿಭಾಗಗಳು ಅಥವಾ' ಎಂಬ ಪದಗಳನ್ನು ಬಿಡತಕ್ಕದ್ದು. ಜೊತೆಗೆ ವಿಭಾಗಗಳಿಗೆ ಅನ್ವಯಿಸುವ 'ಎಫ್' ವಾಕ್ಯಖಂಡವನ್ನು ನಿಯಮಗಳಿಂದ ಬಿಡತಕ್ಕದು."

**ಮಾನ್ಯ ಅಧ್ಯಕ್ಷರು** : ಪ್ರಸ್ತಾವವು ಹೀಗಿದೆ.

೨ನೇ ನಿಯಮದ 'ಬಿ' ಖಂಡದಲ್ಲಿ 'ವಿಭಾಗಗಳು ಅಥವಾ' ಎಂಬ ಪದಗಳನ್ನು ಬಿಡಬೇಕು. ಜೊತೆಗೆ 'ಎಫ್' ಖಂಡವನ್ನು ಬಿಡಬೇಕು.

ಪ್ರಸ್ತಾವವು ಅಂಗೀಕೃತವಾಯಿತು.

## ೩ನೇ ನಿಯಮ

**ಶ್ರೀ ಕೆ.ಎಂ. ಮುನ್ಷಿ** : ಮಾನ್ಯರೆ, ನಾನು ಪ್ರಸ್ತಾಪಿಸುತ್ತೇನೆ.

೩ನೇ ನಿಯಮದಲ್ಲಿ 'ಅಥವಾ ಅದರ ಯಾವುದೇ ವಿಭಾಗ' ಎಂಬ ಪದಗಳನ್ನು ಬಿಡಬೇಕು."

**ಮಾನ್ಯ ಅಧ್ಯಕ್ಷರು** : ಪ್ರಸ್ತಾವ ಹೀಗಿದೆ.

"೩ನೇ ನಿಯಮದಲ್ಲಿ 'ಅಥವಾ ಅದರ ಯಾವುದೇ ವಿಭಾಗ' ಎಂಬ ಪದಗಳನ್ನು ಬಿಡಬೇಕು"

ಪ್ರಸ್ತಾವ ಅಂಗೀಕೃತವಾಯಿತು.

## ೪ನೇ ನಿಯಮ

**ಶ್ರೀ ಕೆ. ಸಂತಾನಮ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ೪ನೇ ನಿಯಮಕ್ಕೆ ನನ್ನದೊಂದು ತಿದ್ದುಪಡಿ ಇದೆ.

"೪ನೇ ನಿಯಮದ ಪರಂತುಕವನ್ನು ಬಿಡಬೇಕು"

ಭಾರತೀಯ ಶಾಸನಸಭೆಯ ರದ್ದತಿಯ ಪರಿಣಾಮವಾಗಿ ಪರಂತುಕ, ತನ್ನ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತದೆ.

**ಶ್ರೀ ಕೆ.ಎಂ. ಮುನ್ಷಿ** : ಮಾನ್ಯರೆ, ಶ್ರೀ ಕೆ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

**ಶ್ರೀ ಶ್ರೀಪ್ರಕಾಶ** (ಸಂ. ಪ್ರಾಂ. : ಸಾಮಾನ್ಯ) : ಸಂವಿಧಾನ ರಚನಾಸಭೆಯಲ್ಲಿರುವ ದೆಹಲಿ ಅಜ್ಮೀರ್ ಮೇವಾಡ ಈ ಕ್ಷೇತ್ರಗಳನ್ನು ಪ್ರತಿನಿಧಿಸುವ ಸದಸ್ಯರ ಪ್ರಸ್ತುತ ಸ್ಥಾನವೇನು?

**ಶ್ರೀ ಕೆ.ಎಂ. ಮುನ್ಷಿ** : ಈಗಿನ ಸದಸ್ಯರು ಮುಂದುವರೆಯುತ್ತಾರೆ. ಒಂದು ವೇಳೆ, ಖಾಲಿ ಜಾಗವಿದ್ದರೆ, ತಿದ್ದುಪಡಿಯಲ್ಲಿ ಒಂದು ಅವಕಾಶ ಕಲ್ಪಿಸಲಾಗುತ್ತೆ. ಆ ಬಗ್ಗೆ ತಿದ್ದುಪಡಿಯೊಂದನ್ನು ಮಿ। ಕೆ. ಸಂತಾನಮ್ ಅವರು ಪ್ರಸ್ತಾಪಿಸುತ್ತಾರೆ. ೫ನೇ ನಿಯಮಕ್ಕೆ ಅವರು ತರುವ ತಿದ್ದುಪಡಿಯಲ್ಲಿ ವಿಶೇಷ ಅವಕಾಶ ಒದಗಿಸಲಾಗುತ್ತದೆ.

**ಮಾನ್ಯ ಅಧ್ಯಕ್ಷರು** : ಪ್ರಸ್ತಾವ ಹೀಗಿದೆ:

"ನಾಲ್ಕನೇ ನಿಯಮಕ್ಕೆ ಪರಂತುಕವನ್ನು ಬಿಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಕೆ.ಎಂ. ಮುನ್ಷಿ** : ಮಾನ್ಯರೆ, ನಾನು ಪ್ರಸ್ತಾಪಿಸುತ್ತೇನೆ.

"೫ನೇ ನಿಯಮದ (೨)ನೇ ಉಪನಿಯಮದಲ್ಲಿ 'ಅಥವಾ ಬ್ರಿಟಿಷ್ ಬಲೂಚಿಸ್ತಾನದಲ್ಲಿರುವ ಯುಕ್ತ ಪ್ರಾಧಿಕಾರ' ಎಂಬ ಪದವನ್ನು ಬಿಡಬೇಕು."

"೭ನೇ ಉಪನಿಯಮಕ್ಕೆ ಬದಲಾಗಿ ಈ ಕೆಳಗಿನದನ್ನು ಪ್ರಸ್ಥಾವಿಸಬೇಕು."

" (೭) (೨)ನೇ ಉಪನಿಯಮದಲ್ಲಿ ನಮೂದಿಸಲಾದ ಕೋರಿಕೆಯನ್ನು ಸ್ವೀಕರಿಸಿದ ಕೂಡಲೆ, ಸಂಬಂಧಿಸಿದ ಪ್ರಾಂತೀಯ ಶಾಸನಸಭೆಯ ಸಭಾಧ್ಯಕ್ಷರು ಅವರು."

ಸೂಕ್ತ ಅಧಿಸೂಚನೆಯ ಮೂಲಕ ಒಬ್ಬ ವ್ಯಕ್ತಿಯನ್ನು ಚುನಾವಣಾಧಿಕಾರಿಯಾಗಿ ನೇಮಕ ಮಾಡಬೇಕು. ಅದೇ ರೀತಿ ಚುನಾವಣಾಧಿಕಾರಿಯ ನಿಯಂತ್ರಣಕ್ಕೆ ಬದ್ಧವಾಗಿ, ಅಂತಹ ಯಾವುದೇ ಚುನಾವಣೆಯಲ್ಲಿ ಚುನಾವಣಾಧಿಕಾರಿಯ ಎಲ್ಲ ಅಥವಾ ಯಾವುದೇ ಕಾರ್ಯನಿರ್ವಹಿಸುವಂತಹ ಯಾರಾದರೂ ಒಬ್ಬ ವ್ಯಕ್ತಿಯನ್ನು ನೇಮಕಮಾಡಬೇಕು ಮತ್ತು

(ಬಿ) ಸೂಕ್ತ ಅಧಿಸೂಚನೆಯ ಮೂಲಕ

(i) ಅಭ್ಯರ್ಥಿಯ ನಾಮನಿರ್ದೇಶನ ಮಾಡಿ ಅಧಿಸೂಚನೆ ಹೊರಡಿಸಿದ ತಾರೀಖಿನಿಂದ ಮುಂದೆ ೧೫ ದಿನಗಳಿಗಿಂತ ಮೀರದಂತೆ, ಒಂದು ದಿನಾಂಕವನ್ನು ಗೊತ್ತುಪಡಿಸಬೇಕು.

(ii) ಒಬ್ಬ ಅಭ್ಯರ್ಥಿ ನಾಮಪತ್ರ ಹಿಂತೆಗೆದುಕೊಂಡಾಗ, ಮೊದಲು ನಮೂದಿಸಿದ ದಿನಾಂಕದಿಂದಲೂ ಮೂರನೇ ದಿನಕ್ಕೆ ಮೀರದಂತೆ ಅದರ ಸರಿತಪ್ಪು ನೋಡಲು ಮುಂದಿನ ತಾರೀಖನ್ನು ಗೊತ್ತುಪಡಿಸಬೇಕು.

(iii) ಸರಿತಪ್ಪು ನೋಡಿದ ದಿನಾಂಕದಿಂದ ೨ ದಿನಕ್ಕೆ ಮೀರದಂತೆ, ಅಭ್ಯರ್ಥಿ ನಾಮಪತ್ರ ವಾಪಸು ಪಡೆಯಲು ಮುಂದಿನ ದಿನಾಂಕವನ್ನು ಗೊತ್ತುಮಾಡಬೇಕು. ಮತ್ತು

(iv) ನಾಮಪತ್ರ ಪಡೆದ ತಾರೀಖಿನಿಂದ ೨೧ ದಿನಕ್ಕೆ ಮೀರದಂತೆ, ಅಗತ್ಯಬಿದ್ದರೆ, ಚುನಾವಣೆ ನಡೆಸಲು ಮುಂದಿನ ದಿನಾಂಕವನ್ನು ಗೊತ್ತುಮಾಡಬೇಕು.

ಈ ತಿದ್ದುಪಡಿಗಳಿಗೆ ಕಾರಣವೇನೆಂದರೆ ಈವರೆಗೆ ಓರ್ವ ಚುನಾವಣಾಧಿಕಾರಿಯ ನೇಮಕಕ್ಕೆ ಅವಕಾಶ ಮಾಡಿಕೊಟ್ಟಿರಲಿಲ್ಲವಾದ್ದರಿಂದ ಅಂತಹ ಅವಕಾಶದ ಅಗತ್ಯವಿತ್ತು.

**ಮಾನ್ಯ ಅಧ್ಯಕ್ಷರು** : ಪ್ರಸ್ತಾವ ಹೀಗಿದೆ :

೩ನೇ ನಿಯಮದ ೨ನೇ ಉಪನಿಯಮದಲ್ಲಿ 'ಅಥವಾ ಬ್ರಿಟಿಷ್ ಬಲೂಚಿಸ್ತಾನದ ಯುಕ್ತ ಪ್ರಾಧಿಕಾರ' ಎಂದು ಪದಗಳನ್ನು ಬಿಡಬೇಕು.

"(೬)ನೇ ಉಪನಿಯಮಕ್ಕೆ ಬದಲಾಗಿ ಈ ಕೆಳಗಿನದನ್ನು ಪ್ರಸ್ಥಾವಿಸಬೇಕು."

"(೬) ೨ನೇ ಉಪನಿಯಮದಲ್ಲಿ ನಮೂದಿಸಲಾದ ಕೋರಿಕೆಯನ್ನು ಸ್ವೀಕರಿಸಿದ ಕೂಡಲೆ, ಸಂಬಂಧಿಸಿದ ಪ್ರಾಂತೀಯ ಶಾಸನಸಭೆಯ ಸಭಾಧ್ಯಕ್ಷರು."

(ಎ) ಸೂಕ್ತ ಅಧಿಸೂಚನೆಯ ಮೂಲಕ ಒಬ್ಬ ವ್ಯಕ್ತಿಯನ್ನು ಚುನಾವಣಾಧಿಕಾರಿಯಾಗಿ ಮಾಡಬೇಕು. ಅದೇ ರೀತಿ ಚುನಾವಣಾಧಿಕಾರಿಯ ನಿಯಂತ್ರಣಕ್ಕೆ ಬದ್ಧನಾಗಿ ಅಂತಹ ಯಾವುದೇ ಚುನಾವಣೆಯಲ್ಲಿ, ಚುನಾವಣಾಧಿಕಾರಿಯ ಎಲ್ಲ ಯಾವುದೇ ಕಾರ್ಯನಿರ್ವಹಿಸುವಂಥ ಯಾರಾದರೊಬ್ಬ ವ್ಯಕ್ತಿಯನ್ನು ನೇಮಕಮಾಡಬೇಕು. ಮತ್ತು

ಬಿ). ಸೂಕ್ತ ಅಧಿಸೂಚನೆಯ ಮೂಲಕ

(i) ಅಭ್ಯರ್ಥಿಯ ನಾಮನಿರ್ದೇಶನ ಮಾಡಿ ಅಧಿಸೂಚನೆ ಹೊರಡಿಸಿದ ತಾರೀಖಿನಿಂದ ಮುಂದೆ ೧೫ ದಿನಗಳಿಂದ ಮೀರದಂತೆ ಒಂದು ದಿನಾಂಕ ಗೊತ್ತುಪಡಿಸಬೇಕು.

(ii) ಒಬ್ಬ ಅಭ್ಯರ್ಥಿ ನಾಮಪತ್ರ ಹಿಂತೆಗೆದುಕೊಂಡಾಗ ಮೊದಲು ನಮೂದಿಸಿದ ದಿನಾಂಕದಿಂದ ಮೂರನೇ ದಿನಕ್ಕೆ ಮೀರದಂತೆ, ಅದರ ಸರಿತಪ್ಪು ನೋಡಲು ಮುಂದಿನ ತಾರೀಖನ್ನು ಗೊತ್ತುಮಾಡಬೇಕು.

(iii) ಸರಿತಪ್ಪು ನೋಡಿದ ದಿನಾಂಕದಿಂದ ೨ ದಿನಕ್ಕೆ ಮೀರದಂತೆ ಅಭ್ಯರ್ಥಿಯು ನಾಮಪತ್ರ ಹಿಂದಕ್ಕೆ ಪಡೆಯಲು ಮುಂದಿನ ದಿನಾಂಕವನ್ನು ಗೊತ್ತುಮಾಡಬೇಕು. ಮತ್ತು

(iv) ನಾಮಪತ್ರ ಪಡೆದ ತಾರೀಖಿನಿಂದ ೨ ದಿನಕ್ಕೆ ಮೀರದಂತೆ ಅಗತ್ಯವಿದ್ದರೆ ಚುನಾವಣೆ ನಡೆಸಲು ಮುಂದಿನ ದಿನಾಂಕವನ್ನು ಗೊತ್ತುಮಾಡಬೇಕು.

ಪ್ರಸ್ತಾವ ಅಂಗೀಕೃತವಾಯಿತು.

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು ಪ್ರಸ್ತಾಪಿಸುತ್ತೇನೆ.

೫ನೇ ನಿಯಮದ (೨)ನೇ ಉಪನಿಯಮದಲ್ಲಿ 'ಸಂದರ್ಭಾನುಸಾರ' ಎಂಬ ಪದಗಳ ನಂತರ 'ದೆಹಲಿ ಮತ್ತು ಅಜ್‌ಮೀರ್' ಎಂಬ ಪದಗಳನ್ನು ಸೇರಿಬೇಕು.

"೫ನೇ ನಿಯಮದ (೫)ನೇ ಉಪನಿಯಮದಲ್ಲಿ 'ಭಾರತದ ಯಾವುದೇ ಭಾಗದಲ್ಲಿ' ಎಂಬ ಪದಗಳ ನಂತರ, 'ಈ ಸಭೆಯಲ್ಲಿ ಭಾಗವಹಿಸುತ್ತಿರುವ ಅಥವಾ ಭಾಗವಹಿಸಲು ಹಕ್ಕಿರುವ' ಎಂಬ ಪದಗಳನ್ನು ಸೇರಿಸಬೇಕು."

"೫ನೇ ನಿಯಮದ ೧೧ನೇ ಉಪನಿಯಮಕ್ಕೆ ಬದಲಾಗಿ ಈ ಕೆಳಗಿನದನ್ನು ಪ್ರಸ್ಥಾವಿಸಬೇಕು."

"ಕೆಳಕಂಡ ಪರಿಷ್ಕಾರಗಳಿಗೆ ಬದ್ಧವಾಗಿ ದೆಹಲಿ ಮತ್ತು ಅಜ್‌ಮೀರ್ ಮೇವಾರಾಗೆ ಸಂಬಂಧಿಸಿದಂತೆ, ಮುಂದೆ ಬರುವ ನಿಯಮಗಳು ಅನ್ವಯವಾಗುತ್ತದೆ. ಅವೆಂದರೆ–

ಪ್ರಾಂತೀಯ ಶಾಸನಸಭೆಗೆ ಬದಲಾಗಿ ಎ) ದೆಹಲಿ ಸಲಹಾಮಂಡಲಿ ಅಥವಾ 'ಅಜ್‌ಮೀರ್ ಮೇವಾರ ಸಲಹಾಮಂಡಲಿ' ಎಂಬ ಪದಗಳನ್ನು ಸಂದರ್ಭಾನುಸಾರ ಪ್ರತಿಸ್ಥಾಪಿಸಬೇಕು. ಮತ್ತು 'ಪ್ರಾಂತೀಯ ಶಾಸನಸಭೆಯ ಸಭಾಧ್ಯಕ್ಷರು' ಎಂಬ ಪದಗಳಿಗೆ ಬದಲಾಗಿ 'ದೆಹಲಿಯ ಅಥವಾ ಅಜ್‌ಮೀರ್ ಮೇವಾರಾ ಸಲಹಾಮಂಡಲಿಯ ಅಧ್ಯಕ್ಷರು' ಎಂಬ ಪದಗಳನ್ನು ಸಂದರ್ಭಾನುಸಾರ ಪ್ರತಿಸ್ಥಾಪಿಸಬೇಕು.

ಬಿ) ಚುನಾವಣೆಯಲ್ಲಿ ಪ್ರಾಂತೀಯ ಶಾಸನಸಭೆಯ ಒಂದು ವರ್ಗ ಭಾಗವಹಿಸುವ ಬದಲಾಗಿ, ಅಜ್‌ಮೀರ್ ಮೇವಾರಾ ಸಲಹಾಮಂಡಲಿಯ ಅಧಿಕಾರೇತರ ಸದಸ್ಯರು 'ಅದರಲ್ಲಿ ಭಾಗವಹಿಸುತ್ತಾರೆ.'

ಇವೆಲ್ಲ ಬದಲಾವಣೆಗಳ ಫಲವಾಗಿ ಆದದ್ದು ಇವಕ್ಕೆ ಇನ್ನೂ ಹೆಚ್ಚಿನ ವಿವರಣೆ ಅಗತ್ಯವಿಲ್ಲವೆಂದು ಭಾವಿಸುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ಶ್ರೀ ಸಂತಾನಮ್ ಅವರು ಪ್ರಸ್ತಾವಿಸಿದ ತಿದ್ದುಪಡಿಗಳನ್ನು ನಾನು ಅಂಗೀಕರಿಸುತ್ತೇನೆ. ದೆಹಲಿ ಮತ್ತು ಅಜ್‌ಮೀರ್, ಮೇವಾರದ ಪ್ರತಿನಿಧಿಗಳು, ಆಯಾ ಸಲಹಾಮಂಡಲಿಗಳಿಂದ ಚುನಾಯಿತರಾಗಬೇಕೆಂಬ ಭಾವನೆಗಳನ್ನು ಅವು ಹೊತ್ತು ತರುತ್ತವೆ.

**ಮಾನ್ಯ ಸಭಾಧ್ಯಕ್ಷರು :** ಪ್ರಸ್ತಾವವು ಹೀಗಿದೆ.

೫ನೇ ನಿಯಮದ (೨)ನೇ ಉಪನಿಯಮದಲ್ಲಿ 'ಸಂದರ್ಭಾನುಸಾರ' ಎಂಬ ಪದಗಳ ನಂತರ 'ದೆಹಲಿ, ಅಜ್‌ಮೀರ್ ಮತ್ತು ಮೇವಾರಾ' ಎಂಬ ಪದಗಳನ್ನು ಸೇರಿಸಬೇಕು.

"೫ನೇ ನಿಯಮದ (೫) ನೇ ಉಪನಿಯಮ 'ಭಾರತದ ಯಾವುದೇ ಭಾಗದಲ್ಲಿ' ಎಂಬ ಪದಗಳ ನಂತರ 'ಈ ಸಭೆಯಲ್ಲಿ ಭಾಗವಹಿಸುತ್ತಿರುವ ಅಥವಾ ಭಾಗವಹಿಸಲು ಹಕ್ಕಿರುವ' ಎಂಬ ಪದಗಳನ್ನು ಸೇರಿಸಬೇಕು"

೫ನೇ ನಿಯಮದ (೧೧)ನೇ ಉಪನಿಯಮಕ್ಕೆ ಬದಲಾಗಿ ಈ ಕೆಳಗಿನದನ್ನು ಪ್ರತಿಸ್ಥಾವಿಸಬೇಕು. ಕೆಳಕಂಡ ಪರಿಷ್ಕರಣಗಳಿಗೆ ಬದ್ಧವಾಗಿ ದೆಹಲಿ ಮತ್ತು ಅಜ್‌ಮೀರ್ ಮೇವಾರಾಗೆ ಸಂಬಂಧಿಸಿದಂತೆ ಮುಂದೆ ಬರುವ ನಿಯಮಗಳು ಅನ್ವಯವಾಗುತ್ತವೆ.

ಅವೆಂದರೆ :

'ಪ್ರಾಂತೀಯ ಶಾಸನಸಭೆಗೆ'ಗೆ ಬದಲಾಗಿ 'ದೆಹಲಿ ಸಲಹಾ ಮಂಡಳಿ ಅಥವಾ ಅಜ್‌ಮೀರ್ ಮೇವಾರ್' ಸಲಹಾಮಂಡಲಿ' ಎಂಬ ಪದಗಳನ್ನು ಸಂದರ್ಭಾನುಸಾರ ಪ್ರಸ್ಥಾವಿಸಬೇಕು. ಮತ್ತು 'ಪ್ರಾಂತೀಯ ಶಾಸನಸಭೆಯ ಸಭಾಧ್ಯಕ್ಷರು' ಎಂಬ ಪದಗಳಿಗೆ ಬದಲಾಗಿ 'ದೆಹಲಿಯ ಅಥವಾ ಅಜ್‌ಮೀರ್ ಮೇವಾರಾ ಸಲಹಾ ಮಂಡಲಿಯ ಅಧ್ಯಕ್ಷರು' ಎಂಬ ಪದಗಳನ್ನು ಸಂದರ್ಭಾನುಸಾರ ಪ್ರತಿಸ್ಥಾವಿಸಬೇಕು.

ಬಿ) ಚುನಾವಣೆಯಲ್ಲಿ ಪ್ರಾಂತೀಯ ಶಾಸನಸಭೆಯ ಒಂದು ವರ್ಗ ಭಾಗವಹಿಸುವ ಬದಲಾಗಿ ಅಜ್‌ಮೀರ್ ಮೇವಾರಾ ಸಲಹಾಮಂಡಲಿಯ ಅಧಿಕಾರೇತರ ಸದಸ್ಯರು 'ಅದರಲ್ಲಿ ಭಾಗವಹಿಸುತ್ತಾರೆ.'

ಪ್ರಸ್ತಾವ ಅಂಗೀಕೃತವಾಯಿತು.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಾನು ಪ್ರಸ್ತಾವಿಸುತ್ತೇನೆ.

"೫ನೇ ನಿಯಮದ (೬)ನೇ ಉಪನಿಯಮದ ನಂತರ ಕೆಳಕಂಡಂತೆ ಹೊಸ ನಿಯಮವನ್ನು ಸೇರಿಸಬೇಕು.

"(೬)ಎ ಮತದಾನ ನಡೆಯುವುದಾದರೆ ೬ನೇ ಉಪನಿಯಮದ 'ಬಿ' ಖಂಡದ (೪) ಖಂಡದಡಿಯಲ್ಲಿ ಪ್ರಾಂತೀಯ ಶಾಸನಸಭೆಯ ಸ್ಪೀಕರ್ ಸೂಕ್ತ ಅಧಿಸೂಚನೆಯ ಮೂಲಕ, ಮತದಾನ ಪ್ರಾರಂಭವಾಗುವ ವೇಳೆಯನ್ನು ಗೊತ್ತುಪಡಿಸಬೇಕು; ಮತ್ತು ನಿಗದಿತ ದಿನಾಂಕ, ಮತದಾನ ಮುಗಿಯುವ ವೇಳೆಯನ್ನು

ಮತದಾನ ನಡೆಯುವ ಸ್ಥಳವನ್ನೂ ಗೊತ್ತುಪಡಿಸಬೇಕು."

"೫ನೇ ನಿಯಮದ (೯)ನೇ ಉಪನಿಯಮದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

'ಯಾವುದೇ ನಿಯಮಗಳು ಅಥವಾ ವಿನಿಯಮಗಳು ಇರುವೆಡೆ, ಈ ಉಪನಿಯಮದ ಉದ್ದೇಶಗಳಿಗಾಗಿ ಅಗತ್ಯವಿರುವ ಮಾರ್ಪಾಟುಗಳನ್ನು ಅಧ್ಯಕ್ಷರ ಪೂರ್ವಭಾವಿ ಅನುಮೋದನೆಯೊಡನೆ ಮಾಡಲು ಸಂಬಂಧಪಟ್ಟ ಪ್ರಾಂತೀಯ ಸಭಾಧ್ಯಕ್ಷರು ಸಮರ್ಥರಾಗಿರುತ್ತಾರೆ."

ಇದು ಚುನಾವಣಾ ವ್ಯವಸ್ಥೆಯನ್ನು ಪೂರ್ಣಗೊಳಿಸುತ್ತದೆ. ಚುನಾವಣಾಧಿಕಾರಿಗೆ ಸಂಬಂಧಿಸಿದಂತೆ ೫ನೇ ನಿಯಮದಲ್ಲಿ ನಾವು ಒಂದು ಉಪಬಂಧವನ್ನು ಸೇರಿಸಿದ್ದೇವೆ. ಸಮಗ್ರ ಚುನಾವಣಾ ವ್ಯವಸ್ಥೆಯನ್ನು ಪೂರ್ಣಗೊಳಿಸಲು ಅಗತ್ಯಬಿದ್ದಲ್ಲಿ ಮತದಾನ ನಡೆಸಲು ಸ್ಪೀಕರ್ ಅವರಿಗೆ ಅಧಿಕಾರ ನೀಡುವುದು ಆವಶ್ಯಕ. ಜೊತೆಗೆ ಕೆಲವು ನಿಯಮಗಳಿಗೆ ಮಾರ್ಪಾಡು ಮಾಡುವ ಅಗತ್ಯ ಬೀಳಬಹುದು. ಅದು ಸಭೆಯ ಗಮನಕ್ಕೆ ಬರಲು ಸಾಧ್ಯವಾಗದಿರಬಹುದು. ಆದುದರಿಂದ, ಚುನಾವಣೆಯನ್ನು ಪೂರ್ಣಗೊಳಿಸಲು ಅಧ್ಯಕ್ಷರ ಪೂರ್ಣಾನುಮತಿಯಿಂದ, ಸಭಾಧ್ಯಕ್ಷರು ಅವರು ನಿಯಮಗಳನ್ನು ಮಾರ್ಪಾಟು ಮಾಡಲು ಅವರಿಗೆ ಅಧಿಕಾರ ನೀಡಬೇಕು.

**ಶ್ರೀ ಕೆ ಚಂಗಲರಾಯರೆಡ್ಡಿ** (ಮೈಸೂರು ರಾಜ್ಯ) : ಮಾನ್ಯರೆ, ಹಿಂದಿನ ತಿದ್ದುಪಡಿಯನ್ನು ಮಂಡಿಸಿದಾಗ, ಭಾರತೀಯ ರಾಜ್ಯದಲ್ಲಿ ಸ್ಥಾನವು ತೆರವಾದಾಗ, ಅದನ್ನು ಭರ್ತಿ ಮಾಡಲು, ಯಾವ ಅವಕಾಶ ಒದಗಿಸಲಾಗಿದೆ ಎಂಬ ಪ್ರಶ್ನೆಯನ್ನು ನಾನು ಎತ್ತಿದ್ದೆ. ಆ ಉಪಬಂಧವನ್ನು ನಿಯಮಗಳಲ್ಲಿ ನಿಗಮಿತಗೊಳಿಸಲಾಗಿದೆ ಎಂದು ಗೌರವಾನ್ವಿತ ಮಿತ್ರರೊಬ್ಬರು ತಿಳಿಸಿದರು. ನಾನು ಸುಮ್ಮನಾದೆ. ಈಗ ಉಪಚುನಾವಣೆಯ ಮೂಲಕ ಖಾಲಿ ಸ್ಥಾನ ಭರ್ತಿಮಾಡಲು ಪ್ರಕ್ರಿಯೆಯೊಂದನ್ನು ನಿರೂಪಿಸುವ ತಿದ್ದುಪಡಿಯನ್ನು ಮಂಡಿಸಲಾಗಿದೆ, ಸ್ಥೂಲವಾಗಿ ನಿಯಮಗಳನ್ನು ಅವಲೋಕಿಸಿದಾಗ ಭಾರತೀಯ ರಾಜ್ಯದಲ್ಲಿ ಸ್ಥಾನ ಖಾಲಿ ಬಿದ್ದರೆ ತುಂಬಲು ಅಂಥ ಯಾವುದೇ ಉಪಬಂಧವನ್ನು ಒದಗಿಸಿಲ್ಲವೆಂಬುದು ತಿಳಿದುಬರುತ್ತದೆ. ಆದುದರಿಂದ, ಪ್ರಕಿಯಾ ನಿಯಮಗಳಲ್ಲಿ ಸೂಕ್ತ ಉಪಬಂಧವನ್ನು ಸೇರಿಸಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ** : ಇದರಲ್ಲಿ ಒಂದಿಷ್ಟು ತಪ್ಪು ತಿಳಿವಳಿಕೆಯುಂಟಾಗಿದೆ. ಭಾರತೀಯ ರಾಜ್ಯಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ, ಅಧ್ಯಕ್ಷರು ಒಂದು ಸ್ಥಾಯಿ ಆದೇಶವನ್ನು ನೀಡಿದ್ದಾರೆ. ಅದರಂತೆ ಚುನಾವಣೆಗಳು ನಿಯಂತ್ರಿಸಲ್ಪಡುತ್ತವೆ.

"(೬)ನೇ ಉಪನಿಯಮ (ಬಿ) ಖಂಡದ (೪) ಉಪಖಂಡದ ಅಡಿಯಲ್ಲಿ ಗೊತ್ತುಪಡಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಪ್ರಾರಂಭವಾಗಿ ಮುಗಿಯುವುದು."

ಇವು ಮುಖ್ಯ ಕಮಿಷನರುಗಳ ಪ್ರಸ್ತಾವದ ಪ್ರಾಂತ್ಯಗಳಿಗೆ ಸಂಬಂಧಿಸಿವೆ.

**ಮಾನ್ಯ ಅಧ್ಯಕ್ಷರು** : ನಿಲುವಳಿ ಹೀಗಿದೆ :

"೫ನೇ ನಿಯಮದ (೬)ನೇ ಉಪನಿಯಮದ ನಂತರ ಕೆಳಕಂಡಂತೆ ಹೊಸ ನಿಯಮವನ್ನು ಸೇರಿಸಬೇಕು.

ಎ. ಮತದಾನ ನಡೆಯುವುದಾದರೆ, ಪ್ರಾಂತೀಯ ಶಾಸನಸಭೆಯ ಸಭಾಧ್ಯಕ್ಷರು ಸೂಕ್ತ ಅಧಿಸೂಚನೆಯ ಮೂಲಕ ಮತದಾನ ಪ್ರಾರಂಭವಾಗುವ ವೇಳೆಯನ್ನು ಗೊತ್ತುಪಡಿಸಬೇಕು. ಮತ್ತು ನಿಗದಿತ ದಿನಾಂಕ ಮತದಾನ ಮುಗಿಯುವ ವೇಳೆಯನ್ನು ಮತದಾನ ನಡೆಯುವ ಸ್ಥಳವನ್ನು ಗೊತ್ತುಪಡಿಸಬೇಕು.

೫ನೇ ನಿಯಮದ (೯)ನೇ ಉಪನಿಯಮದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು.

ಯಾವುದೇ ನಿಯಮಗಳು ಅಥವಾ ವಿನಿಯಮಗಳು ಇರುವಂತೆ ಈ ಉಪನಿಯಮಗಳ ಉದ್ದೇಶಗಳಿಗಾಗಿ, ಅಗತ್ಯವಿರುವ ಮಾರ್ಪಾಟುಗಳನ್ನು ಅಧ್ಯಕ್ಷರ ಪೂರ್ವಭಾವಿ ಅನುಮೋದನೆಯೊಡನೆ ಮಾಡಲು ಸಂಬಂಧ ಪಟ್ಟ ಪ್ರಾಂತೀಯ ಸಭಾಧ್ಯಕ್ಷರು ಸಮರ್ಥರಾಗಿರುತ್ತಾರೆ.

ಪ್ರಸ್ತಾವ ಅಂಗೀಕೃತವಾಯಿತು.

## ನಿಯಮ ೧೦

**ಶ್ರೀ ಕೆ.ಎಂ. ಮುನ್ಷಿ :** ಈಗ ನಾನು ೧೦ನೇ ನಿಯಮದ ಪ್ರಸ್ತಾವಕ್ಕೆ ಬರುತ್ತೇನೆ. ಅದು ವಿಭಾಗಗಳ ಸಭೆಯನ್ನು ಕುರಿತದ್ದು. ಇಡೀ ನಿಯಮವನ್ನು ಬಿಡಬೇಕೆಂದು ನಾನು ಪ್ರಸ್ತಾವಿಸುತ್ತೇನೆ

**ಶ್ರೀ ಶ್ರೀ ಪಕಾಶ :** ೫ ನೇ ನಿಯಮದ ನಂತರ ಹೊಸ ನಿಯಮವೊಂದನ್ನು ಸೇರಿಸುವಂತೆ ಈ ಬೆಳಗ್ಗೆ ನಾನು ತಿದ್ದುಪಡಿ ನೋಟೀಸನ್ನು ಕಳುಹಿಸಿದ್ದೆ.

**ಮಾನ್ಯ ಅಧ್ಯಕ್ಷರು :** ಈ ನೋಟೀಸು ಬೆಳಗ್ಗೆ ಸ್ವೀಕಾರವಾಯಿತೆಂದು ನನಗೆ ತಿಳಿದುಬರುತ್ತದೆ.

**ಶ್ರೀ ಶ್ರೀಪ್ರಕಾಶ :** ಈ ಮೊದಲು ಕಳುಹಿಸಲು ನನಗೆ ಸಾಧ್ಯವಾಗಲಿಲ್ಲ. ಇಂದು ಬೆಳಗ್ಗೆ ೧೦ ಘಂಟೆಗೆ ಕಳುಹಿಸಿದೆ.

**ಮಾನ್ಯ ಅಧ್ಯಕ್ಷರು :** ಅದು ತಡವಾಯಿತಲ್ಲವೆ?

**ಶ್ರೀ ಶ್ರೀಪ್ರಕಾಶ :** ನಾನಂದುಕೊಂಡಂತೆ ಇದೊಂದು ಮುಖ್ಯವಾದ ತಿದ್ದುಪಡಿ. ಇದು, ಈಗಿರುವ ನಿಯಮಗಳಲ್ಲಿ ಕಾಣಬರುವ ನ್ಯೂನತೆಯನ್ನು ನಿವಾರಿಸುತ್ತದೆ. ತಾವು ಅನುಮತಿಸಿದರೆ ನಾನು ಮಂಡಿಸುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ :** ನಾನೊಂದು ಕ್ರಿಯಾಲೋಪವೆತ್ತಬಹುದೆ? ೬೬ನೇ ನಿಯಮದಂತೆ ಹೊಸನಿಯಮ ನಾವಾವುದನ್ನೂ ಮಾಡಬಾರದು ಮತ್ತು ಈಗಿರುವ ನಿಯಮಗಳಲ್ಲಿ ಯಾವುದನ್ನು ಬದಲಾಯಿಸಬಾರದು. ಅಳಿಸಬಾರದು. ಇದಕ್ಕೆ ಅಪವಾದವೆಂದರೆ, ಹೊಸ ನಿಯಮವನ್ನು ಮಾಡುವ, ತಿದ್ದುಪಡಿ ಮಾಡುವ ಅಳಿಸುವ ಪ್ರಸ್ತಾವವನ್ನು ಸಂಚಾಲಕ ಸಮಿತಿಗೆ ತಿಳಿಸಬೇಕು. ಪ್ರಸ್ತಾವ ಸ್ವೀಕರಿಸಿದ ೨ ವಾರಗಳೊಳಗೆ ಸಮಿತಿಯು ಸದನಕ್ಕೆ ವರದಿ ಮಾಡುತ್ತದೆ."

**ಶ್ರೀ ಶ್ರೀಪ್ರಕಾಶ :** ನಾನು ತಮಗೆ ಬದ್ಧನಾಗಿದ್ದೇನೆ. ಒಂದು ನ್ಯೂನತೆಯನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದೇನಷ್ಟೆ. ಹೊಸ ಚುನಾವಣೆಗಳು ನಡೆಯುತ್ತಿವೆ. ಹೊರಗಣ ಅಧಿಕಾರವೊಂದು ೪ ಮತ್ತು ೫ನೇ ನಿಯಮಗಳನ್ನು ಉಲ್ಲಂಘಿಸಿದೆ. ಬಂಗಾಳ ಮತ್ತು ಪಂಜಾಬ್‌ನಲ್ಲಿ ನಡೆದ ಎಲ್ಲ ಚುನಾವಣೆಗಳೂ ಅಧಿಕಾರಾತೀತವಾಗುತ್ತವೆ.

**ಮಾನ್ಯ ಅಧ್ಯಕ್ಷರು :** ನಾವು ಇತರ ನಿಯಮಗಳನ್ನು ಪೂರ್ಣಗೊಳಿಸುವುವರೆಗೆ ತಾವು ದಯಮಾಡಿ ಕಾಯುತ್ತೀರಾ? ಈ ನಡುವೆ ಅದನ್ನ ನಾನು ಪರಿಶೀಲಿಸುತ್ತೇನೆ.

ಪ್ರಸ್ತಾವ:

"ನಿಯಮ ಅನ್ನು ಬಿಡಬೇಕು"

ಪ್ರಸ್ತಾವವು ಅಂಗಿಕೃತವಾಯಿತು.

## ನಿಯಮ ೧೧

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಾನು ಪ್ರಸ್ತಾವಿಸುತ್ತೇನೆ.

೧೧ನೇ ನಿಯಮದಲ್ಲಿ 'ಐವರು ಉಪಾಧ್ಯಕ್ಷರು' ಎಂಬ ಪದಗಳಿಗೆ ಬದಲಾಗಿ 'ಈರ್ವರು ಉಪಾಧ್ಯಕ್ಷರು' ಎಂಬ ಪದಗಳನ್ನು ಪ್ರತಿಸ್ಥಾಪಿಸಬೇಕು. ಈ ನಿಯಮದ ಕೊನೆಯಲ್ಲಿ ಕೆಳಕಂಡ ಪದಗಳನ್ನು ಪ್ರತಿಸ್ಥಾಪಿಸಬೇಕು.

"ಅಧ್ಯಕ್ಷರು ನಿಯಮಿಸಿದ ರೀತಿಯಲ್ಲಿ ಸಭೆಯ ಸದಸ್ಯರ ಪೈಕಿ ಅವರನ್ನು ಸಭೆಯು ಚುನಾಯಿಸುವುದು".

೧೧ನೇ ನಿಯಮಾನುಸಾರ ಐವರು ಉಪಾಧ್ಯಕ್ಷರ ಚುನಾವಣೆಗೆ ಅವಕಾಶವಿದೆ. ಇದಕ್ಕೂ ೧೨ನೇ ನಿಯಮಕ್ಕೂ ಪರಸ್ಪರ ಸಂಬಂಧವಿದೆ. ಅದರಂತೆ ಪ್ರತಿ ವಿಭಾಗದ ಅಧ್ಯಕ್ಷರೂ ಸಭೆಯ ಪದನಿಮಿತ್ತ ಉಪಾಧ್ಯಕ್ಷರಾಗಿರುತ್ತಾರೆ. ಈಗ ವಿಭಾಗಗಳೇ ಇಲ್ಲದಿರುವ ಕಾರಣ ಇವೆಲ್ಲ ಅನಗತ್ಯ. ಪರಿಣಾಮವಾಗಿ ಒಟ್ಟಾರೆ ಈರ್ವರು ಉಪಾಧ್ಯಕ್ಷರನ್ನು ಸಭೆಯಲ್ಲಿ ಚುನಾಯಿಸಲಿದೆ. ಮಾನ್ಯರೆ, ನಾನು ಮಂಡಿಸುತ್ತೇನೆ.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೧೨**

**ಶ್ರೀ ಕೆ.ಎಂ. ಮುನ್ಷಿ :** ೧೨ನೇ ನಿಯಮವನ್ನು ಬಿಡುವಂತೆ ಪ್ರಸ್ತಾವವನ್ನು ನಾನು ಪ್ರಸ್ತಾವಿಸುತ್ತಿದ್ದೇನೆ.
ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ನಿಯಮ ೧೩**

**ಶ್ರೀ ಕೆಂ.ಎಂ. ಮುನ್ಷಿ :** ಮಾನ್ಯರೆ, ನಾನು ಮಂಡಿಸುತ್ತೇನೆ

"೧೩ನೇ ನಿಯಮದಲ್ಲಿ '೧೨ (೧)ನೇ ನಿಯಮ' ಎಂಬ ಪದಗಳಿಗೆ ಬದಲಾಗಿ '೧೧ನೇ ನಿಯಮ' ಎಂಬ ಪದಗಳನ್ನು ಪ್ರತಿಸ್ಥಾಪಿಸಬೇಕು."

೧೩ನೇ ನಿಯಮದಲ್ಲಿ ಈರ್ವರು ಉಪಾಧ್ಯಕ್ಷರ ಚುನಾವಣೆಯನ್ನು ೧೨ (೧)ನೇ ನಿಯಮವೆಂದು ಉಲ್ಲೇಖಿಸಲಾಗಿದೆ.

ಪ್ರಸ್ತುತದಲ್ಲಿ ೧೨ನೇ ನಿಯಮವನ್ನು ಬಿಡಲಾಗಿದೆ. ಅದರೊಳಗೆ ಅಂಶವನ್ನು ೧೧ನೇ ನಿಯಮದಲ್ಲಿ ನಿಗಮಿತಗೊಳಿಸಲಾಗಿದೆ. ಅದರಂತೆ ೧೩ನೇ ನಿಯಮವನ್ನು ತಿದ್ದುಪಡಿ ಮಾಡಬೇಕು. ಮಾನ್ಯರೆ, ನಾನು ಮಂಡಿಸುತ್ತಿದ್ದೇನೆ.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೧೪**

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಾನು ಮಂಡಿಸುತ್ತೇನೆ.

೧೪ನೇ ನಿಯಮ

೧೪ನೇ ನಿಯಮದ ೨ನೇ ಉಪನಿಯಮದಲ್ಲಿ,

'ಓರ್ವ ಚುನಾಯಿತ' ಎಂಬ ಪದಗಳಿಗೆ ಬದಲಾಗಿ 'ಓರ್ವ' ಎಂದು ಪ್ರತಿಸ್ಥಾಪಿಸಬೇಕು. ಮತ್ತು ಇಡೀ 'ಒಟ್ಟಾರೆ' ಎಂಬ ಪದಗಳನ್ನು ಬಿಡಬೇಕು."

೧೪ನೇ ನಿಯಮದಂತೆ ಸಭೆಯ ಸದಸ್ಯನಾಗಿ ಉಳಿಯದ ಉಪಾಧ್ಯಕ್ಷರು ಆ ಸ್ಥಾನವನ್ನು ಕಳೆದು ಕೊಳ್ಳುತ್ತಾರೆ. "ಇದೇ ಒಟ್ಟಾರೆ ಸಭೆ, ಚುನಾಯಿತ ಉಪಾಧ್ಯಕ್ಷ ಸ್ಥಾನ ತೆರವಾದಾಗ, ಚುನಾವಣೆಯ ಮೂಲಕ ಆ ಸ್ಥಾನವನ್ನು ಭರ್ತಿ ಮಾಡಬೇಕು." ಈಗಾಗಲೆ ಮಾಡಲಾಗಿರುವ ಬದಲಾವಣೆಗಳಿಂದಾಗಿ, 'ಓರ್ವ ಚುನಾಯಿತ' ಎಂಬ ಪದಗಳ ಅಗತ್ಯವಿರುವುದಿಲ್ಲ. ಏಕೆಂದರೆ, ಈರ್ವರು ಉಪಾಧ್ಯಕ್ಷರೂ ಚುನಾಯಿತರೆ. ಜೊತೆಗೆ 'ಇಡೀ' 'ಒಟ್ಟಾರೆ' ಎಂಬ ಪದಗಳನ್ನು ಬಿಡಬೇಕು. ಏಕೆಂದರೆ, ಈರ್ವರು ಉಪಾಧ್ಯಕ್ಷರ ಸಮಗ್ರ ಚುನಾವಣೆ ಸದನದಿಂದ ನಡೆಯುತ್ತದೆ. ಮಾನ್ಯರೆ, ನಾನು ಮಂಡಿಸುತ್ತೇನೆ.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೧೭**

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಾನು ಮಂಡಿಸುತ್ತೇನೆ.

"೧೭ನೇ ನಿಯಮದ ೬ನೇ ಉಪನಿಯಮವನ್ನು ಬಿಡಬೇಕು. ಮತ್ತು ೮ನೇ ಉಪನಿಯಮದಲ್ಲಿ 'ಅಥವಾ ಜಂಟಿ ಕಾರ್ಯದರ್ಶಿ' ಎಂಬ ಪದವನ್ನು ಬಿಡಬೇಕು"

(೬)ನೇ ಉಪನಿಯಮ ವಿಭಾಗದ ಕಾರ್ಯದರ್ಶಿ ಸ್ಥಾನಕ್ಕೆ ಅವಕಾಶ ಕಲ್ಪಿಸುತ್ತದೆ. ಅದು ನಿರೂಪಿಸುವಂತೆ ವಿಭಾಗದ ಕಾರ್ಯದರ್ಶಿ ಸಭೆಯ ಜಂಟಿ ಕಾರ್ಯದಶಿಯಾಗಿರುತ್ತಾರೆ.

ಜಂಟಿ ಕಾರ್ಯದರ್ಶಿಗಳಿಲ್ಲದಿರುವ ಕಾರಣ, ಉಪನಿಯಮವನ್ನು ಬಿಡಬೇಕು. ಮುಂದೆ, 'ಜಂಟಿ ಕಾರ್ಯದರ್ಶಿ' ಎಂಬ ಪದಗಳು ೮ನೇ ಉಪನಿಯಮದಲ್ಲಿ ಸೇರಿರುವುದರಿಂದ ಈ ಪದಗಳನ್ನು ಬಿಡಬೇಕು. ಮಾನ್ಯರೆ, ನಾನು ಮಂಡಿಸುತ್ತೇನೆ.

ಪ್ರಸ್ತಾವವು ಅಂಗೀಕೃತವಾಯಿತು

**ನಿಲುವಳಿ ೧೮**

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಾನು ಮಂಡಿಸುತ್ತೇನೆ.

೮ನೇ ನಿಯಮದಲ್ಲಿ 'ವಿಭಾಗಗಳು ಮತ್ತು' ಎಂಬ ಪದಗಳನ್ನು ಬಿಡಬೇಕು.

ಪ್ರಸ್ತಾವವು ಅಂಗೀಕೃತವಾಯಿತು

ನಿಯಮ ೧೯

**ಶ್ರೀ ಕೆ.ಎಂ. ಮುನ್ಷಿ :** *[ಮಾನ್ಯರೆ, ನಾನು ಮಂಡಿಸುತ್ತೇನೆ.

೧೯ನೇ ನಿಯಮದಲ್ಲಿ 'ಉಪನಿಯಮ ೧(ಇ)' ಎಂಬುದನ್ನು ಬಿಡಬೇಕು; ಮತ್ತು ಉಪನಿಯಮ ೧(ಆ)ರಲ್ಲಿ 'ಅಥವಾ ವಿಭಾಗಗಳು' ಎಂಬ ಪದಗಳನ್ನು ಬಿಡಬೇಕು.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೨ಇ**

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಾನು ಮಂಡಿಸುತ್ತೇನೆ.

"೨ಇನೇ ನಿಯಮದ ನಂತರ ಕೆಳಕಂಡವನ್ನು ಎಂಬಂತೆ ಪ್ರಕ್ಷಿಪ್ತಗೊಳಿಸಬೇಕು. ೨ಇಎ (೧) ಒಂದು ಸಭೆ ಅಥವಾ ಅದರ ಸಮಿತಿಯೊಂದರಲ್ಲಿ ಕನಿಷ್ಠ ಇಡೀ ಸದಸ್ಯರ ಸಂಖ್ಯೆಯ ಮೂರನೆ ಒಂದರಷ್ಟು ಸದಸ್ಯರ ಉಪಸ್ಥಿತಿ ಇರಬೇಕು."

(ಇ), "ಓರ್ವ ಸದಸ್ಯರ ಬೇಡಿಕೆಯಂತೆ, ಗಣನೆ ಮಾಡಿದ ಮೇಲೆ ಅಧ್ಯಕ್ಷರಿಗೆ, ಇಡೀ ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟು ಉಪಸ್ಥಿತರಿಲ್ಲವೆಂದು ತಿಳಿದುಬಂದರೆ, ಹದಿನೈದು ನಿಮಿಷಕಾಲ ಸಭೆಯನ್ನೋ ಸಮಿತಿಯನ್ನೋ ಸಂದರ್ಭಾನುಸಾರ ಅವರು ಮುಂದೂಡಬೇಕು. ನಂತರವೂ ಕೋರಂಗೆ ಅಗತ್ಯವಿರುವ ಮೂರನೇ ಒಂದು ಭಾಗ ಸದಸ್ಯರು ಉಪಸ್ಥಿತರಿಲ್ಲವೆಂದು ತಿಳಿದುಬಂದಾಗ, ಅಂದಿನ ಸಭೆಯನ್ನೋ ಸಮಿತಿಯನ್ನೋ ಸಂದರ್ಭಾನುಸಾರ ಮರುದಿನಕ್ಕೆ ಅದು ಸಾಧಾರಣವಾಗಿ ಸಮಾವೇಶಗೊಳ್ಳುವಂತೆ ಮುಂದೂಡಬೇಕು."

ಕಳೆದ ಸಂದರ್ಭದಲ್ಲಿ ನಿಯಮಗಳ ಅನುಸಾರ ಕೋರಂ ಪ್ರಶ್ನೆ ನಿರ್ಧಾರವಾಗಿರಲಿಲ್ಲ. ಅದನ್ನು ಹೆಚ್ಚುವರಿ ನಿಯಮದಲ್ಲಿ ನಿಗಮಿತಗೊಳ್ಳಲು ಹಾಗೆಯೇ ನಿಡಲಾಗಿತ್ತು ಮಾನ್ಯರೆ, ನಾನು ಮಂಡಿಸುತ್ತೇನೆ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಪ್ರಸ್ತಾಪಿಸುತ್ತಿಲ್ಲ.

**ಶ್ರೀ ಶ್ರೀಪ್ರಕಾಶ :** ಶ್ರೀ ಕೆ.ಎಂ. ಮುನ್ಷಿಯವರು ಮಂಡಿಸಿದ ತಿದ್ದುಪಡಿಗಳು, ಮುಂದೆ ಮಿ। ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಗಳನ್ನು ಸಂಚಾಲನ ಸಮಿತಿಗೆ ತಿಳಿಸಲಾಗಿತ್ತೆ? ಅಥವಾ ಶ್ರೀ ಕೆ.ಎಂ ಮುನ್ಷಿ ಮತ್ತು ಶ್ರೀ ಸಂತಾನಂ ಅವರು ಸ್ವಇಚ್ಛೆಯಿಂದ ಇವುಗಳನ್ನು ಮಂಡಿಸುತ್ತಿದ್ದಾರೆಯೇ?

**ಶ್ರೀ ಕೆ.ಎಂ. ಮುನ್ಷಿ :** ಇವು ನನ್ನ ನಿಯಮಗಳಲ್ಲ. ಅವು ಸಂಚಾಲಕ ಸಮಿತಿಯ ವರದಿಗಳು. ನಾನು ಸಮಿತಿಯ ಪರವಾಗಿ ಮಂಡಿಸುತ್ತಿದ್ದೇನೆ.

**ಶ್ರೀ ಶ್ರೀಪ್ರಕಾಶ :** ಶ್ರೀ ಸಂತಾನಮ್ ಅವರ ತಿದ್ದುಪಡಿಗಳು?

**ಶ್ರೀ ಕೆ.ಎಂ ಮುನ್ಷಿ :** ಇವು ಸಂಚಾಲಕ ಸಮಿತಿಯು ಪ್ರಸ್ತಾಪಿಸಿದ ತಿದ್ದುಪಡಿಗಳು. ಆದುದರಿಂದ ಅವು ೬೭ನೇ ನಿಯಮದ ವ್ಯಾಪ್ತಿಗೆ ಒಳಪಡುವುದಿಲ್ಲ. ಅವು ಹೊಸ ನಿಯಮಗಳಲ್ಲ

**ಶ್ರೀ ಶ್ರೀಪ್ರಕಾಶ :** ಮಾನ್ಯರೆ, ಶ್ರೀ ಮುನ್ಷಿಯವರ ಸ್ಪಷ್ಟನೆ ತಮಗೆ ಸಮಾಧಾನಕರವಾಗಿದೆಯೋ ಇಲ್ಲವೋ ತಿಳಿಯದು. ಆದರೆ ನನಗೆ ಅವು ತೃಪ್ತಿ ತಂದಿಲ್ಲ. ತಮ್ಮ ಮುಂದಿರುವ ನನ್ನ ತಿದ್ದುಪಡಿಯನ್ನು ಮಂಡಿಸಲು ತಾವು ಅಂತೆಯೇ ಅನುಮತಿಸಬಹುದೆಂದು ತೋರುತ್ತೆ. ಅದು ಬಹಳ ಮುಖ್ಯವಾದ ತಿದ್ದುಪಡಿ ಎನಿಸುತ್ತೆ.

**ಸನ್ಮಾನ್ಯ ಅಧ್ಯಕ್ಷರು :** ಕೊನೆಯವರೆಗೂ ತಾಳಿಕೊಳ್ಳುವಂತೆ ಗೌರವಾನ್ವಿತ ಸದಸ್ಯರಿಗೆ ನಾನು ಕೇಳಿದ್ದೇನೆ. ಈ ಹಂತದಲ್ಲಿ ಅದನ್ನು ಮಂಡಿಸುವ ಪ್ರಶ್ನೆ ಏಳುವುದಿಲ್ಲ.

**ಶ್ರೀ ಶ್ರೀಪ್ರಕಾಶ :** ಆಗಾಗ್ಗೆ ಸಾಂದರ್ಭಿಕವಾಗಿ ನೆನಪು ಮಾಡಿದರೆ ಉಪಯೋಗವಾದೀತು. (ನಗೆ).

**ಶ್ರೀ ಜಸ್ಪತ್ ರಾಯ್ ಕಪೂರ್** (ಸಂ. ಪ್ರಾಂ. : ಸಾಮಾನ್ಯ) : ಮಾನ್ಯರೆ, ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಶ್ರೀ ಆರ್.ಕೆ. ಸಿಧ್ವಾ** (ಸಂ. ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : ಮಾನ್ಯರೆ, ನಾನೂ ಸಹ ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಸನ್ಮಾನ್ಯ ಅಧ್ಯಕ್ಷರು :** ಹಾಗಿದ್ದರೆ ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ:

"೨೩ನೇ ನಿಯಮದ ನಂತರ ಕೆಳಕಂಡದ್ದನ್ನು ೨೩ (ಎ) ಎಂಬಂತೆ ಸೇರಿಸಬೇಕು."

೨೩ಎ ೧. ಒಂದು ಸಭೆ ಅಥವಾ ಸಮಿತಿಯೊಂದರಲ್ಲಿ ಕನಿಷ್ಠ ಇಡೀ ಸದಸ್ಯರ ಸಂಖ್ಯೆಯ ಮೂರನೇ ಒಂದು ಭಾಗದಷ್ಟು ಸದಸ್ಯರ ಉಪಸ್ಥಿತಿ ಇರಬೇಕು."

೨. ಓರ್ವ ಸದಸ್ಯರ ಬೇಡಿಕೆಯಂತೆ ಗಣನೆ ಮಾಡಿದ ಮೇಲೆ ಅಧ್ಯಕ್ಷರಿಗೆ ಇಡೀ ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟು ಉಪಸ್ಥಿತರಿಲ್ಲವೆಂದು ತಿಳಿದುಬಂದರೆ, ಹದಿನೈದು ನಿಮಿಷಗಳ ಕಾಲ ಸಭೆಯನ್ನೋ ಸಮಿತಿಯನ್ನೋ ಸಂದರ್ಭಾನುಸಾರ ಅವರು ಮುಂದೂಡಬೇಕು. ನಂತರವೂ ಕೋರಂಗೆ ಅಗತ್ಯವಿರುವ ಮೂರನೇ ಒಂದು ಭಾಗ ಸದಸ್ಯರು ಉಪಸ್ಥಿತರಿಲ್ಲವೆಂದು ತಿಳಿದು ಬಂದಾಗ ಸಭೆಯನ್ನೋ ಸಮಿತಿಯನ್ನೋ ಸಂದರ್ಭಾನುಸಾರ, ಅದು ಸಾಧಾರಣವಾಗಿ ಸಮಾವೇಶಗೊಳ್ಳುವಂತೆ ಮುಂದೂಡಬೇಕು.

ಪ್ರಸ್ತಾವವು ಅಂಗೀಕೃತವಾಯಿತು.

## ನಿಯಮ ೩೧

**ಶ್ರೀ ಕೆ.ಎಂ. ಮುನ್ಷಿ :** ಈಗ ೩೧ನೇ ನಿಯಮ ನಾನು ಮಂಡಿಸುತ್ತೇನೆ.

"ಈ ನಿಯಮದ ೩ನೇ ಉಪನಿಯಮವನ್ನು ಬಿಡಬೇಕು."

೩೧ನೇ ನಿಯಮ ಹೀಗಿದೆ:

"(೧) ಸಭೆಯು ತೀರ್ಮಾನಿಸಬೇಕಾದ ವಿಷಯವನ್ನು ಅಧ್ಯಕ್ಷರು ಪ್ರಶ್ನೆಯ ರೂಪದಲ್ಲಿ ಸಭೆಯ ಮುಂದಿಡಬೇಕು.

(೨) ಕೇವಲ ಸಮಸಂಖ್ಯೆಯಲ್ಲಿ ಮತ ಚಲಾವಣೆಯಾದಾಗ, ಆ ಬಗ್ಗೆ ಈ ಸಭೆಯು ನಿರ್ಧಾರ ತೆಗೆದುಕೊಳ್ಳಬೇಕಾಗಿ ಬಂದಾಗ ಅಧ್ಯಕ್ಷರು ತಮ್ಮ ಮತವನ್ನು ಚಲಾಯಿಸಬೇಕು.

(೩) ಹೇಳಿಕೆಯ ೧೯(೭)ನೇ ಖಂಡಿಕೆಯಲ್ಲಿ ಉಲ್ಲೇಖಿತವಾದ, ವಿಷಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಆ ಖಂಡಿಕೆಯಲ್ಲಿ ನಿರೂಪಿತವಾದಂತೆ ಬಗೆಹರಿಯಬೇಕು."

ಮಾನ್ಯರೆ, ೩ನೇ ಉಪನಿಯಮ ಪರಿಣಾಮಕಾರಿಯಾಗಿಲ್ಲ ಅದು ಅರ್ಥಹೀನ. ಆದುದರಿಂದ, ಅದನ್ನು ಬಿಡುವಂತೆ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಎಂ.ಎಸ್. ಅಣೆ** (ದಕ್ಷಿಣ ರಾಜ್ಯಗಳು) : ಹೇಳಿಕೆಯ ೧೯ (೭)ನೇ ಖಂಡಿಕೆಯನ್ನು ಗೌರವಾನ್ವಿತ ಪ್ರಸ್ತಾವಕರು ಓದುವರೆ?

**ಶ್ರೀ ಕೆ.ಎಂ. ಮುನ್ಷಿ :** ಅದು ಹೀಗಿದೆ :

"ಒಕ್ಕೂಟ ಸಂವಿಧಾನ ರಚನಾಸಭೆಯ ನಿರ್ಣಯದಲ್ಲಿ ಮೇಲೆ ತಿಳಿಸಿದಂತೆ ೧೫ನೇ ಖಂಡಿಕೆಯ

ಉಪಬಂಧಗಳ ಬಗ್ಗೆ ಭಿನ್ನಾಭಿಪ್ರಾಯಗಳನ್ನು ವಿವಾದಗಳನ್ನು ಪ್ರಸ್ತಾಪಿಸಲು, ಸಭೆಯಲ್ಲಿ ಬಹುಮತವಿರಬೇಕು. ಮತ್ತು ಎರಡು ಮುಖ್ಯ ಕೋಮುಗಳ ಪ್ರತಿಯೊಂದು ಕೋಮಿನಿಂದಲೂ ಮತದಾನ ನಡೆಸಬೇಕು. ಯಾವ ನಿರ್ಣಯಗಳು ಪ್ರಧಾನ ಕೋಮುವಿವಾದಗಳು ಇದ್ದರೆ ಪ್ರಸ್ತಾವಿಸುತ್ತವೆ ಎಂಬುದನ್ನು ಸಭೆಯ ಅಧ್ಯಕ್ಷರು ತೀರ್ಮಾನಿಸಬೇಕು. ಎರಡೂ ಪ್ರಧಾನ ಕೋಮುಗಳಲ್ಲಿ ಯಾವುದಾದರೊಂದರ ಪ್ರತಿನಿಧಿಗಳು ಕೋರಿದರೆ, ತೀರ್ಮಾನ ಕೊಡುವ ಮೊದಲು ಫೆಡರಲ್ ನ್ಯಾಯಾಲಯದ ಸಲಹೆ ಪಡೆಯಬೇಕು.

ಇಂದೊಂದು ಜೋಡುಬಹುಮತ ಖಂಡ. ನಾನಾಗಲೆ ಹೇಳಿದಂತೆ ಇದು ತನ್ನ ಪರಿಣಾಮವನ್ನು ಕಳೆದುಕೊಂಡು ನಿಷ್ಫಲವಾಗಿದೆ.

**ಮಾನ್ಯ ಅಧ್ಯಕ್ಷರು** : ಪ್ರಸ್ತಾವ ಹೀಗಿದೆ:

"೩ನೇ ನಿಯಮದ (೩)ನೇ ಉಪನಿಯಮವನ್ನು ಬಿಡಬೇಕು"

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೩೫**

**ಶ್ರೀ ಕೆ.ಎಂ. ಮುನ್ಷಿ** : ಮಾನ್ಯರೆ, ನಾನು ಮಂಡಿಸುತ್ತೇನೆ

"೩೫ನೇ ನಿಯಮಕ್ಕೆ ಇರುವ ಎರಡು ಪರಂತುಕಗಳನ್ನು ಬಿಡಬೇಕು"

ನಿಯಮ ಮತ್ತು ಪರಂತುಕಗಳು ಹೀಗಿವೆ:

"ಸಭೆಯ ವ್ಯವಹಾರಗಳ ಸಂಚಾಲನೆ ಅಥವಾ ಎಲ್ಲ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಅಧ್ಯಕ್ಷರ ತೀರ್ಮಾನವೇ ಅಂತಿಮ."

"ಪರಂತು ಒಂದು ವೇಳೆ ಪ್ರಧಾನ ಕೋಮುವಿವಾದವೆಂದು ಭಾವಿಸಲಾದ ವಿವಾದದ ಬಗ್ಗೆ ಪ್ರಸ್ತಾವವು ಪ್ರಸ್ತಾಪಿಸಲ್ಪಟ್ಟಾಗ, ಪ್ರಧಾನ ಕೋಮುಗಳಲ್ಲಿ ಯಾವುದಾದರೊಂದರ ಕೋರಿಕೆಯ ಮೇರೆಗೆ, ಅಧ್ಯಕ್ಷರು ತೀರ್ಮಾನಕೊಡುವ ಮೊದಲು ಫೆಡರಲ್ ನ್ಯಾಯಾಲಯದ ಸಲಹೆ ಪಡೆಯಬೇಕು. "ಪರಂತು ಒಕ್ಕೂಟದ ಸಂವಿಧಾನ ರಚನಾಸಭೆಯ ಅಧಿಕಾರ ಹಾಗೂ ಪ್ರಕಾರ್ಯಗಳ ವ್ಯಾಪ್ತಿಗೆ ಒಳಪಡುವಂಥ ವಿಷಯಗಳನ್ನು ಅಥವಾ ಹೇಳಿಕೆಯ ೨೦ನೇ ಖಂಡಿಕೆಯಲ್ಲಿ ಉಲ್ಲೇಖಿತವಾದಂತೆ, ಸಲಹಾ ಸಮಿತಿ ನೀಡಿರುವ ವರದಿಯ ಬಗ್ಗೆ ಒಕ್ಕೂಟದ ಸಂವಿಧಾನಸಭೆ ತೆಗೆದುಕೊಂಡ ಯಾವುದೇ ನಿರ್ಧಾರಕ್ಕೆ ಹೊರತಾದ ವಿಷಯಗಳನ್ನು ಯಾವ ಕಲಮೂ ವರ್ಗವೂ ಪ್ರಸ್ತಾವಿಸುವಂತಿಲ್ಲ."

ನಾನು ನಿನ್ನೆ ನೀಡಿದ ಕಾರಣಗಳಿಂದಾಗಿ ಈ ಪರಂತುಕಗಳು ಸಂಪೂರ್ಣ ನಿಷ್ಪ್ರಯೋಜಕವಾಗುತ್ತವೆ.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೩೬**

**ಶ್ರೀ ಕೆ.ಎಂ. ಮುನ್ಷಿ** : ಈಗ ೩೬ನೇ ನಿಯಮ. ಮೊದಲು ನಿಯಮದ ಮೊದಲನೇ ಸಾಲಿನಲ್ಲಿರುವ ಪ್ರತ್ಯೇಕ ಪದವನ್ನು ಬಿಡಬೇಕು. ಆ ವಾಕ್ಯ ಹೀಗಿದೆ– ಹೇಳಿಕೆಯ ೧೯ ಮತ್ತು ೨೦ನೇ ಖಂಡಿಕೆಗಳಲ್ಲಿ ಉಲ್ಲೇಖಿಸಿದಂತೆ ಪ್ರಸ್ತಾವಗಳನ್ನು ಪ್ರಾರಂಭಿಸಿ, ಪರಿಶೀಲಿಸುವುದು.... ಸಲಹಾ ಸಮಿತಿಯ ಪ್ರತ್ಯೇಕ ಆ ಹೇಳಿಕೆ ಈಗಿಲ್ಲವಾದುದರಿಂದ ಈ ಹೇಳಿಕೆ ಅರ್ಥಹೀನವಾಗುತ್ತದೆ.

ನಂತರ 'ಒಕ್ಕೂಟದ ಘಟಕ' ಎಂಬ ಪದಗಳನ್ನು ಈ ನಿಯಮದಲ್ಲಿ ಕಂಡೆಡೆಯೆಲ್ಲ ಬಿಡಬೇಕು. ಜೊತೆಗೆ ಮತ್ತು ವರ್ಗಗಳಿಗೆ ಬದ್ಧವಾಗಿರಬೇಕು ಎಂಬ ಪದಗಳನ್ನು ಬಿಡಬೇಕು.

**ಮಾನ್ಯ ಅಧ್ಯಕ್ಷರು** : ಕೇವಲ "ಒಕ್ಕೂಟದ ಘಟಕ" ಎಂಬಕ್ಕೆ ಪದಗಳನ್ನು ಬಿಡುವಿರಾ?

**ಶ್ರೀ ಕೆ.ಎಂ. ಮುನ್ಷಿ** : ಹೌದು ಮಾನ್ಯರೆ, 'ಸಭೆ' ಎಂಬ ಪದ ಹಾಗೇ ಉಳಿಯುತ್ತದೆ.

**ಮಾನ್ಯ ಅಧ್ಯಕ್ಷರು** : ಪ್ರಸ್ತಾವ ಹೀಗಿದೆ: ೩೬ನೇ ನಿಯಮದಲ್ಲಿ

(೧) 'ಪ್ರತ್ಯೇಕ' ಎಂಬ ಪದವನ್ನು

(೨) 'ಒಕ್ಕೂಟದ ಘಟಕ' ಎಂಬ ಪದಗಳನ್ನು ಕಂಡಲ್ಲೆಲ್ಲ ಮತ್ತು 'ವರ್ಗಗಳಿಗೆ ಬದ್ಧವಾಗಿರುತ್ತದೆ' ಎಂಬ ಪದಗಳನ್ನು ಬಿಡಬೇಕು.

ಪ್ರಸ್ತಾವವು ಅಂಗೀಕೃತವಾಯಿತು

**ನಿಯಮ ೪೧**

**ಶ್ರೀ ಕೆ. ಎಂ ಮುನ್ಷಿ** : ಮಾನ್ಯರೆ, ೪೧ನೇ ನಿಯಮ ಸಂಚಾಲಕ ಸಮಿತಿಯ ಪ್ರಕಾರ್ಯಗಳನ್ನು ತಿಳಿಸುತ್ತದೆ. ೧ ನೇ ಉಪನಿಯಮ ಹೀಗಿದೆ: 'ಸಾಮಾನ್ಯ ಸಂಪರ್ಕ ಘಟಕದಂತೆ ಸಭೆ ಮತ್ತು ವರ್ಗಗಳ ನಡುವೆ ವರ್ತಿಸುತ್ತದೆ. ವರ್ಗಗಳಲ್ಲಿ ಪರಸ್ಪರ ಸಂಪರ್ಕ ಕಲ್ಪಿಸುತ್ತದೆ, ಅಂತೆಯೇ ಸಮಿತಿಗಳಲ್ಲಿ ಪರಸ್ಪರ ಸಂಪರ್ಕ ಕಲ್ಪಿಸುತ್ತದೆ. ಜೊತೆಗೆ ಅಧ್ಯಕ್ಷರು ಮತ್ತು ಸಭೆಯ ನಡುವೆ ಸಂಬಂಧವೇರ್ಪಡಿಸುತ್ತದೆ' ಉಪನಿಯಮ ೧(ಸಿ)ಯಲ್ಲಿ 'ಸಭೆ ಮತ್ತು ವರ್ಗಗಳು, ವರ್ಗಗಳಲ್ಲಿ ಪರಸ್ಪರ' ಎಂಬ ಪದಗಳನ್ನು ಬಿಡಬೇಕು. ಈ ಪದಗಳು ಇನ್ನು ಮುಂದೆ ಅಗತ್ಯವಿರುವುದಿಲ್ಲ.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೪೨**

**ಶ್ರೀ ಕೆ.ಎಂ. ಮುನ್ಷಿ** : ಈ ನಿಯಮದ ೧ (ಬಿ) ಉಪನಿಯಮದಲ್ಲಿ 'ಐದು' ಎಂಬ ಪದಕ್ಕೆ ಬದಲಾಗಿ 'ಎರಡು' ಎಂಬ ಪದವನ್ನು ಪ್ರತಿಸ್ಥಾಪಿಸಬೇಕು. ಈಗ ಇಬ್ಬರೆ ಉಪಾಧ್ಯಕ್ಷರು ಇರುವುದರಿಂದ ಈ ಬದಲಾವಣೆ ಅಗತ್ಯವೆನಿಸುತ್ತದೆ.

**ಶ್ರೀ ಪಂಡಿತ್ ಹೃದಯನಾಥ್ ಕುಂಜ್ರು** (ಸಂ. ಪ್ರಾಂ. : ಸಾಮಾನ್ಯ) : ತಿದ್ದುಪಡಿಯಾದ ೪೧ (೧) (ಸಿ) ನಿಯಮ ಹೇಗಿರುತ್ತೆಂದು ಶ್ರೀ ಮುನ್ಷಿ ತಿಳಿಸುವರೆ?

**ಶ್ರೀ ಕೆ.ಎಂ. ಮುನ್ಷಿ** : ಸಂಚಾಲಕ ಸಮಿತಿಯು, ಸಮಿತಿಗಳ ನಡುವೆ, ಪರಸ್ಪರ ಸಂಪರ್ಕ ಘಟಕವಾಗಿ, ಅಂತೆಯೇ ಅಧ್ಯಕ್ಷರು ಮತ್ತು ಸಭೆಯ ಯಾವುದೇ ವರ್ಗದೊಡನೆ ಸಂಪರ್ಕ ಘಟಕವಾಗಿ ವರ್ತಿಸುತ್ತದೆ.

**ಶ್ರೀ ಪಂಡಿತ್ ಹೃದಯನಾಥ್ ಕುಂಜ್ರು** : ಸಭೆ ಮತ್ತು ಸಮಿತಿಗಳ ನಡುವಣ ಸಂಪರ್ಕ?

**ಶ್ರೀ ಕೆ.ಎಂ. ಮುನ್ಷಿ** : ಇಲ್ಲ, ಸಮಿತಿಗಳಲ್ಲಿ ಪರಸ್ಪರ ಸಂಪರ್ಕವಿರುತ್ತದೆ.

**ಪಂಡಿತ್ ಗೋವಿಂದ್ ಮಾಳವಿಯಾ** (ಸಂ. ಪ್ರಾಂ. : ಸಾಮಾನ್ಯ) : ಮಾನ್ಯರೆ, "ಅಧ್ಯಕ್ಷರು ಮತ್ತು ಸಭೆಯ ಯಾವುದೇ ವರ್ಗದೊಡನೆ ಸಂಪರ್ಕ" ಎಂಬುದರ ಅರ್ಥವೇನೆಂದು ಶ್ರೀ ಮುನ್ಷಿ ತಿಳಿಸುವರೆ? ನನಗೆ "ಸಮಿತಿಗಳ ನಡುವೆ ಪರಸ್ಪರ" ಎಂಬುದು ಅರ್ಥವಾಗುತ್ತದೆ.

**ಶ್ರೀ ಕೆ.ಎಂ. ಮುನ್ಷಿ** : ಅದು ನನ್ನ ಜವಾಬ್ದಾರಿಯಲ್ಲ.

**ಮಾನ್ಯ ಅಧ್ಯಕ್ಷರು** : ಕ್ಷಮಿಸಿ, ವ್ಯಾಖ್ಯಾನದ ಪ್ರಶ್ನೆ ತಡವಾಗಿ ಬಂದಿದೆ. ಅದರ ಅಗತ್ಯಬಿದ್ದಾಗ ಮಾಡೋಣಂತೆ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** (ಬಿಹಾರ್ : ಮುಸ್ಲಿಮ್) : ಯಾವುದೇ ಅಸಂಗತ ವ್ಯಕ್ತವಾದರೆ, ಸಭೆಯ ಸಕ್ಷಮತೆಯಿಂದ, ಅಗತ್ಯ, ಆನುಷಂಗಿಕ ಬದಲಾವಣೆಯನ್ನು ಮಾಡಬಹುದು.

**ಸನ್ಮಾನ್ಯ ಅಧ್ಯಕ್ಷರು** : ಈಗ ಪ್ರಸ್ತಾಪಿಸಿರುವ ತಿದ್ದುಪಡಿಯಿಂದ ಅದು ಉದ್ಭವಿಸಲಾರದು. ಶ್ರೀ ಮುನ್ಷಿಯವರು ೪೨ನೇ ನಿಯಮಕ್ಕೆ ತಿದ್ದುಪಡಿ ತಂದಿದ್ದಾರೆ. ೧ನೇ ಉಪನಿಯಮದ (ಬಿ) ಖಂಡದಲ್ಲಿ 'ಐದು' ಎಂಬ ಪದಕ್ಕೆ 'ಎರಡು' ಎಂಬ ಪದವನ್ನು ಪ್ರತಿಸ್ಥಾಪಿಸಬೇಕು.

"ಪ್ರಸ್ತಾವವು ಅಂಗೀಕೃತವಾಯಿತು."

**ನಿಯಮ ೪೫**

**ಶ್ರೀ ಕೆ. ಎಂ. ಮುನ್ಷಿ :** ಮುಂದಿನದು ೪೫ನೇ ನಿಯಮ. ಉಪನಿಯಮ ೨ರಲ್ಲಿ 'ಪ್ರತಿಯೋರ್ವ ರಾಜ್ಯಪಾಲರ ಪ್ರಾಂತ್ಯವನ್ನು ಪ್ರತಿನಿಧಿಸುವ ಓರ್ವರು' ಎಂಬ ಪದಗಳನ್ನು ಬಿಡಬೇಕು. ಇದು ಕೂಡ ಆನುಷಂಗಿಕ. ೨ನೇ ಉಪನಿಯಮ ಹೀಗಿದೆ: ಇದು ಸದನ ಸಮಿತಿ ಕುರಿತದ್ದು. 'ಸಮಿತಿಯಲ್ಲಿ ಹನ್ನೊಂದು ಸದಸ್ಯರಿರುತ್ತಾರೆ. ಅವರು ಸಭೆಯಿಂದ ಚುನಾಯಿಸಲ್ಪಡುತ್ತಾರೆ. ಅವರಲ್ಲಿ ಒಬ್ಬರು ಅಧ್ಯಕ್ಷರು ನಿಯಮಿಸಿದ ರೀತಿಯಲ್ಲಿ ಪ್ರತಿ ರಾಜ್ಯಪಾಲರ ಪ್ರಾಂತ್ಯವನ್ನು ಪ್ರತಿನಿಧಿಸುತ್ತಾರೆ."

ಪ್ರಸ್ತಾವವು ಅಂಗೀಕೃತವಾಯಿತು

**ನಿಯಮ ೪೬**

**ಶ್ರೀ ಕೆ.ಎಂ. ಮುನ್ಷಿ :** ಮುಂದಿನ ತಿದ್ದುಪಡಿ ೪೬ನೇ ನಿಯಮಕ್ಕೆ ಸಂಬಂಧಿಸಿದೆ. ಅದು ಸಮಿತಿಗಳನ್ನು ಕುರಿತದ್ದು.

"ಸಮಿತಿಯ ವ್ಯವಹಾರಕ್ಕೆ ಅನ್ವಯವಾಗುವಂತೆ 'ವರ್ಗ ಎಂಬುದು ಸಭೆ ಅಥವಾ ವರ್ಗಕ್ಕೆ ಸಂಬಂಧಿಸಿದುದು' ಎಂಬ ಪದಗಳನ್ನು ಬಿಡಬೇಕು." ಎಂದು ತಿದ್ದುಪಡಿಯನ್ನು ಮಂಡಿಸುತ್ತೇನೆ.

ಇದು ಕೂಡ ಆನುಷಂಗಿಕ.

ಪ್ರಸ್ತಾವವು ಅಂಗೀಕೃತವಾಯಿತು

**ನಿಯಮ ೪೭**

**ಶ್ರೀ ಕೆ.ಎಂ. ಮುನ್ಷಿ :** ೪೭ನೇ ನಿಯಮಕ್ಕೆ ಮತ್ತು ಯಾವುದೇ ವರ್ಗದ ಕಾರ್ಯದರ್ಶಿ ಇತ್ಯಾದಿ ಪದಗಳಿಂದ ಪ್ರಾರಂಭವಾಗುವ ವಾಕ್ಯವನ್ನು ಕೊನೆಯವರೆಗೆ ಬಿಡಬೇಕು.

ಇದು ಸಹ ಆನುಷಂಗಿಕ.

ಪ್ರಸ್ತಾವವು ಅಂಗೀಕೃತವಾಯಿತು

**ನಿಯಮ ೪೮**

**ಶ್ರೀ ಕೆ.ಎಂ. ಸಂತಾನಮ್ :** ಮಾನ್ಯರೆ, ೪೮ನೇ ನಿಯಮದಲ್ಲಿ ಆಗ್ರಹಪೂರ್ವಕವಾಗಿ 'ಬೇಕು' ಎಂಬ ಪದಕ್ಕೆ ಬದಲು 'ಬಹುದು' ಎಂಬ, ನಯವಾದ ಪದವನ್ನು ಪ್ರತಿಸ್ಥಾಪಿಸಬೇಕು. ಇವತ್ತು ಸದನ ಅಂಗೀಕರಿಸಿರುವ ಕೋರಂಗೆ ಸಂಬಂಧಿಸಿದ ತಿದ್ದುಪಡಿಗೆ ಇದು ಒಂದು ಅನುಷಂಗಿಕ ತಿದ್ದುಪಡಿ, ಈಗಿನಂತೆ ನಿಯಮ ಈ ರೀತಿ ಇದೆ:

"ಸಮಿತಿಯ ಸಭೆಗೆ ಸಮಿತಿಯ ರಚನೆಯನ್ನು ನಿರ್ಧರಿಸುವ ಪ್ರಸ್ತಾವವು ಸಮಿತಿಯ ಸಭೆಗೆ ಕೋರಂ ಎಷ್ಟಿರಬೇಕೆಂಬುದನ್ನು ಹೇಳಬೇಕು."

ನಮಗೆ ಕೋರಂ ನಿಗದಿಪಡಿಸುವ ನಿಯಮ ಇರಲಿಲ್ಲ. ಹಾಗಾಗಿ ಕೋರಂ ಬಗ್ಗೆ ತಿಳಿಸುವುದು ನಮ್ಮ ಹೊಣೆಯಾಗಿತ್ತು. ಈಗ ನಮ್ಮ ಬಳಿ ಅದಕ್ಕೆಂದೇ ಒಂದು ನಿಯಮ ಸಿದ್ಧವಿದೆ. ಅದು ತಿಳಿಸುವಂತೆ ಮೂರನೇ ಒಂದು ಭಾಗ ಹಾಜರಿ ಇರಬೇಕು. ಆದುದರಿಂದ ನನ್ನ ಹೊಣೆಗಾರಿಕೆ ಇನ್ನು ಅಗತ್ಯವಿಲ್ಲ. ನನ್ನ ನಿಲುವಳಿಯೆಂದರೆ ಸಮಿತಿಯ ರಚನೆಯನ್ನು ನಿರ್ಧರಿಸುವ ಪ್ರಸ್ತಾವವು, ಸಮಿತಿಯ ಕೋರಂ ಎಷ್ಟಿರಬೇಕೆಂದನ್ನು ತಿಳಿಸಬೇಕು. ಕೋರಂಗೆ ಈಗಾಗಲೆ ಅವಕಾಶವೊದಗಿಸಲಾಗಿದೆ.

**ಶ್ರೀ ಶ್ರೀಪ್ರಕಾಶ :** ೬೬ನೇ ನಿಯಮದತ್ತ ತಮ್ಮ ಗಮನಸೆಳೆಯಬಹುದೆ ಮಾನ್ಯರೆ? ಇದನ್ನು ಸಂಚಾಲಕ ಸಮಿತಿಗೆ ಅನ್ವಯಿಸಲಾಗಿದೆಯೆ?

**ಮಾನ್ಯ ಅಧ್ಯಕ್ಷರು :** ಇದಕ್ಕೆ ಸಂಚಾಲಕ ಸಮಿತಿಯ ಸಲಹೆ ಪಡೆದಂತೆ ತೋರುವುದಿಲ್ಲ. ಆದರೆ ಈ ತಿದ್ದುಪಡಿಯನ್ನು ನೀವಾಗಲೇ ಅನುಮೋದಿಸಿರುವ ಹಿಂದಿನ ಉಪಬಂಧದ ನಂತರ ಬಂದಿರುವುದು. ಅದು ಕೇವಲ ಆನುಷಂಗಿಕ.

**ಶ್ರೀ ಶ್ರೀಪ್ರಕಾಶ :** ನನ್ನ ವಿಷಯದಲ್ಲೂ ಅದೇ ನಿಯಮ ಅನ್ವಯವಾಗುತ್ತದೆ ಎಂದು ಭಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಪ್ರಸ್ತಾವ ಹೀಗಿದೆ:

"೪೮ನೇ ನಿಯಮದಲ್ಲಿ 'ಬೇಕು' ಎಂಬ ಪದಕ್ಕೆ ಬದಲಾಗಿ 'ಬಹುದು' ಎಂಬ ಪದವನ್ನು ಪ್ರತಿಸ್ಥಾಪಿಸಬೇಕು.'

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೪೯**

**ಶ್ರೀ ಕೆ.ಎಂ. ಮುನ್ಷಿ :** ನಾನು ಮಂಡಿಸುತ್ತೇನೆ

"೪೯ನೇ ನಿಯಮದಲ್ಲಿ 'ಅಥವಾ ಸಂದರ್ಭಾನುಸಾರ' ಸಂಬಂಧಿಸಿದ ವರ್ಗಕ್ಕೆ" ಎಂಬ ಪದಗಳನ್ನು ಬಿಡಬೇಕು.

ಪ್ರಸ್ತಾವವು ಅಂಗೀಕೃತವಾಯಿತು.

**ನಿಯಮ ೬೩**

**ಶ್ರೀ ಕೆ.ಎಂ. ಮುನ್ಷಿ :** ನಾನು ಮಂಡಿಸುವಂತೆ ೬೩ನೇ ನಿಯಮವನ್ನು ಬಿಡಬೇಕು. ಇದು ಪ್ರಾಂತೀಯ ಶಾಸನಸಭೆಗಳ ಕರಡು ಸಂವಿಧಾನಗಳ ಪರಿಶೀಲನೆಗೆ ಸಂಬಂಧಿಸಿದ್ದು. ನಾನು ವ್ಯವಹಾರ ಆದೇಶ ಸಮಿತಿಯ ವರದಿಯನ್ನು ಮಂಡಿಸಿದಾಗ, ನನ್ನ ಕಾರಣಗಳನ್ನು ಕೊಟ್ಟಿದ್ದೆ. ಈಗ ಅದನ್ನು ಪುನರುಚ್ಚರಿಸುವ ಅಗತ್ಯವಿಲ್ಲ.

**ಮಾನ್ಯ ಅಧ್ಯಕ್ಷರು :** ೬೩ನೇ ನಿಯಮವನ್ನು ಬಿಡಬೇಕೆಂದು ಶ್ರೀ. ಮುನ್ಷಿ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಅದರ ಬಗ್ಗೆ ಯಾರಾದರೂ ಹೇಳಬಯಸುತ್ತಿರಾ?

ಪ್ರಸ್ತಾವವು ಅಂಗೀಕೃತವಾಯಿತು

**ಶ್ರೀ ಶ್ರೀಪ್ರಕಾಶ :** ಶ್ರೀ ಮುನ್ಷಿಯವರು ೬೭ನೇ ನಿಯಮಕ್ಕೆ ಹೋಗುವ ಮುನ್ನ ೬೬ನೇ ನಿಯಮವನ್ನು ಬಿಡಬೇಕೆಂದು ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ. ಅದು ಸಂಚಾಲನ ಸಮಿತಿಯ ಅನುಮೋದನೆಗೆ ಹೋಗದಿದ್ದರೂ ತಿದ್ದುಪಡಿಯನ್ನು ನಿಮ್ಮ ಮುಂದಿಡುತ್ತಿದ್ದೇನೆ. ಅದು ಅಪ್ಪಟ ಆನುಷಂಗಿಕ ತಿದ್ದುಪಡಿ ಈ ತಿದ್ದುಪಡಿಯನ್ನು ಮಂಡಿಸಲು ತಾವು ಅನುಮತಿಸುತ್ತೀರೆಂದು ಭಾವಿಸುತ್ತೇನೆ. ಮಾನ್ಯರೆ, ನನಗನಿಸುತ್ತೆ ಈ ತಿದ್ದುಪಡಿಯನ್ನು ಬಿಡಬೇಕು. ಪ್ರತಿಯೊಂದು ಬಾರಿ ಸಂಚಾಲನ ಸಮಿತಿಯ ಬಳಿ ಹೋಗುವ ಬದಲು ಸಂವಿಧಾನ ರಚನಾಸಭೆ ತನ್ನಲ್ಲಿ ಅಂತರ್ಗತವಾದ ಅಧಿಕಾರವನ್ನು ಚಲಾಯಿಸಿ, ನಿಯಮಗಳನ್ನು ಬದಲಿಸಬೇಕು. ಈಗಾಗಲೇ ನನ್ನ ಮುಂದೆ ಒಂದು ದೃಷ್ಟಾಂತವಿದೆ. ಇಂದು ಮಧ್ಯಾಹ್ನ ನಡೆದ ವ್ಯವಹಾರದಲ್ಲಿ ಶ್ರೀ ಮುನ್ಷಿಯವರ ತಿದ್ದುಪಡಿಯಾದ ತಿದ್ದುಪಡಿಗಳಿಗೆ ಶ್ರೀ ಸಂತಾನಮ್ ಅವರು ತಂದಿದ್ದು ಯಾವ ಕಾರಣದಿಂದಲೂ ತಿದ್ದುಪಡಿಗಳೇ ಅಲ್ಲ. ತಾವು ಗಮನಿಸಿರಬಹುದು, ೪ ಮತ್ತು ೫ನೆಯ ನಿಯಮಗಳಿಗೆ ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಗಳು, ಸಂಪೂರ್ಣ ಹೊಸತು. ಅವು ಸಂಚಾಲನ ಸಮಿತಿಯ ಅನುಮೋದನೆಗೆ ತಲುಪಿರಲಿಲ್ಲ. ತಾವು ಈ ತಿದ್ದುಪಡಿಗಳನ್ನು ತರಲು ಅಪ್ಪಣೆ ಕೊಟ್ಟಿದ್ದೀರಿ, ನನ್ನ ತಿದ್ದುಪಡಿಯನ್ನು ಮಂಡಿಸಲು ಅನುಮತಿಸುತ್ತೀರಿ ಎಂದುಕೊಂಡಿದ್ದೇನೆ.

**ಮಾನ್ಯ ಅಧ್ಯಕ್ಷರು :** ತಮ್ಮ ತಿದ್ದುಪಡಿಗಳು ನಿರುಪಯುಕ್ತವಾಗಿವೆ. ನೀವು ಉದ್ಧರಿಸಿದ ತಿದ್ದುಪಡಿಗಳು ಈಗಾಗಲೆ ಸಂಚಾಲಕ ಸಮಿತಿಗೆ ಸಲ್ಲಿಸಲ್ಪಟ್ಟ ಅನುಮೋದನೆ ಪಡೆದವಕ್ಕೆ ಸಂಬಂಧಿಸಿದವು. ಆದುದರಿಂದ, ಆ ತಿದ್ದುಪಡಿಗಳು ಕ್ರಮಬದ್ಧವಾಗಿಯೇ ಇವೆ. ಈ ನಿಮ್ಮ ತಿದ್ದುಪಡಿಗೆ ಸಂಬಂಧಿಸಿದ ನಿಯಮ ಸಂಚಾಲನ ಸಮಿತಿಯ ಪರಿಶೀಲನೆಗೆ ತಲುಪದೇ ಇರುವಂಥದ್ದು, ಹಾಗಾಗಿ ನಿಮ್ಮ ತಿದ್ದುಪಡಿ ಸಂಪೂರ್ಣ ನಿರುಪಯುಕ್ತವಾಗಿದೆ.

## ನಿಯಮ ೬೭

**ಶ್ರೀ ಕೆ. ಎಂ. ಮುನ್ಷಿ :** ಈಗ ಕೊನೆಯ ನಿಯಮ; ಎಂದರೆ ೬೭ನೇ ನಿಯಮಕ್ಕೆ ನಾನು ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"ಮೊದಲ ವಾಕ್ಯದಲ್ಲಿರುವ 'ವರ್ಗಗಳು ಮತ್ತು' ಎಂಬ ಪದಗಳು, ಮತ್ತು ಇಡೀ ಎರಡನೇ ವಾಕ್ಯವನ್ನು ಬಿಡಬೇಕು" ಇದು ಕೂಡ ಅನುಷಂಗಿಕ ತಿದ್ದುಪಡಿ

**ಮಾನ್ಯ ಅಧ್ಯಕ್ಷರು :** ಇದರ ಬಗ್ಗೆ ಯಾರಿಗಾದರೂ ಮಾತನಾಡುವುದಿದೆಯೆ?

**ಶ್ರೀ ಜಸ್ವತ್ ರಾಯ್ ಕಪೂರ್ :** ಸನ್ಮಾನ್ಯ ಅಧ್ಯಕ್ಷರೆ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ೬೭ನೇ ನಿಯಮದ ಮೇಲೆ ಇದುವರೆಗೆ ಶ್ರೀ ಮುನ್ಷಿಯವರು ಅವಲಂಬಿಸುತ್ತಿದ್ದಾರೆ. ೬೭ನೇ ನಿಯಮ ತಿಳಿಸುವಂತೆ, ಪ್ರತಿಯೊಂದು ಪ್ರಸ್ತಾವವೂ ಸಂಚಾಲನ ಸಮಿತಿಯ ಪರಿಶೀಲನೆಗೆ ಸಲ್ಲತಕ್ಕದು, ಸಂಚಾಲನ ಸಮಿತಿಯು ಅದನ್ನು ಪರಿಶೀಲಿಸಬೇಕು. ಅನಂತರ ಅದು ತನ್ನ ವರ್ರದಿಯನ್ನು ಸಭೆಗೆ ಕಳುಹಿಸಿಕೊಡಬೇಕು. ಪ್ರಸ್ತುತದಲ್ಲಿ, ಮಾನ್ಯರೆ, ಈಗ ನಮ್ಮ ಮುಂದೆ ಶ್ರೀ ಮುನ್ಷಿಯವರು ಎಲ್ಲ ತಿದ್ದುಪಡಿಗಳೂ, ನನಗೆ ತಿಳಿದಿರುವಂತೆ, ಸಂಚಾಲನ ಸಮಿತಿಯ ಪರಿಶೀಲನೆಗೆ ಸಲ್ಲಿಸಲ್ಪಟ್ಟವು. ಇದರ ಜೊತೆಗೆ ಸಂಚಾಲನ ಸಮಿತಿಯು ಅವನ್ನು ಪರಿಶೀಲಿಸಿದ ಬಗ್ಗೆ ಸಭೆಗೆ ವರದಿ ಸಲ್ಲಿಸಬೇಕು. ಆದರೆ ಇದುವರೆಗೆ, ಸಂಚಾಲನ ಸಮಿತಿಯ ಯಾವುದೇ ವರದಿ ನಮ್ಮ ಕೈಸೇರಿಲ್ಲ. ಈಗ ಶ್ರೀ ಮುನ್ಷಿಯವರು ೬೭ನೇ ನಿಯಮಕ್ಕೆ ಒಂದು ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿದ್ದಾರೆ. ಸಂಚಾಲನ ಸಮಿತಿಯ ವರದಿ ಏನೆಂಬುದನ್ನು ತಿಳಿಯಬಯಸುತ್ತೇನೆ. ಅವರ ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಸಂಚಾಲನ ಸಮಿತಿಯ ವರದಿ ಇಲ್ಲವಾದರೆ, ಆಗ ೬೭ನೇ ನಿಯಮಕ್ಕೆ ಅವರ ತಿದ್ದುಪಡಿಯ ಪ್ರಸ್ತಾವ ನಿರುಪಯುಕ್ತ.

**ಮಾನ್ಯ ಅಧ್ಯಕ್ಷರು :** ಶ್ರೀ ಮುನ್ಷಿಯವರಿಂದ ನನಗೆ ತಿಳಿದು ಬಂದಂತೆ, ಈ ಎಲ್ಲ ತಿದ್ದುಪಡಿಗಳನ್ನೂ ಅವರು ಸಂಚಾಲಕ ಸಮಿತಿಯ ಪರವಾಗಿ ಮಾಡುತ್ತಿದ್ದಾರೆ, ಅದನ್ನು ಅವರು ತಿದ್ದುಪಡಿಯ ರೂಪದಲ್ಲಿ ಸಭೆಯ ಮುಂದಿಡುತ್ತಿದ್ದಾರಷ್ಟೆ. ವಾಸ್ತವವಾಗಿ, ಅವೆಲ್ಲ ಸಂಚಾಲನ ಸಮಿತಿಯ ವರದಿಗಳು.

**ಪಂಡಿತ್ ಹೃದಯ್‌ನಾಥ್ ಕುಂಜ್ರು :** ಇವು ನಿಯಮಗಳಿಗೆ, ಸಂಚಾಲಕ ಸಮಿತಿಯು ಪ್ರಸ್ತಾವಿಸಿದ ತಿದ್ದುಪಡಿಗಳೆಂದು ಅಧ್ಯಕ್ಷರಿಗೆ ತಿಳಿಸಿರುವುದುಂಟೆ?

**ಮಾನ್ಯ ಅಧ್ಯಕ್ಷರು :** ಸಂಚಾಲನ ಸಮಿತಿಯ ಸಭೆಯೊಂದು ನಡೆಯಿತು. ಅದರಲ್ಲಿ ಈ ಎಲ್ಲ ನಿಯಮಗಳು ತಿದ್ದುಪಡಿಗಳು ಪರಿಶೀಲಿಸಲ್ಪಟ್ಟುವು. ಇವೆಲ್ಲವೂ ಅಲ್ಲಿಂದು ಬಂದವು.

**ಶ್ರೀ ಜಸ್ವತ್ ರಾಯ್ ಕಪೂರ್ :** ನನ್ನ ನಿವೇದನೆ ಇಷ್ಟೆ. ಸಂಚಾಲನ ಸಮಿತಿಯ ವರದಿಯು ತಮ್ಮ ಮುಂದಿರಬೇಕು. ಕಾರ್ಯಕ್ರಮ ಸೂಚಿಯಲ್ಲಿರುವುದು ಕೇವಲ ಇಷ್ಟೆ. ಕ್ರಮಾದೇಶ ಪತ್ರದಲ್ಲಿರುವಂತೆ ಶ್ರೀ ಮುನ್ಷಿಯವರು ಕೆಲ ಪ್ರಸ್ತಾವಗಳನ್ನು ಸಭೆಯ ಮುಂದಿಡುತ್ತಾರೆ. ಸಂಚಾಲನ ಸಮಿತಿಯ ವರದಿ ನಮ್ಮ ಮುಂದಿಲ್ಲ. ಸಭೆಯ ಗೌರವಾನ್ವಿತ ಅಧ್ಯಕ್ಷರ ಸಮಕ್ಷಮಕ್ಕೆ ಸಂಚಾಲನ ಸಮಿತಿಯ ವರದಿಯನ್ನು ಸೂಕ್ತ ನಮೂನೆಯಲ್ಲಿ ಸಲ್ಲಿಸಬೇಕು. ಈ ಕಾರ್ಯವನ್ನು ಸಮಿತಿಯ ಅಧ್ಯಕ್ಷರೋ, ಕಾರ್ಯದರ್ಶಿಯೋ ಮಾಡಬೇಕಿತ್ತು. ಶ್ರೀ ಮುನ್ಷಿಯವರು ಸಂಚಾಲನ ಸಮಿತಿಯ ಅಧ್ಯಕ್ಷರೂ ಅಲ್ಲ, ಕಾರ್ಯದರ್ಶಿಯೂ ಅಲ್ಲ.

**ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್ :** ನಾನೊಂದು ಕ್ರಿಯಾಲೋಪವೆತ್ತುತ್ತಿದ್ದೇನೆ. ಎಲ್ಲ ನಿಯಮಗಳು ಅಂಗೀಕೃತವಾಗಿದೆ. ಈಗೇಕೆ ಆ ಪ್ರಶ್ನೆ. ಅದನ್ನು ಪ್ರಾರಂಭದಲ್ಲೆ ಕೇಳಬೇಕಿತ್ತು.

**ಮಾನ್ಯ ಅಧ್ಯಕ್ಷರು :** ನಾನು ಆ ಮಾತನ್ನು ಒಪ್ಪುತ್ತೇನೆ. ಈ ಪ್ರಶ್ನೆಯನ್ನು ಮೊದಲೊಮ್ಮೆ ಎತ್ತಲಾಗಿತ್ತು. ಅದಕ್ಕೆ ಉತ್ತರ ರೂಪದಲ್ಲಿ, ಸಂಚಾಲನ ಸಮಿತಿಯು ತಿದ್ದುಪಡಿಗಳನ್ನು ಪರಿಶೀಲಿಸಿದುದಾಗಿ ತಿಳಿಸಲಾಗಿತ್ತು. ಪ್ರಾಯಶಃ ತಪ್ಪಾಗಿರುವುದು ಕ್ರಮಾದೇಶ ಪತ್ರದಲ್ಲಿ. ಇದು ಸಂಚಾಲನ ಸಮಿತಿಯ ವರಧಿ ಎಂದು ಪತ್ರದಲ್ಲಿ

ನಮೂದಿಸಬೇಕಿತ್ತು. ಇಲ್ಲವಾದರೆ, ಈ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅವೆಲ್ಲದರ ಅನುಪಾಲನೆಯಾಗಿದೆ.

**ಶ್ರೀ ಜಸ್ವಂತ್ ರಾಯ್ ಕಪೂರ್ :** ಹಾಗಾದರೆ, ವಾಸ್ತವವಾಗಿ ಸಂಚಾಲನ ಸಮಿತಿಯ ವರದಿಯೆಂದು ಬಂದಿದೆಯೊ?

**ಮಾನ್ಯ ಅಧ್ಯಕ್ಷರು :** ಅದನ್ನು ವರದಿ ಎಂದು ನಮೂದಿಸಿಲ್ಲ. ಆದರೆ ಅದೇ ವರದಿ, ಅದನ್ನು ಸಂಚಾಲನ ಸಮಿತಿಯ ಕಾರ್ಯದರ್ಶಿ ಸಲ್ಲಿಸಿದ್ದಾರೆ. ಶ್ರೀ ಮುನ್ಷಿಯವರು ಸಂಚಾಲನ ಸಮಿತಿಯ ಪರವಾಗಿ ತಿದ್ದುಪಡಿಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲು ಅಧಿಕೃತಗೊಂಡಿದ್ದಾರೆ.

**ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್ :** ಸಂಚಾಲನ ಸಮಿತಿಯ ಅಧ್ಯಕ್ಷರೇ ಸಂವಿಧಾನ ರಚನಾಸಭೆಯ ಅಧ್ಯಕ್ಷರು ಆಗಿರುತ್ತಾರೆ. ಅಭಿಪ್ರಾಯ ಕೋರಿಕೆ ಕೇವಲ ಮೌಖಿಕ ಮಾತ್ರ ಆಗಿರಬಹುದು.

**ಶ್ರೀ ಕೆ.ಎಂ. ಮುನ್ಷಿ :** ವಸ್ತುಸ್ಥಿತಿ ಹೀಗಿದೆ. ಸಂವಿಧಾನ ರಚನಾಸಭೆಯ ಅಧ್ಯಕ್ಷರು ಸಂಚಾಲನ ಸಭೆಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಸಹಜವಾಗಿಯೇ ಅವರು ವರದಿಯನ್ನು ಮಂಡಿಸಲಾಗದು. ಸಮಿತಿಯ ಪದನಿಮಿತ್ತ ಕಾರ್ಯದರ್ಶಿ ಈ ಸದನದ ಸದಸ್ಯರಲ್ಲ. ಸಂಚಾಲನ ಸಮಿತಿಯು ತನ್ನಲ್ಲೊಬ್ಬ ಸದಸ್ಯರನ್ನು ವರದಿಗಾರನಂತೆ, ತನ್ನ ನಿರ್ಧಾರಗಳನ್ನು ಸಭೆಯ ಮುಂದೆ ಸಲ್ಲಿಸುವಂತೆ ಕೋರಿದೆ. ಈ ನಿಯಮಗಳು ಸಂಚಾಲನ ಸಮಿತಿಯಿಂದ ಹೊರಬಂದವು ಮತ್ತು ಸಂಚಾಲನ ಸಮಿತಿ, ಸದನದ ಮುಂದೆ ಇವನ್ನು ಮಂಡಿಸುವಂತೆ ನನ್ನನ್ನು ಅಧಿಕೃತಗೊಳಿಸಿದೆ.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ಕ್ರಮಬದ್ಧವಾಗಿದೆ ಎಂದು ನಾನಾಗಲೆ ರೂಲಿಂಗ್ ನೀಡಿದ್ದೇನೆ. ಈಗ ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ:

"೬೭ನೇ ನಿಯಮದ ಮೊದಲನೆಯ ವಾಕ್ಯದಲ್ಲಿ 'ವರ್ಗಗಳು ಮತ್ತು' ಎಂಬ ಪದಗಳನ್ನು ಇಡೀ ಎರಡನೇ ವಾಕ್ಯವನ್ನು ಬಿಡತಕ್ಕದು."

"ತಿದ್ದುಪಡಿ ಅಂಗೀಕೃತವಾಯಿತು"

**ಮಾನ್ಯ ಅಧ್ಯಕ್ಷರು :** ಶ್ರೀ ಶ್ರೀಪ್ರಕಾಶ ಅವರು ಒಂದು ತಿದ್ದುಪಡಿಯನ್ನು ಮಂಡಿಸಲು ಬಯಸಿದ್ದರು. ಅದು ಸಂಚಾಲನ ಸಮಿತಿಯ ಅವಗಾಹನೆಗೆ ಹೋಗಿರಲಿಲ್ಲ. ನನಗೆ ತಿಳಿದಂತೆ, ಅವರು ಪ್ರಸ್ತಾವಿಸಲು ಉದ್ದೇಶಿಸಿರುವ ತಿದ್ದುಪಡಿಯನ್ನು ನಮ್ಮ ನಿಯಮಗಳಲ್ಲಿರುವ ನ್ಯೂನತೆಯನ್ನು ನಿವಾರಿಸುವ ಉದ್ದೇಶದಿಂದ ಮಂಡಿಸಲಾಗಿದೆ. ಹಾಗಾಗಿ ಅವರು ಸದನದ ಮುಂದೆ, ತಮ್ಮ ತಿದ್ದುಪಡಿಯನ್ನು ಪ್ರಸ್ತಾವಿಸಲು ಅನುಮತಿ ನೀಡುವಂತೆ ನಾನು ಸಭೆಯನ್ನು ಕೋರುತ್ತೇನೆ.

**ಪಂಡಿತ್ ಜವಾಹರ್‌ಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನನ್ನದೊಂದು ಸಲಹೆ. ಅವರು ತಮ್ಮ ತಿದ್ದುಪಡಿಯನ್ನು ಸಂಚಾಲನ ಸಮಿತಿಗೆ ಕಳುಹಿಸಿಕೊಡಲಿ. ಅನಂತರ ನಾವದನ್ನ ಸಭೆಯಲ್ಲಿ ಕೈಗೆತ್ತಿಕೊಳ್ಳಬಹುದು.

**ಮಾನ್ಯ ಅಧ್ಯಕ್ಷರು :** ಇದು ಏನಿದ್ದರೂ ಹೆಚ್ಚು ಕಡಿಮೆ ಔಪಚಾರಿಕ ಕಲಾಪಕ್ಕೆ ನಾವು ನಮ್ಮ ನಿಯಮಗಳಲ್ಲಿ ಇರುವ ನ್ಯೂನತೆಯೊಂದನ್ನು ಆವಿಷ್ಕರಿಸಿದ್ದೇವೆ. ಪ್ರಸ್ತುತ ತಿದ್ದುಪಡಿ ಅದನ್ನು ನಿವಾರಿಸುತ್ತದೆ. ಆದುದರಿಂದ, ಅದನ್ನು ಮತ್ತೆ ಔಪಚಾರಿಕವಾಗಿ ಸಂಚಾಲನ ಸಮಿತಿಗೆ ಕಳುಹಿಸುವ ಶಿಷ್ಟಾಚಾರದ ಅಗತ್ಯವಿರುವುದಿಲ್ಲ– ಸದನ ಅನುಮೋದಿಸುವುದಾದರೆ......

**ದಿವಾನ್ ಚಮನ ಲಾಲ್ :** ನಾವು ಈಗ ಮಾಡಿರುವ ನಿಯಮಗಳಿಗೆ ಬದ್ಧರಾಗಿರಬೇಕೆ?

**ಸನ್ಮಾನ್ಯ ಅಧ್ಯಕ್ಷರು :** ಖಂಡಿತವಾಗಿ ಬದ್ಧರಾಗಿರಬೇಕು.

**ದಿವಾನ್ ಚಮನ ಲಾಲ್** (ಪೂರ್ವ ಪಂಜಾಬ್ : ಸಾಮಾನ್ಯ) : ಅಧ್ಯಕ್ಷರು ಸಭೆಯ ಅನುಮತಿ

ಕೇಳಬೇಕೆಂಬ ನಿಯಮವೇನೂ ಇಲ್ಲ. ಸಂಚಾಲನ ಸಮಿತಿಯ ನಿಯಮಗಳನ್ನು ತಿದ್ದುಪಡಿ ಮಾಡಲು ಸೂಕ್ತವಾದ ಪ್ರಕ್ರಿಯೆ ಏನೆಂದು ತಿಳಿಯಬಯಸುತ್ತೇವೆ.

**ಸನ್ಮಾನ್ಯ ಅಧ್ಯಕ್ಷರು :** ತಿದ್ದುಪಡಿಯನ್ನು ಸಭೆ ಕೇಳಲಿ. ನಂತರವೂ ಅದನ್ನು ಸಂಚಾಲನ ಸಮಿತಿಗೆ ಕಳುಹಿಸಬೇಕೆಂದು ಸದನ ಅಭಿಪ್ರಾಯಪಟ್ಟರೆ ನಾನು ಹಾಗೆಯೇ ಮಾಡುತ್ತೇನೆ. ಶ್ರೀ ಶ್ರೀಪ್ರಕಾಶ ತಾವು ದಯಮಾಡಿ ತಿದ್ದುಪಡಿಯನ್ನು ಓದುತ್ತೀರಾ?

**ಶ್ರೀ ಎ.ಎಸ್. ಅನೆ :** ೬೬ನೇ ನಿಯಮ ಕಡ್ಡಾಯವೆಂದು ತೋರುತ್ತದೆ. ಅದು ಯಾವ ವಿವೇಚನೆಗೂ ಒಳಪಟ್ಟುದಲ್ಲ. ತುರ್ತುಸಂದರ್ಭದಲ್ಲಿ, ಯಾವುದೇ ನಿಯಮ ಕಾರ್ಯಾನ್ವಯಗೊಳ್ಳುವುದನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ಅಧ್ಯಕ್ಷರಿಗೆ ಯಾವುದಾದರೂ ನಿಯಮ ಅಧಿಕಾರ ನೀಡಿದ ಹೊರತು, ಈ ನಿಯಮಗಳನ್ನು ಉಲ್ಲಂಘಿಸಲು, ಅಧ್ಯಕ್ಷರು ಯಾವುದೇ ತಿದ್ದುಪಡಿಯನ್ನು ಅಂಗೀಕರಿಸುವಂತೆ ಸಭೆಯನ್ನು ಕೇಳುವಂತಿಲ್ಲ

**ಮಾನ್ಯ ಅಧ್ಯಕ್ಷರು :** ಈ ಸದನ ತನ್ನ ನಿಯಮವನ್ನು ತಾನೇ ಕೈಬಿಡುವ ಅಧಿಕಾರ ಪಡೆದಿದೆ. ಎಂದು ಕೋರಿದ್ದೆ. ಆದುದರಿಂದ, ನಾನೇ ಖುದ್ದಾಗಿ, ಈ ತಿದ್ದುಪಡಿಗೆ ಅನುಮತಿ ಕೊಡುವ ಹೊಣೆ ವಹಿಸಬಾರದು: ನನಗೆ ತಿಳಿದಂತೆ, ಸದನವಾಗಲಿ, ಅಧ್ಯಕ್ಷರಾಗಲಿ, ಯಾವುದೇ ನಿಯಮವನ್ನು ಅಮಾನತ್ತಿನಲ್ಲಿಡಲು ಅವಕಾಶ ಕೊಡುವ ಉಪಬಂಧವಿಲ್ಲ. ಆದರೆ ಈ ಅಧಿಕಾರ ಸಭೆಯಲ್ಲಿ ಅಂತರ್ಗತವಾಗಿದ್ದು ಯಾವುದಾದರೂ ನಿಯಮವನ್ನು ತಾತ್ಕಾಲಿಕವಾಗಿ ರದ್ದುಮಾಡಿ, ಯಾರಾದರೂ ಸದಸ್ಯರಿಗೆ ತಮ್ಮ ತಿದ್ದುಪಡಿಯನ್ನು ಪ್ರಸ್ತಾಪಿಸಲು ಅನುಮತಿ ನೀಡಬಹುದೆಂದು ಕೋರಿದ್ದೇವೆ. ಆ ಅಧಿಕಾರ ಕಟ್ಟುನಿಟ್ಟಾಗಿ ನಿಯಮಗಳಿಗೆ ಒಳಪಡುವುದಿಲ್ಲವೆಂಬುದೇನೋ ವಾಸ್ತವ.

**ಶ್ರೀ ಜಸ್ವಂತ್ ರಾಯ್ ಕಪೂರ್ :** ತಮ್ಮ ಗಮನಕ್ಕೆ ೨೬ನೇ ನಿಯಮವನ್ನು ತರಬಹುದೆ? ಅದು ಹೀಗಿದೆ.

"ಅಧ್ಯಕ್ಷರು ನಿರ್ದೇಶನ ನೀಡಿದ ಹೊರತು ಪ್ರತಿಯೊಂದು ನೋಟೀಸಿನ ಜೊತೆಗೆ ಸಂಬಂಧಿಸಿದ ಪ್ರಸ್ತಾವದ ಪ್ರತಿಯನ್ನು, ಆ ಪ್ರಸ್ತಾವ ಸಭೆಯಲ್ಲಿ ಪ್ರಸ್ತಾವಿಸಲ್ಪಡುವ ದಿನಾಂಕಕ್ಕೆ ಮೂರು ದಿನಗಳು ಮುಂಚೆಯೇ ಕಳುಸಹಿಸಬೇಕು."

**ಮಾನ್ಯ ಅಧ್ಯಕ್ಷರು :** ಅದು ಕೇವಲ ನೋಟೀಸು ಜಾರಿಮಾಡಲು ಕಾಲಾವಕಾಶ ನೀಡುವ ಬಗ್ಗೆ ತಿಳಿಸುತ್ತದೆಯಷ್ಟೆ. ಆ ಕಾರಣದಿಂದಲೆ, ಸದನಕ್ಕೆ ಈ ತಿದ್ದುಪಡಿಯ ಪ್ರಸ್ತಾವವನ್ನು ಪರಿಶೀಲಿಸಲು ಇಷ್ಟವಿಲ್ಲವಾದರೆ, ನಾನು ಅದನ್ನು ಅನುಮತಿಸುವುದಿಲ್ಲ. ಸದನವು ಅನುಮತಿಸುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಈ ವಿಷಯವನ್ನು ಸದನದ ತೀರ್ಮಾನಕ್ಕೆ ಬಿಡುತ್ತೇನೆ. ಶ್ರೀ ಶ್ರೀಪ್ರಕಾಶ ಅವರು ತಮ್ಮ ತಿದ್ದುಪಡಿಯನ್ನು ಓದಬಹುದೆ?

**ಶ್ರೀ ಶ್ರೀಪ್ರಕಾಶ :** ೫ನೇ ನಿಯಮದ ನಂತರ, ಕೆಳಕಂಡ ಹೊಸ ನಿಯಮವನ್ನು ಸೇರಿಸಿ.

"ಮೇಲಿನ ೪ ಮತ್ತು ೫ನೇ ನಿಯಮಗಳಲ್ಲಿ ಏನೇ ನಮೂದಿಸಿರಲಿ, ೩ ಜೂನ್ ೧೯೪೭ರಂದು ಬ್ರಿಟಿನ್ ಪ್ರಭುತ್ವದ ಸರ್ಕಾರದ ಹೇಳಿಕೆಯ ಮೇರೆಗೆ ಆ ಹೇಳಿಕೆಯ ೪ರಿಂದ ೧೪ರ ವರೆಗಿನ ಖಂಡಿಕೆಗಳಲ್ಲಿ ಉಲ್ಲೇಖಿತವಾಗಿರುವ ಪ್ರದೇಶಗಳಲ್ಲಿ ಸಂವಿಧಾನ ರಚನಾಸಭೆಗೆ ಭಾರತದ ಗವರ್ನರ್ ಜನರಲ್, ಹೊಸ ಚುನಾವಣೆ ನಡೆಸಲು ಆದೇಶ ನೀಡಬಹುದು. ನಂತರ ೩ನೇ ನಿಯಮಾನುಸಾರ, ಈಗಾಗಲೆ, ಈ ಪ್ರದೇಶಗಳಿಂದ ಚುನಾಯಿತರಾಗಿರುವ ಸದಸ್ಯರು, ಸಭೆಯಲ್ಲಿ ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿರಲಿ, ಇಲ್ಲದಿರಲಿ, ತಮ್ಮ ಸ್ಥಾನಗಳನ್ನು ತಮ್ಮ ಸ್ಥಾನಗಳನ್ನು ತೆರವುಗೊಳಿಸುವುದಾಗಿ ಪರಿಗಣಿಸಲ್ಪಡುತ್ತಾರೆ. ಹೊಸದಾಗಿ ಚುನಾಯಿತರಾದ ಸದಸ್ಯರು ಸಭೆಗೆ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವುದಾಗಿ ಪರಿಗಣಿಸಲ್ಪಡುತ್ತಾರೆ. ಈ ನಿಯಮ ೩ ಜೂನ್ ೧೯೪೭ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುತ್ತದೆ."

ಮಾನ್ಯರೆ, ನಾನಂದುಕೊಂಡಂತೆ, ಈ ನಿಯಮ ಸ್ವಯಂವೇದ್ಯ. ಸಂವಿಧಾನ ರಚನಾಸಭೆ ರೂಪಿಸಿದ

ನಿಯಮಗಳಿಗೆ ವ್ಯತಿರಿಕ್ತವಾಗಿ ವೈಸ್‌ರಾಯ್ ವರ್ತಿಸಿರುವುದು ವಾಸ್ತವ ಸಂಗತಿ. ಸ್ಥಾನಗಳನ್ನು ತೆರವು ಮಾಡಿ, ಭರ್ತಿಮಾಡುವ ವಿಧಾನವನ್ನು ೪ ಮತ್ತು ೫ನೇ ನಿಯಮಗಳು ಸ್ಪಷ್ಟವಾಗಿ ನಿಯಮಿಸುತ್ತವೆ. ಕಳೆದ ಕೆಲವು ತಿಂಗಳುಗಳಲ್ಲಿ ಈ ನಿಯಮಗಳು ಸಂಪೂರ್ಣ ಉಲ್ಲಂಘಿಸಲ್ಪಟ್ಟುವು. ಹೊಸ ಚುನಾವಣೆಗಳು ನಡೆದುವು. ಈ ಸದನದ ಅನೇಕ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡದೆಯೇ ತಮ್ಮ ಸ್ಥಾನಗಳನ್ನು ತೆರವು ಮಾಡಿರುವುದಾಗಿ ಪರಿಗಣಿಸಲ್ಪಟ್ಟರು. ನಾವೆಲ್ಲರೂ ಅದಕ್ಕೆ ಬದ್ಧರಾಗಿದ್ದೇವೆ.

ಮಾನ್ಯರೆ, ನಮ್ಮ ಸ್ವಗೌರವವನ್ನು ಪ್ರತಿಷ್ಠಾಪಿಸುವ ಸಲುವಾಗಿ, ಒಂದು ನಿಯಮವನ್ನು ನಾವು ಜಾರಿಮಾಡಬೇಕಾದುದು ಕಡ್ಡಾಯವಾಗುತ್ತದೆ. ಅದರಿಂದ ಈಗ ನಡೆದಿರುವುದೆಲ್ಲಕ್ಕೂ ಔಪಚಾರಿಕ ಮಂಜೂರಾತಿ ದೊರೆಯುತ್ತದೆ. ಇದಾಗದಿದ್ದರೆ, ಬಂಗಾಲ ಮತ್ತು ಪಂಜಾಬ್ ರಾಜ್ಯಗಳ ಸದಸ್ಯರ ಉಪಸ್ಥಿತಿಗೆ ಅನುಮತಿ ನೀಡಲಾಗದೆಂಬುದು ನನ್ನ ವಿನಮ್ರ ನಿವೇದನೆ. ಮಾನ್ಯರೆ, ಆದುದರಿಂದ ಈ ನಿಯಮವನ್ನು ಅಂಗೀಕರಿಸುವುದು ಅಗತ್ಯವೆಂದು ಭಾವಿಸುತ್ತೇನೆ. ಹಾಗಾಗಿ ಸದನವು ನನ್ನ ನಿವೇದನೆಯನ್ನು ಅನುಮೋದಿಸುವುದೆಂದು ಭಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಸದನವು ಈ ತಿದ್ದುಪಡಿಯನ್ನು ಅಂಗೀಕರಿಸುತ್ತದೆಯೇ ಎಂಬುದನ್ನು ತಿಳಿಯಬಯಸುತ್ತೇನೆ. ನಾವು ಇದರ ಯೋಗ್ಯತೆಯನ್ನು ಕುರಿತು ಈಗ ಚರ್ಚಿಸುತ್ತಿಲ್ಲ. ಪ್ರಶ್ನೆ ಇಷ್ಟೆ: ಪ್ರಸ್ತಾವವನ್ನು ಕುರಿತು ಚರ್ಚಿಸಬೇಕೆ ಬೇಡವೆ?

**ಪಂಡಿತ್ ಜವಾಹರ್‌ಲಾಲ್ ನೆಹರು:** ಯೋಗ್ಯತೆಯ ಬಗ್ಗೆ ನಾನೇನೂ ಹೇಳುತ್ತಿಲ್ಲ. ನಾನು ಹೇಳಲು ಹೊರಟಿದ್ದು ಇಷ್ಟೆ. ಚರ್ಚೆಗೆ ತೆಗೆದುಕೊಂಡರೂ ಸಹ, ಇದು ಸಂಚಾಲನ ಸಮಿತಿಯ ಪರಿಶೀಲನೆಗೆ ಬಿಡತಕ್ಕ ವಿಷಯ. ಇದೊಂದು ಲಂಬಿತವಾದ ನಿಯಮ. ಇದನ್ನು ಆಧಾರದ ಮೇಲೆ ಅಂಗೀಕರಿಸಿದರೂ, ಮತ್ತೆ ವಕೀಲರು ಮತ್ತಿತರರು ಪರಿಶೀಲಿಸಬೇಕಾದ ನಿಯಮವಷ್ಟೆ. ಇದನ್ನು ಹೇಗೆ ಅಂಗೀಕರಿಸಬೇಕೆಂಬುದು ಪ್ರಶ್ನೆ. ಈಗಿರುವಂತೆಯೇ ನಿಯಮವನ್ನು ಅಂಗೀಕರಿಸಲಾಗದು. ಇಲ್ಲವಾದರೆ ತೊಂದರೆಗಳನ್ನು ನಿವಾರಿಸುವ ಬದಲಾಗಿ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಿದಂತಾಗುತ್ತದೆ. ಇದಕ್ಕೆ ಸೂಕ್ತ ಕ್ರಮವೆಂದು: ಸಂಚಾಲನ ಸಮಿತಿಗೆ ಅನ್ವಯಿಸುವುದು.

**ಮಾನ್ಯ ಅಧ್ಯಕ್ಷರು** : ನಾನು ಈ ವಿಷಯವನ್ನು ಸದನದ ತೀರ್ಮಾನಕ್ಕೆ ಬಿಡುತ್ತೇವೆ.

**ಶ್ರೀ ಶ್ರೀಪ್ರಕಾಶ** : ಈ ತಿದ್ದುಪಡಿ ನಿರರ್ಥಕವಾಯಿತೆಂದು ತಿಳಿಸಬೇಕೆ?

**ಮಾನ್ಯ ಅಧ್ಯಕ್ಷರು** : ಅದು ನಿರರ್ಥಕವಾಗಿಲ್ಲ. ಈಗ ಚರ್ಚೆಗೆ ತೆಗೆದುಕೊಂಡಿಲ್ಲವಷ್ಟೆ. ತಾವು ಸಂಚಾಲನ ಸಮಿತಿಗೆ ಅದನ್ನು ಕಳುಹಿಸಬಹುದು ಮತ್ತೆ ಕೆಲಕಾಲಾನಂತರ ಚರ್ಚೆಗೆ ಬರಬಹುದು.

**ಶ್ರೀ ಶ್ರೀಪ್ರಕಾಶ** : ಹೊಸದಾಗಿ ಚುನಾಯಿತರಾಗಿ ತಮ್ಮ ಸ್ಥಾನಗಳಲ್ಲಿ ಕುಳಿತಿರುವ ಸದಸ್ಯರ ಪಾಡೇನೆಂದು ವಿನಯಪೂರ್ವಕವಾಗಿ ವಿಚಾರಿಸಬಹುದೆ? ೪ ಮತ್ತು ೫ನೇ ನಿಯಮಗಳ ರೀತ್ಯಾ ಅವರ ಉಪಸ್ಥಿತಿಗೆ ಅನುಮತಿಯುಂಟೆ ಇಲ್ಲವೆ?

**ಮಾನ್ಯ ಅಧ್ಯಕ್ಷರು** : ನಿನ್ನೆ ನಾನು, ಅವರನ್ನು ತಮ್ಮ ಸ್ಥಾನಗಳಲ್ಲಿ ಕೂರುವಂತೆ, ಅನುಮತಿಸಿದೆ. ಅವರು ಆ ಸ್ಥಾನಗಳಲ್ಲಿ ಮುಂದುವರೆಯುತ್ತಾರೆ.

**ಪಂಡಿತ್ ಜವಾಹರ್‌ಲಾಲ್ ನೆಹರು** : ಶ್ರೀ ಶ್ರೀಪ್ರಕಾಶ ಅವರು ಪ್ರಸ್ತಾಪಿಸಿದ ತಿದ್ದುಪಡಿ ಒಂದು ಮುಖ್ಯವಾದ ಪ್ರಶ್ನೆಯನ್ನು ಹುಟ್ಟುಹಾಕಿದೆ ಎಂದು ನಾನು ಸೂಚಿಸಬಹುದೆ? ಸಮಸ್ಯೆ ಎಂದರೆ ಅದನ್ನು ಹೇಗೆ ಜಾರಿಗೊಳಿಸುವುದು ಎಂಬುದು. ಒಂದು ಪ್ರಸ್ತಾವಕ್ಕೆ ಅನೌಪಚಾರಿಕ ತಿದ್ದುಪಡಿ ತರುವುದು ಕ್ರಮಬದ್ಧವಲ್ಲ. ಪ್ರಾಯಶಃ ಅದರ ಬಗ್ಗೆ ಒಂದು ಪ್ರಸ್ತಾವವನ್ನು ಅಂಗೀಕರಿಸುವುದು ಸಭೆಗೆ ಬಿಟ್ಟ ವಿಷಯ, ಅಥವಾ ಅದಕ್ಕಾಗಿ ನಿಯಮಗಳನ್ನು ಬದಲಾಯಿಸುವ ಅಗತ್ಯವಿದ್ದರೆ ನಾವು ಅದನ್ನು ಮಾಡಬಹುದು. ಆದರೆ ಅದನ್ನು ಒಂದು ಯುಕ್ತವಾದ ಸಂಸ್ಥೆ ಪರಿಶೀಲಿಸಬೇಕು. ನನ್ನ ನಿವೇದನೆಯೆಂದರೆ ಈ ತಿದ್ದುಪಡಿಯನ್ನು ಹೀಗೆ

ಹಗುರವಾಗಿ ಸಾಂದರ್ಭಿಕವಾಗಿ ಚರ್ಚೆಗೆ ತೆಗೆದುಕೊಳ್ಳಲಾಗದು.

**ಶ್ರೀ ಶ್ರೀಪ್ರಕಾಶ** : ನಾವು ಸದಸ್ಯರನ್ನು ಸಾಂದರ್ಭಿಕವಾಗಿ ಸದನಕ್ಕೆ ಬರಮಾಡಿಕೊಂಡಿದ್ದೇನೆ.

**ಮಾನ್ಯ ಅಧ್ಯಕ್ಷರು** : ನಾವು ಮುಂದಿನ ಬಾಬನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

**ಶ್ರೀ ಎಚ್.ವಿ. ಕಾಮತ್** (ಸಂ. ಪ್ರಾಂ. : ಬೆರಾರ್) : ಹೊಸ ನಿಯಮಗಳು ರೂಪುಗೊಂಡು ಹಳೆಯ ನಿಯಮಗಳು ತಿದ್ದುಪಡಿಗೊಂಡು ಅಥವಾ ತೆಗೆದುಹಾಕಲ್ಪಟ್ಟುದರ ಹಿನ್ನೆಲೆಯಲ್ಲಿ, ಎಲ್ಲ ನಿಯಮಗಳ 'ಎ' ಇತ್ಯಾದಿಗಳನ್ನೆಲ್ಲ ಬಿಟ್ಟು ಪುನರಾಂಕಿತಗೊಳಿನಬೇಕು.

**ಮಾನ್ಯ ಅಧ್ಯಕ್ಷರು** : ನಾವದನ್ನು ಮಾಡಬೇಕು. ತಿದ್ದುಪಡಿಗಳ ಪರಿಣಾಮವಾಗಿ, ನಿಯಮಗಳ ಮರು ಅಂಕಿತಕ್ಕೆ ಸದನದ ಅಭ್ಯಂತರವಿಲ್ಲವೆಂದು ಭಾವಿಸುತ್ತೇನೆ. ಇದು ಒಪ್ಪಿಗೆಯಾಗಿದೆ ಎಂದುಕೊಳ್ಳುತ್ತೇನೆ.

**ಪಂಡಿತ್ ಗೋವಿಂದ್ ಮಾಳವಿಯಾ** : ಮಾನ್ಯರೆ, ಸರಿಯಾದ ಕ್ರಮವೆಂದರೆ ಎಲ್ಲ ನಿಯಮಗಳನ್ನೂ ಪುನರಾಂಕಿತಗೊಳಿಸಿ, ಔಪಚಾರಿಕವಾಗಿ ಸದನದ ಮುಂದೆ ಇಡೀ ಪಟ್ಟಿಯನ್ನು ಒಟ್ಟಾರೆ ತರಬಹುದು. ನಂತರ ಮತ್ತೆ ಚರ್ಚೆಗೆ ಅವಕಾಶಕೊಡದಂತೆ ಅಂಗೀಕರಿಸಬಹುದು, ಅದು ಎಲ್ಲವನ್ನೂ ಕ್ರಮಬದ್ಧಗೊಳಿಸುತ್ತದೆ.

**ಅನೇಕ ಗೌರವಾನ್ವಿತ ಸದಸ್ಯರು** : ಏಕೆ?

**ಮಾನ್ಯ ಅಧ್ಯಕ್ಷರು** : ನಾವು ಮುಂದಿನ ಬಾಬನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

**ಶ್ರೀ ದೇಶಬಂಧು ಗುಪ್ತ** : (ದೆಹಲಿ) ಮುಂದಿನ ಬಾಬನ್ನು ಪರಿಶೀಲಿಸುವ ಮುನ್ನ ನಾನೊಂದು ತಿದ್ದುಪಡಿ ನೋಟೀಸು ಕೊಟ್ಟಿದ್ದೆ. ಅದೇನಾಯಿತು?

**ಮಾನ್ಯ ಅಧ್ಯಕ್ಷರು** : ಅದರ ಗತಿಯೂ ಶ್ರೀಪ್ರಕಾಶ ಅವರ ತಿದ್ದುಪಡಿಗಾದುದೆ.

**ಶ್ರೀ ದೇಶಬಂಧು ಗುಪ್ತ** : ತಿದ್ದುಪಡಿಯ ಪ್ರಾಮುಖ್ಯದಿಂದಾಗಿ ಅದನ್ನು ಸಭೆಯ ಅನುಮತಿ ಪಡೆದು ಈಗಲೇ ಚರ್ಚೆಗೆ ತೆಗೆದುಕೊಳ್ಳಬಹುದು.

**ಮಾನ್ಯ ಅಧ್ಯಕ್ಷರು** : ಮತ್ತದೇ ಕಸರತ್ತು ಬೇಡಿ. ಅದನ್ನು ಅಲ್ಲಿಗೆ ಬಿಡಿ.

ನಾವು ಕಾರ್ಯಸೂಚಿಯ ಮುಂದಿನ ಬಾಬಿಗೆ ಹೋಗೋಣ. ಸರ್ದಾರ್ ವಲ್ಲಭಭಾಯಿ ಪಟೇಲರು ತಮ್ಮ ಹೆಸರಿನಲ್ಲಿರುವ ಪ್ರಸ್ತಾವವನ್ನು ಪ್ರಸ್ತಾಪಿಸುವರು.

**ಶ್ರೀ ತಾಜುಮಲ್ ಹುಸೇನ್** : (ಬಿಹಾರ್–ಮುಸ್ಲಿಮ್) : ಮುಂದಿನ ಪ್ರಸ್ತಾವವನ್ನು ಕುರಿತು ಚರ್ಚಿಸುವ ಮುಂಚೆ ಸುಮಾರು ನಾಲ್ಕು ದಿನಗಳ ಹಿಂದೆ ನಾನು ಕಳುಹಿಸಿದ್ದ ಪ್ರಸ್ತಾವದ ಬಗ್ಗೆ ತಿಳಿಯಬೇಕಿದೆ. ಅದಕ್ಕೂ ಈಗ ಪ್ರಸ್ತಾಪಿಸುವ ಪ್ರಸ್ತಾವಕ್ಕೂ ಸಂಬಂಧವಿದೆ.

**ಮಾನ್ಯ ಅಧ್ಯಕ್ಷರು** : ನಾನು ಅಂದುಕೊಂಡಂತೆ ಈಗಾಗಲೇ ತನ್ನ ಪ್ರಕಾರ್ಯವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಿದ ಸಮಿತಿಯನ್ನು ವಿಸರ್ಜಿಸಬೇಕೆಂಬುದುದು. ಅದಲ್ಲವೆ ನೀವು ಪ್ರಸ್ತಾಪಿಸುತ್ತಿರುವುದು.

**ಶ್ರೀ ತಾಜುಮಲ್ ಹುಸೇನ್** : ಅದೊಂದು ನಿರ್ಣಯವನ್ನು ತಮಗೆ ಕಳುಹಿಸಿದ್ದೇನೆ.

**ಮಾನ್ಯ ಅಧ್ಯಕ್ಷರು** : ಅದು ಈಗ ನಿರರ್ಥಕವೆಂದು ನಿರ್ಣಯಿಸಿದ್ದೇವೆ. ಏಕೆಂದರೆ, ಸಮಿತಿಯ ಪ್ರಕಾರ ಈಗಾಗಲೆ ಪೂರ್ಣಗೊಂಡಿದೆ. ಮತ್ತು ತನ್ನ ವರದಿಯನ್ನು ಸಲ್ಲಿಸಿದೆ.

**ಶ್ರೀ ತಾಜುಮಲ್ ಹುಸೇನ್** : ಒಬ್ಬ ಸದಸ್ಯ ನಿರ್ಣಯವನ್ನು ಕಳುಹಿಸಿದಾಗ ಅದನ್ನು ತಿರಸ್ಕರಿಸಲಾಗಿದೆ. ಎಂದು ತಿಳಿಸದಿರುವುದು ಸದನದ ಪದ್ಧತಿಯೇ? ಈ ಬಗ್ಗೆ ನನಗೆ ಅದರ ಮಾಹಿತಿಯೇ ತಲುಪಿಲ್ಲ.

**ಮಾನ್ಯ ಅಧ್ಯಕ್ಷರು** : ಅದು ವ್ಯರ್ಥವೆಂದು ನಾನು ನಿರ್ಣಯಿಸಿದ್ದೇನೆ.

**ಶ್ರೀ ತಾಜುಮಲ್ ಹುಸೇನ್** : ನಾನು ತಮ್ಮ ನಿರ್ಣಯವನ್ನು ಅಂಗೀಕರಿಸಿದ್ದೇನೆ. ಅದರೆ ನನಗೆ ಅದರ ಬಗ್ಗೆ ಮಾಹಿತಿ ತಲುಪಿಲ್ಲವೇಕೆ ಎಂದು ಕೇಳುತ್ತಿದ್ದೇನೆ. ಅದು ಪದ್ಧತಿಯೇ? ಒಬ್ಬ ಗೌರವಾನ್ವಿತ ಸದಸ್ಯ ನಿರ್ಣಯವನ್ನು ಕಳುಹಿಸಿದಾಗ, ನೀವು ತಿರಸ್ಕರಿಸುತ್ತೀರಿ. ಅದರ ಮಾಹಿತಿ ಕೊಡುವುದಿಲ್ಲವೇಕೆ?

**ಮಾನ್ಯ ಅಧ್ಯಕ್ಷರು** : ನಾನು ಆ ನಿರ್ಣಯವನ್ನು ಅನುಮತಿಸದಿದ್ದಾಗ, ಅದರ ಬಗ್ಗೆ ಸದಸ್ಯರಿಗೆ ತಿಳಿಸುವಂತೆ ಎಚ್ಚರಿಕೆ ತೆಗೆದುಕೊಳ್ಳುತ್ತೇನೆ.

**ಮಾದರಿ ಪ್ರಾಂತೀಯ ಸಂವಿಧಾನದ ಮೂಲತತ್ತ್ವಗಳನ್ನು ಕುರಿತ ವರದಿ:**

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ೩೦ ಏಪ್ರಿಲ್ ೧೯೪೭ರ ಸಭೆಯಿಂದ ಅಂಗೀಕೃತವಾದ ನಿರ್ಣಯದ ಮೇರೆಗೆ ನಿಯುಕ್ತವಾದ ಸಮಿತಿ, ಮಾದರಿ ಪ್ರಾಂತೀಯ ಸಂವಿಧಾನದ ನಿಯಮಗಳನ್ನು ಕುರಿತು ಸಲ್ಲಿಸಿರುವ ವರದಿಯನ್ನು *ಸದನವು ಪರಿಗಣಿಸಬೇಕೆಂದು ಮಂಡಿಸುತ್ತೇನೆ.

ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಅದನ್ನು ಸಭೆಯಲ್ಲಿರುವ ಸದಸ್ಯರಿಗೆ ಈಗ್ಗೆ ಹದಿನೈದು ದಿನಗಳ ಹಿಂದೆ ಪರಿಚಯಿಸಲಾಗಿದೆ. ವರದಿಯು ಎಲ್ಲ ಸದಸ್ಯರ ಬಳಿಯೂ ಇದೆ

ಈ ಪ್ರಸ್ತಾವವನ್ನು ಪ್ರಸ್ತಾವಿಸುವಾಗ, ಇದು ಪ್ರಾಂತೀಯ ಸಂವಿಧಾನದ ಅಂತಿಮ ಕರಡಲ್ಲ ಎಂಬ ಅಂಶವನ್ನು ಸೂಚಿಸಲು ಬಯಸುತ್ತೇನೆ. ಸಮಿತಿಗೆ ನೀಡಿದ್ದ ಸೂಚನಾಸಾರ, ಅದು ಸಂವಿಧಾನದ ಕೆಲವು ನಿಯಮಗಳಿಗೆ ಸ್ಪಷ್ಟ ರೂಪ ಕೊಟ್ಟಿದೆ. ಆದುದರಿಂದ ಸದನವು ಅದರ ಶಾಬ್ದಿಕ ವಿವರಕ್ಕೆ ಹೋಗಬೇಕಿಲ್ಲ. ಅಥವಾ ಜ್ಞಾಪನಪತ್ರದಲ್ಲಿ ತಿಳಿಸಿರುವ ವಾಕ್ಯಖಂಡಗಳ ಖಚಿತ ಕಾನೂನು ಅಥವಾ ಸಂವಿಧಾನಿಕ ನಮೂನೆಯ ಬಗ್ಗೆಯೂ ಆಲೋಚಿಸಬೇಕಿಲ್ಲ. ವರದಿಯಲ್ಲಿರುವ ವಿವಿಧ ವಾಕ್ಯಖಂಡಗಳನ್ನು ಪರಿಶೀಲಿಸಿ ಅಂಗೀಕರಿಸಿದರೆ ಅಥವಾ ಅದಕ್ಕೆ ಸುಧಾರಣೆ ತಂದರೆ ಸಾಕಾಗುತ್ತದೆ. ಮುಂದೆ ಸಂವಿಧಾನವನ್ನು ಸೂಕ್ತ ಕರಡು ರೂಪಕ್ಕೆ ತರುವ ಮತ್ತು ಈ ವಾಕ್ಯಖಂಡಗಳನ್ನು ಅಳವಡಿಸುವ ಕೆಲಸವನ್ನು ವಕೀಲರಿಗೆ ಮತ್ತು ಕರಡು ತಯಾರಕರಿಗೆ ವಹಿಸುತ್ತೇನೆ. ಆದುದರಿಂದ ವಿವಿಧ ವಾಕ್ಯಖಂಡಗಳ ಭಾಷೆಯನ್ನು ಪರಿಶೀಲಿಸುವ ಗೋಜಿಗೆ ಸದನವು ಹೋಗಿ ತನ್ನ ಕಾಲವನ್ನು ವ್ಯರ್ಥಗೊಳಿಸುವ ಅಗತ್ಯವಿಲ್ಲ. ಮತ್ತು ಬಂದಂಶವನ್ನು ನೆನಪಿನಲ್ಲಿಡಬೇಕು. ಈ ವರದಿಯು ತಯಾರಾಗುವ ಕರಡಿನ ಶೇಕಡಾ ೮೫ರಷ್ಟು ಅಥವಾ ಪ್ರಾಂತೀಯ ಸಂವಿಧಾನದ ನಿಯಮಗಳ ಶೇಕಡ ೮೫ರಷ್ಟು ಒಳಗೊಂಡಿದೆ. ಏಕೆಂದರೆ, ತಮಗೆ ನೆನಪಿರುವಂತೆ, ಈ ಸದನವು ನೇಮಕಮಾಡಿರುವ ಸಲಹಾ ಸಮಿತಿ ತನ್ನ ವರದಿಯನ್ನು ಸಲ್ಲಿಸಬೇಕು. ಅದು ನಂತರದಲ್ಲಿ, ಅಲ್ಪಸಂಖ್ಯಾತರ ಸಮಿತಿ, ಮತ್ತು ಬುಡಕಟ್ಟು ಮತ್ತು ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶಗಳ ಸಮಿತಿಯ ವರದಿಗಳು ಬಂದ ಮೇಲೆ, ಸಲ್ಲಿಸಲ್ಪಡುತ್ತೆ. ಆ ವರದಿಗಳು ಇನ್ನೂ ತಲುಪಿಲ್ಲ. ಅವು ತಲುಪಿದ ಮೇಲೆ, ಮುಂದೆ ಕಾಲಾನಂತರ ಸಲಹಾ ಸಮಿತಿ ಸಭೆ ಸೇರುತ್ತದೆ. ಈ ವರದಿಗಳನ್ನು ಪರಿಶೀಲಿಸುತ್ತದೆ. ಆಗಲೇ, ಅಲ್ಪಸಂಖ್ಯಾತರ ರಕ್ಷಣೆ, ಅವರ ಹಕ್ಕುಗಳು ಮತ್ತು ಹಿತಾಸಕ್ತಿಯವನ್ನು ರಕ್ಷಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಈ ತಿಂಗಳಿನಲ್ಲಿ ಸಲಹಾ ಸಮಿತಿಸಭೆ ಸೇರುವುದೆಂದು ತೀರ್ಮಾನಿಸಲಾಗಿದೆ. ಸದನವು ಮುಕ್ತಾಯಗೊಳ್ಳುವುದರೊಳಗೆ ಅಥವಾ ಮತ್ತು ಸಮಾವೇಶಗೊಳ್ಳುವಷ್ಟರಲ್ಲಿ, ವರದಿಯನ್ನು ಸಿದ್ಧಗೊಳಿಸಿ, ಸಲ್ಲಿಸುವಂತೆ ನಿರ್ಧರಿಸಲಾಗಿದೆ. ಆದುದರಿಂದ ಆ ವರದಿಯು, ಮುಂದೊಂದು ಹಂತದಲ್ಲಿ ಹೊರಬೀಳುತ್ತದೆ.

ನಿಮ್ಮ ಮುಂದೆ ಜ್ಞಾಪನ ಪತ್ರವಿದೆ. ಅದನ್ನು ವ್ಯವಹರಿಸುವಾಗ, ಕರಡಿನ ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತೇನೆ. ಮೊದಲ ಪ್ರಶ್ನೆಗೆ ಸಹಜವಾಗಿಯೇ ಬಂದುದೆಂದರೆ, ಪ್ರಾಂತೀಯ ಸಂವಿಧಾನ ಏಕರೂಪಿಯಾಗಿರಬೇಕೋ ಅಥವಾ ಫೆಡೆರಲ್ ರೂಪಿಯಾಗಿರಬೇಕೋ ಎಂಬುದು. ಪ್ರಶ್ನೆ ಕುರಿತ ಕಿಂಚಿತ್ ಭಿನ್ನಾಭಿಪ್ರಾಯವಿತ್ತು. ಆಗ ಪ್ರಾಂತೀಯ ಸಂವಿಧಾನ ರಚನಾಸಮಿತಿಯ ಜಂಟಿ ಅಧಿವೇಶನ ಇರುವುದು ಸೂಕ್ತವೆಂದು ಸಮಿತಿ ಅಭಿಪ್ರಾಯ ಪಟ್ಟಿತು. ಇವೆರಡೂ ಸಮಿತಿಗಳೂ ಸಭೆ ಸೇರಿದುವು. ಈ ದೇಶಕ್ಕೆ ಸಂಸತ್ ಪದ್ಧತಿಯ ಸಂವಿಧಾನ, ಎಂದರೆ ನಮಗೆ ಪರಿಚಯವಿರುವ, ಬ್ರಿಟಿಷ್ ಮಾದರಿಯ ಸಂವಿಧಾನವನ್ನು ಹೊಂದುವುದು ಸೂಕ್ತವೆಂದು ಎರಡೂ ಸಮಿತಿಗಳು ನಿರ್ಧರಿಸಿದವು: ಎರಡೂ ಸಮಿತಿಗಳು ಒಪ್ಪಿದುವು. ಅದರಂತೆ ಪ್ರಾಂತೀಯ ಸಂವಿಧಾನ ಸಮಿತಿ ಸಂಸದೀಯ ಪದ್ಧತಿಯ ಈ ಸಂವಿಧಾನವಿರಬೇಕೆಂದು ಸಲಹೆ

ಮಾಡಿತು. ೯ನೇ ವಾಕ್ಯಖಂಡದಲ್ಲಿ ನಮೂದಿಸಿರುವ ಬಾಬುಗಳ ಬಗ್ಗೆ ಕೆಲವೊಂದು ಭಿನ್ನಾಭಿಪ್ರಾಯ ತಲೆದೋರಬಹುದು. ೯ನೇ ವಾಕ್ಯಖಂಡ, ಟಿಪ್ಪಣಿಯ ಅಡಿಯಲ್ಲಿ ನಾಲ್ಕು ಬಾಬುಗಳನ್ನು ಒದಗಿಸಿದೆ. ಮೊದಲನೆಯದು, ಪ್ರಾಂತ್ಯ ಅಥವಾ ಯಾವುದೇ ಭಾಗದ ಶಾಂತಿ ಮತ್ತು ನೆಮ್ಮದಿಗೆ ಭಂಗತರುವ ಉಪದ್ರವದ ಪ್ರತಿರೋಧ, ಅರ್ಥಾತ್ ಪ್ರಾಂತ್ಯದಲ್ಲಿ ಶಾಂತಿ ನೆಮ್ಮದಿಗೆ ಭಂಗತರುವ ಗಂಭಿರ ಸ್ವರೂಪದ ಉಪದ್ರವದ ಪ್ರತಿರೋಧಕ್ಕೆಂದು ರಾಜ್ಯಪಾಲರಿಗೆ ಪ್ರಾಯಶಃ ಅಧಿಕಾರ ವಹಿಸಿ ಕೊಡಬೇಕಾಗುತ್ತೆ. ಅದು ಸಮಿತಿಯ ನೈಜ ಉದ್ದೇಶವಾಗಿರಲಿಕ್ಕಿಲ್ಲ ಸಮಿತಿ ಈ ಪ್ರಶ್ನೆಯನ್ನು ಹುಟ್ಟುಹಾಕಿದೆ. ಇದರ ಉದ್ದೇಶ, ಪ್ರಾಂತೀಯ ಶಾಂತಿಯ ಭಂಗಕ್ಕೆ ಕಾರಣವಾದ ಗಂಭೀರ ಸನ್ನಿವೇಶದ ಬಗ್ಗೆ ಒಕ್ಕೂಟಕ್ಕೆ ವರದಿ ಮಾಡುವವರೆಗಷ್ಟೆ ಅವರ ಅಧಿಕಾರವನ್ನು ಸೀಮಿತಗೊಳಿಸಬೇಕೆಂಬ ಸಮಿತಿಯ ಆಶಯವನ್ನು ರವಾನಿಸುವುದು. ಈ ಅಧಿಕಾರವನ್ನು ರಾಜ್ಯಪಾಲರಿಗೆ ಕೊಡುವುದರಿಂದ ಅವರು ಅಧಿಕಾರ ಚಲಾಯಿಸಿ, ತನ್ನಧೀನ ಸಚಿವಾಲಯಕ್ಕೂ ರಾಜ್ಯಪಾಲರಿಗೂ ನಡುವೆ ತಾಕಲಾಟ ಏರ್ಪಡುವುದು, ಸಮಿತಿಯ ಸದಸ್ಯರ ಉದ್ದೇಶವಾಗಿರಲಿಲ್ಲ. ವಿವಿಧ ಸೇವಾ ವ್ಯವಸ್ಥೆಗಳ ಮೇಲೆ ರಾಜ್ಯಪಾಲರಿಗೆ ನಿಯಂತ್ರಣವಿರುವುದಿಲ್ಲ. ಎಲ್ಲ ಅಧಿಕಾರವೂ ಸಚಿವ ಖಾತೆಗೆ ವಹಿಸಿಕೊಟ್ಟಿರುತ್ತೆ. ಆದುದರಿಂದ, ದೇಶದಲ್ಲಿ ಈಗ ಉದ್ಭವಿಸಿರುವ ಸನ್ನಿವೇಶದಲ್ಲಿ, ಸ್ಥಿತಿಗತಿಗಳಲ್ಲಿ, ಈ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ ದೇಶದಲ್ಲಿ ಈಗಿರುವ ವಿಚಿತ್ರವಾದ ಅಸ್ಥಿರ ಪರಿಸ್ಥಿತಿಯಲ್ಲಿ, ರಾಜ್ಯಪಾಲರಿಗೆ ಒಂದಿಷ್ಟು ಸೀಮಿತ ಅಧಿಕಾರವನ್ನು ಕೊಡುವುದು ಮೇಲೆಂದು ಕೆಲವರು ಅಭಿಪ್ರಾಯಪಟ್ಟರು. ಅದರ ಪರಿಣಾಮವಾಗಿ ಸಮಿತಿ ಒಂದು ನಿರ್ಧಾರಕ್ಕೆ ಬಂದಿತು. ರಾಜ್ಯಪಾಲರಿಗೆ ಅಧಿಕಾರ ವಹಿಸಿಕೊಡುವುದು ಕಾರ್ಯಸಾಧ್ಯವಿಲ್ಲ; ಅದು ಬಿಕ್ಕಟ್ಟಿಗೆ ಕಾರಣವಾಗುತ್ತದೆ. ಆದುದರಿಂದ ಅವರಿಗೆ ಸೀಮಿತ ಅಧಿಕಾರವನ್ನು ನೀಡುವುದು ಸೂಕ್ತ. ಏನಿದ್ದರೂ ಒಕ್ಕೂಟದ ಅಧ್ಯಕ್ಷರಿಗೆ ಪರಿಸ್ಥಿತಿಯನ್ನು ಕುರಿತ ವರದಿ ಕಳುಹಿಸಿಕೊಡುವ ಅಧಿಕಾರ ಅವರಿಗೆ ಇರುತ್ತದೆ. ಒಕ್ಕೂಟದ ಅಧ್ಯಕ್ಷರು ಯಾವ ಕ್ರಮ ಕೈಗೊಳ್ಳಬಹುದು ಯಾವ ಅಧಿಕಾರವನ್ನು ಚಲಾಯಿಸಬಹುದು ಎಂಬುದನ್ನು ಒಕ್ಕೂಟದ ಅಧಿಕಾರ ಸಮಿತಿಯು ಒಕ್ಕೂಟದ ಸಂವಿಧಾನದಲ್ಲಿ ವಿಶದಪಡಿಸುತ್ತದೆ. ಆದರೆ ಪ್ರಾಂತೀಯ ಸಂವಿಧಾನದ ಮಟ್ಟಿಗೆ ಹೇಳುವುದಾದರೆ ರಾಜ್ಯಪಾಲರಿಗೆ ಸೀಮಿತ ಅಧಿಕಾರವನ್ನು ವಹಿಸಿಕೊಡುವ ಬಗ್ಗೆ ಒಮ್ಮತವಿತ್ತು.

ನಂತರ, ೯ನೇ ಖಂಡದ ಎರಡನೇ ಬಾಬನ್ನು ತಾವು ಗಮನಿಸಬಹುದು: ಪ್ರಾಂತೀಯ ಶಾಸನ ಸಭೆಯನ್ನು ಕರೆದು ವಿಸರ್ಜಿಸುವ ಅಂಶ. (ಈ ಭಾಗದ ೨೧ನೇ ಖಂಡ) ಇದೊಂದು ಸ್ವಾಭಾವಿಕ ಅಧಿಕಾರ. ಇದು ಪ್ರತಿಯೊಂದು ಸಂವಿಧಾನದಲ್ಲೂ ರಾಜ್ಯಪಾಲರಿಗೆ ವಹಿಸಿಕೊಡಲ್ಪಟ್ಟ ಅಧಿಕಾರ ಆದುದರಿಂದ ಅದರಲ್ಲೇನು ವಿಶೇಷವಿಲ್ಲ.

ಮೂರನೇ ಬಾಬು ಚುನಾವಣೆಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ ನ್ಯಾಯಸಮ್ಮತ ಚುನಾವಣೆಯ ಖಾತರಿಗಾಗಿ, ಒಕ್ಕೂಟದ ಸಂವಿಧಾನ ಅಧ್ಯಕ್ಷರು ಒಂದು ಆಯೋಗವನ್ನು ರಚಿಸಬೇಕು. ಆಯೋಗ, ಪಕ್ಷಗಳ ಪ್ರಭಾವಕ್ಕೆ ಒಳಗಾಗಬಾರದು. ಅದರಿಂದ ಎಲ್ಲ ಪ್ರಾಂತ್ಯಗಳಲ್ಲಿ ನ್ಯಾಯಸಮ್ಮತ ಚುನಾವಣೆ ನಡೆಯುವ ಖಾತರಿ ಪಡೆಯಬಹುದೆಂಬುದು ಸಮಿತಿಯ ಶಿಫಾರಸ್ಸು; ಮೂಲಭೂತ ಹಕ್ಕುಗಳನ್ನು ಈ ಸದನವು ಅಂಗೀಕರಿಸಿದಾಗ, ಶಿಫಾರಸ್ಸನ್ನು ಅಂಗೀಕರಿಸಲಾಯಿತೆಂದುಕೊಳ್ಳುತ್ತೇವೆ. ಆದುದರಿಂದ ಈ ಖಂಡವನ್ನು ಹಿಂದೆ ಅಂಗೀಕರಿಸಿದ ನಿರ್ಣಯದೊಡನೆ ಸಮನ್ವಯಗೊಳಿಸಬೇಕಾಗುತ್ತದೆ.

ನಂತರ ನಾಲ್ಕನೆಯ ಬಾಬು–ಎಂದರೆ ಪ್ರಾಂತೀಯ ಲೋಕ ಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿ. ಅಂತೆಯೇ ಪ್ರಾಂತೀಯ ಲೆಕ್ಕಪರಿಶೋಧಕರ ಮಹಾಲೇಖಪಾಲರು ನೇಮಕಾತಿ; ಸಚಿವ ಸಂಪುಟದ ಶಿಫಾರಸ್ಸಿನಂತೆ ಈ ವಿಷಯದಲ್ಲೂ ಪ್ರಾಂತೀಯ ಲೋಕ ಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ಸಾಮಾನ್ಯವಾಗಿ ನಡೆಯುತ್ತದೆ.

ಆದುದರಿಂದ ನಾವು ೯ನೇ ಖಂಡವನ್ನು ವಿಶ್ಲೇಷಿಸಿದಾಗ, ಪ್ರಾಂತೀಯ ರಾಜ್ಯಪಾಲರಿಗೆ ವಹಿಸಿರುವ

ಒಂದೇ ಅಧಿಕಾರವೆಂದರೆ, ಗಂಭೀರವಾಗಿ ತುರ್ತುಪರಿಸ್ಥಿತಿ ಉದ್ಭವವಾಗಿ, ಪ್ರಾಂತೀಯ ಶಾಂತಿ ಮತ್ತು ನೆಮ್ಮದಿಗೆ ಭಂಗ ಬಂದಾಗ ಅದನ್ನು ಒಕ್ಕೂಟದ ಅಧ್ಯಕ್ಷರಿಗೆ ವರದಿ ಮಾಡುವುದು, ಶಾಸನಸಭೆ ಕರೆಯುವುದು ಮತ್ತು ವಿಸರ್ಜಿಸುವುದು.

೯ನೇ ಖಂಡವನ್ನು ಕುರಿತು ವಿಶ್ಲೇಷಿಸಿದ ನಂತರ ನಾವು ನೋಡಬೇಕಾದುದು ವಿಧಾನಮಂಡಲದ ರಚನೆ ಕುರಿತ ಸಮಿತಿಯ ಶಿಫಾರಸ್ಸು ಶಾಸನಸಭೆಯಲ್ಲಿ ಎರಡು ಸದನಗಳಿರಬೇಕೆ ಅಥವಾ ಒಂದೇ ಸದನವೇ ಎಂಬುದನ್ನು ತೀರ್ಮಾನಿಸುವುದು.

ಸಾಮಾನ್ಯವಾಗಿ ಶಾಸನಸಭೆಯಲ್ಲಿ ಒಂದೇ ಸದನವಿರಬೇಕೆಂದು ಸಮಿತಿಯು ಒಪ್ಪಿತು. ಉಭಯ ಸದನಗಳಿರಬೇಕೆಂದು ಯಾವುದೇ ಪ್ರಾಂತ್ಯ ಇಚ್ಛಿಸಿದರೆ, ಆ ಪ್ರಾಂತ್ಯ ಅಂತಹ ಶಾಸನಸಭೆಯನ್ನು ರಚಿಸುವ ಸ್ವಾತಂತ್ರ್ಯ ಹೊಂದಿರಬೇಕು. ಅಂದರೆ ಮೇಲ್ಮನೆಯ ರಚನೆಯ ಸ್ವಾತಂತ್ರ್ಯ ಹೊಂದಿರಬೇಕು. ಆದರೆ ಮೇಲ್ಮನೆಯ ರಚನೆಯು ಸಮಿತಿಯ ಅಭಿಪ್ರಾಯಕ್ಕೆ ಅನುಗುಣವಾಗಿ ಐರ್ಲೆಂಡ್‌ನ ಶಾಸನಸಭೆಯ ಮಾದರಿಯಲ್ಲಿರಬೇಕು. ಅಲ್ಲಿ, ಒಂದಿಷ್ಟು ಪ್ರತಿ ಶತವನ್ನು ಔಪಚಾರಿಕ ಪ್ರಾತಿನಿಧ್ಯದ ಮೇಲೆ ಚುನಾಯಿಸಲಾಗುವುದು' ಮತ್ತೊಂದಿಷ್ಟು ಪ್ರತಿಶತವನ್ನು ನಾಮ ನಿರ್ದೇಶನ ಮಾಡಲಾಗುವುದು; ಚುನಾವಣೆಗೂ ಅವಕಾಶ ಕಲ್ಪಿಸಬೇಕು. ಎರಡನೇ ಸದನದ ಬಗ್ಗೆ ಸಮಿತಿಯ ಶಿಫಾರಸ್ಸು ಕಿಂಚಿತ್ ಭಿನ್ನವಾಗಿರುತ್ತದೆ. ಅದೆಂದರೆ, ಚುನಾಯಿತ ಪ್ರತಿನಿಧಿಗಳು ಅರ್ಧದಷ್ಟಿರುತ್ತಾರೆ. ಕೆಲವು ವಿಶೇಷ ಆಸಕ್ತಿಗಳಿಗೆ, ಎಂದರೆ ಮಹಿಳೆಯರು, ಕಾರ್ಮಿಕರು ವಾಣಿಜ್ಯ ಕೈಗಾರಿಕೆ ಇತ್ಯಾದಿಗೆ, ಕೆಳಮನೆಯಲ್ಲಿ ಪ್ರಾತಿನಿಧ್ಯವಿರುತ್ತದೆ. ಇದೊಂದು ನ್ಯಾಯಸಮ್ಮತ ಉಪಬಂಧ. ಐರಿಷ್ ಸದನದ ಮಾದರಿಯಲ್ಲಿರುತ್ತದೆ.

ಉಚ್ಚನ್ಯಾಯಾಲಯ ನ್ಯಾಯಾಧೀಶರ ನೇಮಕಾತಿಯ ಬಗ್ಗೆ ಸಮಿತಿ ವಿಶೇಷ ಗಮನ ಹರಿಸಿದೆ. ಇದನ್ನು ಸಮಿತಿಯು ಬಹಳ ಮುಖ್ಯವೆಂದು ಪರಿಗಣಿಸಿದೆ. ನ್ಯಾಯಿಕ ವ್ಯವಸ್ಥೆ ಸಂಶಯಾತೀತವಾಗಿರಬೇಕು. ಪಕ್ಷಗಳ ಪ್ರಭಾವಕ್ಕೆ ಮಣಿಯಬಾರದು, ಹಾಗಾಗಿ ಸರ್ವೋಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ಪ್ರಾಂತೀಯ ಉಚ್ಚನ್ಯಾಯಾಲಯದ ನ್ಯಾಯಾಧೀಶರು, ಸಂಬಂಧಿಸಿದ ಪ್ರಾಂತ್ಯಗಳ ಮುಖ್ಯ ಮಂತ್ರಾಲಯದ ಸಲಹೆ ಪಡೆದ ರಾಜ್ಯಪಾಲರೊಡನೆ ಸಮಾಲೋಚಿಸಿ, ಒಕ್ಕೂಟದ ಅಧ್ಯಕ್ಷರು, ಉಚ್ಚನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕಮಾಡಬೇಕೆಂದು ತೀರ್ಮಾನಿಸಲಾಯಿತು. ಆದುದರಿಂದ ಪ್ರಾಂತೀಯ ಉಚ್ಚ ನ್ಯಾಯಾಲಮಕ್ಕೆ ನ್ಯಾಯಾಧೀಶರನ್ನು ನೇಮಕಮಾಡುವ ಪ್ರಕ್ರಿಯೆ ಹಲವಾರು ಪರೀಕ್ಷೆಗಳಿಗೆ ಒಳಪಡುತ್ತದೆ. ಇವು ವಿಶೇಷ ಅಂಶಗಳು. ಸಮಿತಿಯು ನಿರ್ಧರಿಸಿರುವ ನಿಯಮ ಜ್ಞಾಪನಪತ್ರದಲ್ಲಿ ಅಡಕವಾಗಿದೆ. ಸಂವಿಧಾನದ ಉಳಿದ ಭಾಗಕ್ಕೆ ಪ್ರಸ್ತುತ ಚಾಲ್ತಿಯಲ್ಲಿರುವ ೧೯೩೫ರ ಅಧಿನಿಯಮಕ್ಕೆ; ಕೆಲ ಸೂಕ್ತ ಮಾರ್ಪಾಟುಗಳನ್ನು ಅಳವಡಿಸುವ ಮೂಲಕ ಕರಡು ತಯಾರಿಸಬೇಕೆಂದು ತೀರ್ಮಾನಿಸಲಾಯಿತು. ಆದುದರಿಂದ ಸಮಿತಿಯ ಈ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳುವಂತೆ ಪ್ರಸ್ತಾಪಿಸುತ್ತಿದ್ದೇವೆ. ಸದನ ಒಪ್ಪಿದಲ್ಲಿ ವರದಿಯನ್ನು ಒಂದಾದ ಮೇಲೊಂದು ಖಂಡದಂತೆ ಪರಿಶೀಲಿಸಹುದು.

**ಶ್ರೀ ಮೌಲಾನಾ ಹಸ್ರತ್ ಮೋಹಾನಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : *[ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರ ಸರ್ದಾರ್ ಪಟೇಲ್, ವರದಿಯನ್ನು ತಮ್ಮ ಮುಂದೆ ಸಾದರಪಡಿಸಿದ್ದಾರೆ. ಗೌರವಪೂರ್ವಕವಾಗಿ ನಾನೊಂದು ಆಕ್ಷೇಪಣೆಯನ್ನು ಎತ್ತುತ್ತಿದ್ದೇನೆ. ಅದೆಂದರೆ, ಒಕ್ಕೂಟದ ಸಂವಿಧಾನವನ್ನು ಮಂಡಿಸುವವರೆಗೆ, ಈ ವರದಿಯ ಪರಿಶೀಲನೆ ಯುಕ್ತವಲ್ಲ. ಪಟೇಲ್ ಸಾಹೇಬರೆ ಸ್ವತಃ ಹೇಳಿರುವಂತೆ, ಇದು ಅಂತಿಮ ವರದಿಯಲ್ಲ; ತಪ್ಪುಗಳಿದ್ದರೆ, ನಂತರ ಸರಿಪಡಿಸಬಹುದು, ಆದರೆ ಕಾರಣ ಅದಲ್ಲ. ಕೇವಲ ಶಾಬ್ದಿಕ ಬದಲಾವಣೆಯಷ್ಟೆ ಆಗಿದ್ದರೆ ನಾನು ಅಂಶವನ್ನು ಪ್ರಸ್ತಾಪಿಸುತ್ತಿರಲಿಲ್ಲ. ನಾನು ತಮಗೆ, ತಮ್ಮ ಮೂಲಕ ನನ್ನ ರಾಷ್ಟ್ರವಾದಿ ಹಾಗೂ ರಾಷ್ಟ್ರೀಯ ಸಮಾಜವಾದಿ ಮಿತ್ರರು ಈ ಸದನದಲ್ಲಿ ಯಾರಿದ್ದಾರೋ

ಅವರಿಗೆ ತಿಳಿಸಲು ಬಯಸುತ್ತೇನೆ. ಇದು ನನ್ನ ಮುಖ್ಯವಾದ ದೂರಗಾಮಿಯಾದ ಆಕ್ಷೇಪಣೆ, ಇದನ್ನು ತಾವು ಹಗುರವಾಗಿ ಕಡೆಗಣಿಸಿದರೆ, ಖಂಡಿತ ಮುಂದೆ ತಮ್ಮ ಈ ಕ್ರಮಕ್ಕೆ ಪಶ್ಚಾತ್ತಾಪ ಪಡಬೇಕಾಗುತ್ತದೆ.

ನನ್ನ ಸುತ್ತೆಲ್ಲ, ರಾಷ್ಟ್ರವಾದಿ ಸದಸ್ಯರನ್ನು ಹೊರತುಪಡಿಸಿ ಬೇರಾರೂ ಕಾಣಿಸುತ್ತಿಲ್ಲ. ಬಂಗಾಳದಿಂದ ಒಬ್ಬರು ಕಮ್ಯುನಿಸ್ಟ್ ಸದಸ್ಯರಿದ್ದರು. ಅದು ಹೇಗೊ ಅವರನ್ನು ಉಚ್ಚಾಟಿಸಲಾಯಿತು. ಫಾರ್ವರ್ಡ್‌ಬ್ಲಾಕ್ ಬಣದಿಂದ ಶರತ್ ಚಂದ್ರಬೋಸ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಸಂಯುಕ್ತ ಪ್ರಾಂತ್ಯದ ಶ್ರೀ ತ್ರಿಪಾಠಿ ಮತ್ತು ಕೇಂದ್ರೀಯ ಪ್ರಾಂತ್ಯದಿಂದ ಓರ್ವ ಫಾರ್ವರ್ಡ ಬ್ಲಾಕ್ ಸದಸ್ಯರು, ಕೆಲ ಅಜ್ಞಾತ ಕಾರಣಗಳಿಗಾಗಿ, ಇಲ್ಲಿ ಹಾಜರಿಲ್ಲ, ಆ ಎಲ್ಲ ಗೆಳೆಯರೆಲ್ಲರ ಅಭಿಪ್ರಾಯಗಳಲ್ಲಿ ನಿಮ್ಮ ಮುಂದೆ ಮಂಡಿಸುವುದು ನನ್ನ ಕರ್ತವ್ಯವಾಗಿದೆ.]*

**ಸರ್ದಾರ್ ವಲ್ಲಭಭಾಯಿ ಪಟೇಲ್ :** ಒಂದು ಕ್ರಿಯಾಲೋಪ. ಚರ್ಚೆ ಹಳಿ ತಪ್ಪಿದೆ. ನನಗೆ ಒಂದು ವಿಷಯ ಅರ್ಥವಾಗುತ್ತಿಲ್ಲ. ಸಂವಿಧಾನವು ಗಣತಂತ್ರ ಸಂವಿಧಾನವಾಗುವುದೆ ಇಲ್ಲವೆ ಎಂಬುದಕ್ಕೂ ಪ್ರಾಂತೀಯ ಸಂವಿಧಾನಕ್ಕೂ ಏನು ಸಂಬಂಧವಿಲ್ಲ ಅಥವಾ ಆಧಿಪತ್ಯದ ಸಂವಿಧಾನವಿರಬೇಕೇ ಬೇಡವೆ ಎಂಬುದಕ್ಕು ಪ್ರಾಂತೀಯ ಸಂವಿಧಾನಕ್ಕೂ ಏತರ ಸಂಬಂಧವಿಲ್ಲ. ಏಕೆಂದರೆ, ನಾವೀಗ ಚರ್ಚಿಸುತ್ತಿರುವುದು ಪ್ರಾಂತೀಯ ಸಂವಿಧಾನದ ಬಗ್ಗೆ ಆಧಿಪತ್ಯದ ಸಂವಿಧಾನವಿರಬೇಕೇ ಅಥವಾ ಗಣತಂತ್ರ ಸಂವಿಧಾನವಿರಬೇಕೆ ಎಂಬ ವಿಷಯ ಬಂದಾಗ, ಮೌಲಾನಾ ಹಜರತ್ ಮೊಹನಿ ಯಾವುದೇ ತಿದ್ದುಪಡಿಯನ್ನು ಪ್ರಸ್ತಾವಿಸಬಹುದು. ಅಥವಾ ಏನಾದರೂ ಮಾತನಾಡಬಹುದು, ಇಂದು ನಾವು ಕೇವಲ ಪ್ರಾಂತೀಯ ಸಂವಿಧಾನ ಕರಡಿನ ಬಗ್ಗೆ ಮಾತನಾಡುತ್ತಿದ್ದೇನೆ. ಅದು ಸ್ವತಂತ್ರ್ಯ ಭಾರತಕ್ಕೆ ಹೊಂದಿಕೊಳ್ಳುವಂತಹ ಸಂವಿಧಾನದ ಬಗ್ಗೆ ಆಧಿಪತ್ಯದ ಸ್ಥಾನಮಾನಕ್ಕೂ ಅಂತಸ್ತಿಗೂ ಇದಕ್ಕೂ ಸಂಬಂಧವಿಲ್ಲ, ಆದರೆ ಅದು ಗಣತಂತ್ರ ಸಂವಿಧಾನ ಹೊಂದಿಕೊಳ್ಳುವುದಾಗಿ, ಸಂವಿಧಾನ ರಚನಾಸಭೆ ಅಂಗೀಕರಿಸಿದ ನಿರ್ಣಯದಿಂದ ವ್ಯಕ್ತವಾಗುತ್ತದೆ. ಅದುದರಿಂದ ನಮ್ಮ ಪ್ರಸ್ತುತ ಪ್ರಸ್ತಾವಕ್ಕೆ ಸಂಬಂಧಿಸದ ವ್ಯಾಪಕ ವಿಷಯಗಳನ್ನು ಕುರಿತು ಮಾತನಾಡಲು ಅನುಮತಿ ನೀಡಬೇಕಿಲ್ಲ.

**ಶ್ರೀ ಮೌಲಾನಾ ಹಸ್ರತ್ ಮೋಹಾನಿ :** *[ದುರಾಲೋಚನೆಯೇನಾದರೂ ಇದ್ದಿದ್ದರೆ ನಾನು ಈ ರೀತಿಯಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರಲಿಲ್ಲ ಉದಾಹರಣೆಗೆ, ನಾವಿದೆಲ್ಲವನ್ನು ಜಾತೀಯ ಮನೋಭಾವ ದಿಂದಲೋ ವಿಳಂಬಕಾರಿ ತಂತ್ರಕ್ಕಾಗಿಯೋ ಆಡಿದ್ದರೆ ಅಲ್ಪಸಂಖ್ಯಾತ ವರದಿ ಸದನದ ಮುಂದೆ ಬರುವ ವರೆಗೆ ಈ ವರದಿಯನ್ನು ತಡೆಹಿಡಿಯುವಂತೆ ಕೇಳುತ್ತಿದ್ದೆ. ಪ್ರಶ್ನೆ ಇಷ್ಟೆ. ನೀವು ಕೆಲವೊಂದು ತತ್ತ್ವಗಳಿಗೆ ಬದ್ಧರಾಗಿ ಮುನ್ನಡೆಯಬೇಕು. ಪ್ರಾಂತೀಯ ಸಂವಿಧಾನವನ್ನು ಸದನದ ಮುಂದೆ ಒಕ್ಕೂಟದ ಸಂವಿಧಾನ ಮಂಡಿಸುವ ಮುನ್ನ ತರಬೇಡಿ.

ನಿಜ, ಪಂಡಿತ್ ನೆಹರು ಅವರು ಗಣತಂತ್ರದ ಧ್ಯೇಯೋದ್ದೇಶಗಳ ನಿರ್ಣಯವನ್ನು ಮಂಡಿಸಿದ್ದಾರೆ. ಆದರೆ, ಇದರ ಬಗ್ಗೆ ಒಂದಂಶ ಸ್ಪಷ್ಟವಾಗಿಲ್ಲ. ಉದ್ದೇಶಿತ ಗಣತಂತ್ರವು ಒಕ್ಕೂಟ ಮಾದರಿಯೋ ಅಥವಾ ಫೆಡೆರಲ್ ಮಾದರಿಯಾಗಿ ಎಂಬುದು ಅಸ್ಪಷ್ಟ. ಜೊತೆಗೆ ಅದು ಒಕ್ಕೂಟವಾಗಿದ್ದರೆ ಸರ್ಕಾರವು ಕೇಂದ್ರಾಪಗಾಮಿಯೋ ಅಥವಾ ಕೇಂದ್ರಾಭಿಗಾಮಿಯೋ ಎಂಬುದು ಇನ್ನು ನಿರ್ಧಾರವಾಗಿಲ್ಲ,

ನೀವು ನನ್ನ ಕೋರಿಕೆಗೆ ಒಪ್ಪದಿದ್ದರೆ, ನಮ್ಮ ಪಕ್ಷ ವಾಮಪಂಥೀಯರೊಡಗೂಡುತ್ತದೆ. ಮತ್ತು ಕಮ್ಯುನಿಸ್ಟ್ ಮತ್ತು ಫಾರ್ವರ್ಡ ಬ್ಲಾಕ್ ನೆರವಿನಿಂದ ತಾವು ಒಪ್ಪುವಂತೆ ಬಲಾತ್ಕರಿಸುತ್ತೇವೆ. ಅದನ್ನು ನಾನು ಹೀಗೂ ವಿವರಿಸಬಹುದು. ಒಕ್ಕೂಟದ ಸಂವಿಧಾನ ಸಮರ್ಪಕವಾಗಿ ರಚನೆಯಾಗದಿದ್ದರೆ, ಅಲ್ಲಿಯವರೆಗೂ ಪ್ರಾಂತ್ಯಗಳ ಪರಿಸ್ಥಿತಿ ಯಥಾಸ್ಥಿತಿಯಲ್ಲಿರುತ್ತದೆ. ಅದು ಪ್ರಾಂತೀಯ ಸ್ವಾಯತ್ತತೆಯಿಂದಾಚೆ ಸಾಗದು. ಭಾರತೀಯ ನಾಣ್ನುಡಿಯಂತೆ ನಾವು ಚಮ್ಮಾರರಾಗಿದ್ದೆವು; ಚಮ್ಮಾರರಾಗಿ ಉಳಿಯುತ್ತೇವೆ.

ಸರ್ದಾರ್ ಸಾಹೇಬರು, ಈಗಷ್ಟೆ ಮಂಡಿಸಿರುವ ವರದಿಯಲ್ಲಿ ರಾಜ್ಯಪಾಲರನ್ನು ನೇಮಕಮಾಡಲು ಬಯಸುತ್ತಾರೆಂದು ಚಾಣಾಕ್ಷತೆಯ ಹೇಳಿಕೆ ನೀಡಿದ್ದಾರೆ. ನೀವು ಮನಗಾಣವಂತೆ, ಸಮಗ್ರ ಒಕ್ಕೂಟದ ಸಂವಿಧಾನವೇ ವಿರೂಪಗೊಂಡು, ವಿಕೃತಗೊಂಡಿದೆ.

ಸರ್ದಾರ್ ಪಟೇಲರ ಸಲಹೆಯನ್ನು ನಾವು ಒಪ್ಪಿಕೊಂಡರೂ ಸಹ ಅದರ ಅರ್ಥ ಅತಿ ಸರಳ. ಪ್ರಾಂತ್ಯಗಳು ಪ್ರಾಂತೀಯ ಸ್ವಾಯತ್ತತೆಯನ್ನಷ್ಟೆ ಪಡೆಯುತ್ತದೆ. ಹೀಗಾಗುವುದಾದರೆ ನಿಮ್ಮ ಇಷ್ಟು ವರುಷಗಳ ತ್ಯಾಗ, ಶ್ರಮ ಮತ್ತು ಭಾರತ ಬಿಟ್ಟು ತೊಲಗಿ ನಿರ್ಣಯ ಒಂದಲ್ಲ ಎಲ್ಲವೂ ವ್ಯರ್ಥವಾಗುತ್ತದೆ.]*

**ಮಾನ್ಯ ಅಧ್ಯಕ್ಷರು :** ನನಗನಿಸುತ್ತದೆ, ಮೌಲಾನಾ ಹಸ್ರತ್ ಮೋಹನಿ ಅವರ ತಿದ್ದುಪಡಿ ಕ್ರಮಬದ್ಧವಾಗಿದೆ. ಅದನ್ನು ಎತ್ತಸೆಯುವ ಸ್ವಾತಂತ್ರ್ಯ ಸಭೆಗೆ ಬಿಟ್ಟಿದ್ದು.

**ಶ್ರೀ ಮೌಲಾನಾ ಹಸ್ರತ್ ಮೋಹಾನಿ :** *[ಇಲ್ಲಿಯವರೆಗೂ, ತಾವು ಹೇಳುತ್ತಿದ್ದುದು, ನಾವು ಸ್ವತಂತ್ರ ಗಣರಾಜ್ಯವನ್ನು ಸ್ಥಾಪಿಸುತ್ತೇವೆ. ಪಕ್ಷಗಳನ್ನು ರಚಿಸುವುದು ಮತದ ಆಧಾರದ ಮೇಲಲ್ಲ, ಸಮಾಜವಾಗಿ ತತ್ತ್ವಗಳ ಮೇಲೆ ಎಂದು]*

**ಮಾನ್ಯ ಅಧ್ಯಕ್ಷರು :** *[ಅದಲ್ಲ ಪ್ರಶ್ನೆ. ಪ್ರಸ್ತುತದಲ್ಲಿ ಸರಳವಾದ ಪ್ರಶ್ನೆಯೆಂದರೆ, ವರದಿಯನ್ನು ಪರಿಶೀಲಿಸಬೇಕೆ ಬೇಡವೆ?

**ಶ್ರೀ ಮೌಲಾನಾ ಹಸ್ರತ್ ಮೊಹಾನಿ :** ನಾನು ಹೇಳುವುದೇನೆಂದರೆ, ನೀವು ಪ್ರಾಂತೀಯ ಸಂವಿಧಾನವನ್ನು ಹಿಂಬಾಗಿಲಿನಿಂದ ತರುತ್ತಿದ್ದೀರಿ.]*

**ಮಾನ್ಯ ಅಧ್ಯಕ್ಷರು :** *[ತಾವಾಗಲೆ ಕಾರಣಗಳನ್ನು ಹೇಳಿದ್ದೀರಿ. ನಿಮ್ಮ ಗಣತಂತ್ರ ಗಣರಾಜ್ಯದ ಕುರಿತು ಮತ್ತೆಲ್ಲ ಪ್ರಶ್ನೆಗಳ ಬಗ್ಗೆ ಚರ್ಚಿಸಲು ಇದು ಸಂದರ್ಭವಲ್ಲ ಎಂಬುದನ್ನು ಮರೆತಿರಿ.

ಈ ತಿದ್ದುಪಡಿಗೆ ಸಂಬಂಧಿಸಿದಂತೆ, ಇದನ್ನು ಪ್ರಸ್ತಾಪಿಸಲು ಕಾರಣಗಳೇವೆಂಬುದನ್ನು ನೀವಾಗಲೆ ತಿಳಿಸಿದ್ದೀರಿ. ಆದುದರಿಂದ ಇತರ ಪ್ರಶ್ನೆಗಳನ್ನು ಕುರಿತು ಚರ್ಚಿಸಬಾರದು.]*

**ಮೌಲಾನಾ ಹಸ್ರತ್ ಮೋಹನಿ :** *[ಮಾನ್ಯರೆ, ನಾನು ನನ್ನ ಹೇಳಿಕೆಯನ್ನು ಕೆಲವೇ ಕ್ಷಣಗಳಲ್ಲಿ ಮುಗಿಸುತ್ತೇನೆ. ಫಾರ್ವರ್ಡ್ ಬ್ಲಾಕ್ ಮತ್ತು ಕಮ್ಯುನಿಷ್ಟ್ ಸದಸ್ಯರು ಇಲ್ಲಿ ಹಾಜರಿಲ್ಲ. ಆದುದರಿಂದ ಅವರ ಪರವಾಗಿ ಅವರ ಹಕ್ಕುಗಳನ್ನು ನಾನು ಕಾಯುತ್ತೇನೆ ಮತ್ತು ನಿಮ್ಮ ಮತಬಲದಿಂದ ಈ ಸದನದಲ್ಲಿ ನಿಮ್ಮಿಚ್ಛೆಯಂತೆ, ವರದಿಯನ್ನು ಅಂಗೀಕರಿಸುವುದಾಗಿದ್ದರೆ, ನಾನು ಇತರ ವಿಧಾನಗಳಿಂದ ಅವರ ಹಕ್ಕುಗಳನ್ನು ಕಾಯುತ್ತೇನೆ. ತಮ್ಮೆಲ್ಲ ನಿರ್ಧಾರಗಳು ತತ್ತ್ವಾಧಾರಿತವಾಗಿರಬೇಕೆಂಬುದನ್ನು ಪುನರುಚ್ಚರಿಸುತ್ತಿದ್ದೇನೆ. ನೀವು ಎಲ್ಲರ ಹಕ್ಕುಗಳನ್ನು ರಕ್ಷಿಸಬೇಕು.]*

**ಓರ್ವ ಗೌರವಾನ್ವಿತ ಸದಸ್ಯರು :** ಒಂದು ಕ್ರಿಯಾಲೋಪ ಮಾನ್ಯರೆ, ಈ ಸದನವನ್ನು ರಾಷ್ಟ್ರವಾದಿಗಳಿಂದ ತುಂಬಿದ ಸದನವೆಂದು ಕರೆಯಬಹುದೆ? ಅದು ಸಭ್ಯವೆ? ಅವರು ಆ ಸದನವನ್ನು ಹಿಂತೆಗೆದುಕೊಳ್ಳುವಂತೆ ಹೇಳಬೇಕು.

**ಮೌಲಾನಾ ಹಸ್ರಾತ್ ಮೋಹಾನಿ :** ನಾನು ಯಾವುದೇ ಅವಾಚ್ಯ ಪದವನ್ನು ಬಳಸಿಲ್ಲ. ನಾನು ಹೇಳಿದ್ದು, ಹೇಗೋ ಏನೋ ಇಲ್ಲಿರುವವರೆಲ್ಲರೂ ರಾಷ್ಟ್ರವಾದಿಗಳು ಹಾಗಾಗಿ ಕಿವುಡರು ನಾನು ಸದನಕ್ಕೆ ಅಗೌರವ ತೋರಿಸುವ ಅರ್ಥದಲ್ಲಿ ಮಾಡನಾಡಿಲ್ಲ.

**ಪಂಡಿತ್ ಜವಾಹರ್‌ಲಾಲ್ ನೆಹರು :** *[ಸನ್ಮಾನ್ಯ ಅಧ್ಯಕ್ಷರೆ, ಒಕ್ಕೂಟದ ಸಂವಿಧಾನ ಸಮಿತಿಯ ವರದಿ ಈಗ ಪರಿಶೀಲನೆಗೆ ಒಳಪಟ್ಟಿದ್ದರೆ, ನಾನು ಒಂದು ವಿಶೇಷ ಸ್ಥಾನಬಲದಿಂದ ಇಲ್ಲಿ ನಿಂತಿರುತ್ತಿದ್ದೆ. ಆದರೆ ಕೆಲ ಸದಸ್ಯರ ಮನಸ್ಸಿನಲ್ಲಿ ಉದ್ಭವಿಸಿರುವ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಲು ನಿಂತಿದ್ದೇನೆ. ಪ್ರಾಯಶಃ ನನ್ನ ಗುರಿ ಸಾಧನೆಯಲ್ಲಿ ಸಂಪೂರ್ಣ ಯಶಸ್ವಿಯಾಗದಿರಬಹುದು. ಮೌಲಾನಾ ಹಸ್ರತ್ ಮೋಹಾನಿ

ಅವರು ತುಂಬ ಸಹನೆಯ ವ್ಯಕ್ತಿ. ಕಮ್ಯುನಿಸ್ಟರು ಮತ್ತು ಫಾರ್ವರ್ಡ್ ಬ್ಲಾಕ್ ಎರಡೂ ಬಣಗಳ ವಕ್ತಾರನೆಂದು ಹೇಳಿಕೊಳ್ಳುತ್ತಾರೆ. ಅವರಿಗೆ ಮನವರಿಕೆ ಮಾಡಿಕೊಡುವಲ್ಲಿ ನಾನು ವಿಫಲವಾಗಬಹುದು. ನನ್ನ ಶಂಕೆ ನಿಜವಾಗುವುದಾದರೆ, ಸಹಜವಾಗಿಯೇ ಅವರು ದಿಗ್ಭ್ರಮೆಗೆ ಈಡಾಗಬಹುದು. ಆದರೆ ನಾನು ಹೇಳುವುದೆಲ್ಲ ಅರ್ಥವಾಗದ ವಿಷಯವೇನಲ್ಲ; ಜೊತೆಗೆ ಅದು ಅಷ್ಟೊಂದು ತಾಂತ್ರಿಕವೂ ಅಲ್ಲ, ನಮ್ಮ ಧ್ಯೇಯ ಸಾಕಾರಗೊಳ್ಳುವ, ಮತ್ತು ಗುರಿ ತಲುಪುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಕಡೆಗಣಿಸಿ ಪ್ರಾಂತೀಯ ಸಂವಿಧಾನವನ್ನು ಪರಿಶೀಲನೆಗೆ ತೆಗೆದುಕೊಂಡರೆ ಅದು ಅನುಚಿತವಾಗುತ್ತದೆ. ನಿಜ, ನಾನು ಮೊದಲಿಗೆ ಪ್ರಾಂತೀಯ ಸಂವಿಧಾನವನ್ನು ಪರಿಶೀಲನೆಗೆ ತೆಗೆದುಕೊಂಡಿದ್ದೇನೆ.

ಆರು ತಿಂಗಳ ಹಿಂದೆ, ಈ ಸದನ ಒಂದು ನಿರ್ಣಯವನ್ನು ಅಂಗೀಕರಿಸಿತು. ಅದು ನಮ್ಮ ಯೋಜನೆ ಮತ್ತು ಆದರ್ಶಗಳನ್ನು ನಿರೂಪಿಸಿತು. ಅವುಗಳನ್ನು ಅನುಮೋದಿಸಲಾಯಿತು. ಒಮ್ಮೆ ಯಾವುದಾದರೂ ಒಂದು ಯೋಜನೆಯ ರೂಪುರೇಷೆ ಸಿದ್ಧವಾದರೆ ಅದರೊಳಗಣ ಹಲವಾರು ಸಮಸ್ಯೆಗಳನ್ನು ಅನುಕ್ರಮವಾಗಿ ಕೈಗೆತ್ತಿಕೊಂಡು ನಿರ್ಧರಿಸಬೇಕು. ಈ ಪ್ರಕರಣದಲ್ಲಿ ಪ್ರಾಂತೀಯ ಸಂವಿಧಾನದ ಪ್ರಶ್ನೆ ಮೊದಲೆ ತಲೆದೋರಿತು ಮತ್ತು ಪ್ರಾಂತೀಯ ಸಂವಿಧಾನ ಸಮಿತಿಯ ವರದಿಯೂ ಮೊದಲೆ ಸಿದ್ಧಗೊಂಡಿತು. ಅದರ ಪರಿಣಾಮವಾಗಿ, ಅದರ ಅಧ್ಯಯನ ನಡೆಸಲು ಸದಸ್ಯರಿಗೆ ಸಾಕಷ್ಟು ಕಾಲಾವಕಾಶ ದೊರೆಯಿತು. ಇನ್ನೊಂದು ವರದಿಯನ್ನು ಸದಸ್ಯರಿಗೆ ಈಗಷ್ಟೆ ಆರೇಳು ದಿನಗಳ ಹಿಂದೆ ಕಳುಹಿಸಿಕೊಡಲಾಯಿತು. ಪರಿಣಾಮವಾಗಿ ಸದಸ್ಯರಿಗೆ ಕಾಲಾವಕಾಶ ಸಾಕಾಗದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರ ಅನುಕೂಲಕ್ಕಾಗಿ, ವರದಿಯನ್ನು ತಾತ್ಕಾಲಿಕವಾಗಿ ಒಂದಷ್ಟು ದಿನಗಳವರೆಗೆ ಸದನಕ್ಕೆ ಸಲ್ಲಿಸುವುದು ಬೇಡವೆಂದು ತಡೆಹಿಡಿಯಲಾಯಿತು. ಆದರೆ ಪ್ರಾಂತೀಯ ಸಂವಿಧಾನದ ವರದಿಯನ್ನು ಅಧ್ಯಯನಮಾಡಲು ಸಾಕಷ್ಟು ಕಾಲಾವಕಾಶ ದೊರೆತುದರಿಂದ ಅದನ್ನು ಮಂಡಿಸಲು ನಿರ್ಧರಿಸಲಾಯಿತು. ಗೌರವಾನ್ವಿತ ಸದಸ್ಯರು ಒಕ್ಕೂಟದ ಸಂವಿಧಾನ ಸಮಿತಿಯ ವರದಿಯನ್ನು ಸ್ವೀಕರಿಸಿದ್ದಾರೆ. ಅಧ್ಯಕ್ಷರು ಅನುಮತಿಸುವುದಾದರೆ, ನಾನು ಆ ವರದಿಯನ್ನು ಈ ಕೂಡಲೆ ಸಭೆಯ ಮುಂದಿಡಲು ತಯಾರಿದ್ದೇನೆ. ಇದರ ಬಗ್ಗೆ ಏಳಬಹುದಾದ ಒಂದೇ ತೊಡಕೆಂದರೆ ಗೌರವಾನ್ವಿತ ಸದಸ್ಯರು, ತಮಗೆ ವರದಿಯ ಅಧ್ಯಯನಕ್ಕೆ ಕಾಲಾವಕಾಶ ದೊರೆಯಲಿಲ್ಲವೆಂದು ದೂರಬಹುದು. ಈಗ ಅಧ್ಯಯನಕ್ಕೆ ಕಾಲಾವಕಾಶ ಕೊಟ್ಟರೂ ಇನ್ನೆರಡು ಮೂರು ದಿನಗಳು ವ್ಯರ್ಥವಾಗಬಹುದು. ಈ ಉದ್ದೇಶದಿಂದಲೇ ಸಿದ್ಧವರದಿಯನ್ನು ಕುರಿತು ಸಾಕಷ್ಟು ಅಧ್ಯಯನ ನಡೆಸಿದ ನಂತರ, ಸಭೆಯ ಮುಂದಿಡಲು ಉದ್ದೇಶಿಸಲಾಯಿತು. ಈ ವರದಿಯಂತೆ, ಇನ್ನೊಂದು ವರದಿಯನ್ನೂ ಸಭೆಯ ಮುಂದೆ ಪ್ರಸ್ತುತಪಡಿಸಲಾಗುವುದು. ಇಲ್ಲಿ ಮುಚ್ಚಿಡುವುದೇನಿಲ್ಲವೆಂಬುದನ್ನು ತಾವೆಲ್ಲರೂ ಗ್ರಹಿಸಬೇಕು. ಇಲ್ಲಿ ಪ್ರಕ್ರಿಯೆಯನ್ನು ಅನುಸರಿಸುವಾಗ ಅಕ್ರಮವೇನೂ ನಡೆದಿಲ್ಲ.

ಪ್ರಸ್ತುತ ವರದಿಯಲ್ಲಿ 'ರಾಜ್ಯಪಾಲ' ಎಂಬ ಪದ ಕಂಡುಬರುತ್ತದೆ, ಮೌಲಾನಾ ಅವರು ತಳಮಳಗೊಳ್ಳಲು ಈ ಪದ ಕಾರಣ, 'ರಾಜ್ಯಪಾಲ' ಎಂಬ ಪದ ಹಿಂದಿನ ಆಡಳಿತದಿಂದ ನಮಗೆ, ಹಸ್ತಾಂತರಗೊಂಡುದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೊಡನೆ ನಮ್ಮ ಸಾಂಗತ್ಯ ಅಷ್ಟೇನೂ ಸಂತೋಷದಾಯಕವಲ್ಲ. ಆದರೆ ಈಗ ಪರಿಭಾಷೆಯ ಪ್ರಶ್ನೆ ಬಗ್ಗೆ ನಮಗೆ ಅಕ್ಕರೆ ಇಲ್ಲ. ನಮ್ಮ ಸಂವಿಧಾನ ಆಂಗ್ಲಭಾಷೆಯಲ್ಲಿರುತ್ತದೋ ಮತ್ತಾವ ಭಾಷೆಯಲ್ಲೋ ನಮಗೆ ತಿಳಿಯದು. ಆ ಪದಕ್ಕೆ ಸಂಬಂಧಿಸಿದಂತೆ ಅಮೆರಿಕದಲ್ಲಿ ರಾಜ್ಯಪಾಲರು ಆ ಸ್ಥಾನದಲ್ಲಿರುವುದು ಮತ್ತು ಅವರು ತಮ್ಮ ಅಧಿಕಾರವನ್ನು ಚಲಾಯಿಸುತ್ತಿರುವುದು ತಮಗೆ ತಿಳಿದೇ ಇದೆ. ಆದುದರಿಂದ, ಇದು ನಮ್ಮ ಆದರ್ಶಗಳನ್ನು ಮತ್ತು ತತ್ತ್ವಗಳನ್ನು ಕಿಂಚಿತ್ತು ಕಲುಷಿತಗೊಳಿಸುವುದಿಲ್ಲವೆಂದು ನಿವೇದಿಸುತ್ತಿದ್ದೇನೆ. ಇದರಲ್ಲಿ ತತ್ತ್ವದ ಪ್ರಶ್ನೆ ಏಳದು ಎಂಬುದು ನನ್ನ ಅಭಿಪ್ರಾಯ: ಒಂದೇ ಪ್ರಶ್ನೆ ಎಂದರೆ ಈ ಸದನದ ಕಾರ್ಯಕಲಾಪಗಳು ಸುಗಮಗೊಳ್ಳುವುದು. ತಾವು ಮತ್ತು ಸರ್ದಾರ್ ಪಟೇಲರು ಇಷ್ಟಪಟ್ಟರೆ, ಒಕ್ಕೂಟದ ಸಂವಿಧಾನ ಸಮಿತಿಯ ವರದಿಯನ್ನು ಸದನದ ಮುಂದಿಡಲು ಸಿದ್ಧನಿದ್ದೇನೆ.]*

**ಶ್ರೀ ಮೊಹಮ್ಮದ್ ತಾಹಿರ್** (ಬಿಹಾರ್ : ಮುಸ್ಲಿಮ್) : ನಾನು, ಮೌಲಾನಾ ಹಸ್ರತ್ ಮೋಹಾನಿ ಅವರು ಪ್ರಸ್ತಾಪಿಸಿದ ತಿದ್ದುಪಡಿಗೆ ಬೆಂಬಲ ಸೂಚಿಸಲು ನಿಂತಿದ್ದೇನೆ; ಮೊದಲಿಗೆ ತರ್ಕಬದ್ಧ ಸೂತ್ರದ ಆಧಾರದ ಮೇಲೆ–ಅರ್ಥಾತ್ ಸಂಪೂರ್ಣ ಸತ್ಯವಾದುದು ಭಾಗಶಃ ಸತ್ಯವೂ ಹೌದು ಎಂಬ ತತ್ತ್ವ ಭಾರತದ ಒಕ್ಕೂಟದ ಬಗ್ಗೆ. ಈ ಸದನವು ನಮಗೆ ಯಾವ ಸಂವಿಧಾನವಿರಬೇಕೆಂದು ನಿರ್ಧರಿಸಲಿದೆ ಎಂಬುದು ಇದುವರೆಗೆ ನಮಗೆ ಯಾರಿಗೂ ತಿಳಿದಿಲ್ಲ. ಖಂಡಿತವಾಗಿ ಪ್ರಾಂತ್ಯಗಳು ಭಾರತದ ಭಾಗಗಳೆ. ಆದುದರಿಂದ, ಭಾರತ ಒಕ್ಕೂಟದ ಸಂವಿಧಾನದ ನಿಯಮಗಳನ್ನು ಪರಿಶೀಲಿಸುವುದು ತರವಲ್ಲ. ಈಗಷ್ಟೆ ಪಂಡಿತ್ ಜವಾಹರ್ ಲಾಲ್ ನೆಹರು ಅವರು ಹೇಳಿರುವಂತೆ ಭಾರತ ಒಕ್ಕೂಟದ ಸಂವಿಧಾನದ ಕರಡು ಸಿದ್ಧಗೊಂಡಿದೆ. ಪ್ರತಿಯೊಬ್ಬ ಸದಸ್ಯರಿಗೂ ಅದರ ಪ್ರತಿ ತಲುಪಿದೆ. ನನ್ನ ನಿವೇದನೆ ಇಷ್ಟೆ. ಸದಸ್ಯರ ಬಳಿ ಸಂವಿಧಾನದ ಕರಡು ಪ್ರತಿ ಇರುವುದು ಬೇರೆ, ಈ ಸದನ ನಿರ್ಧಾರವನ್ನು ತೆಗೆದುಕೊಳ್ಳುವುದೇ ಬೇರೆ. ಇದಲ್ಲದೆ, ಮಾನ್ಯರೆ, ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಹೇಳಿದಂತೆ, ಸದನದ ಮುಂದೆ ಸಂವಿಧಾನದ ನಿಯಮಗಳನ್ನು ಸಾದರಪಡಿಸಲು ಅವರು ಈಗಲೂ ಸಿದ್ಧ. ಅವರ ಮಾತಿನಲ್ಲೆ ಹೇಳುವುದಾದರೆ ಆಕಸ್ಮಿಕವಾಗಿ, ಪ್ರಾಂತೀಯ ಸಂವಿಧಾನದ ನಿಯಮಗಳನ್ನು ಸದನದ ಮುಂದೆ ಮುಂಚಿತವಾಗಿ ತರಲಾಯಿತು. ಇದರಿಂದ ಒಂದಂಶ ವ್ಯಕ್ತವಾಗುತ್ತದೆ. ಭಾರತ ಒಕ್ಕೂಟದ ಸಂವಿಧಾನವನ್ನು ಪರಿಶೀಲನೆಗೆ ಮೊದಲು ತೆಗೆದುಕೊಳ್ಳಬೇಕೆಂಬುದು ಅವರಿಗೆ ಮನವರಿಕೆಯಾಗಿದೆ.

ನನ್ನ ಎರಡನೇ ಅಂಶವೆಂದರೆ, ಅಲ್ಪಸಂಖ್ಯಾತರ ಸಮಿತಿ, ಬುಡಕಟ್ಟು ಪ್ರದೇಶ ಸಮಿತಿ ಇತ್ಯಾದಿ ಸಮಿತಿಗಳ ವರದಿಗಳು ಇನ್ನೂ ನಮ್ಮ ಕೈಸೇರಿಲ್ಲ. ಆ ಸಮಿತಿಗಳ ಶಿಫಾರಸ್ಸುಗಳನ್ನು ಸಂವಿಧಾನದಲ್ಲಿ ನಿಗಮಿತಗೊಳಿಸಬೇಕು. ಅವೆಲ್ಲವೂ ಬರುವ ಮುಂಚೆ ಪ್ರಾಂತೀಯ ಸಂವಿಧಾನವನ್ನು ಪರಿಶೀಲಿಸುವುದು ತರವಲ್ಲ.

ಇಷ್ಟು ಹೇಳಿ ಮೌಲಾನಾ ಹಸ್ರತ್ ಮೋಹನಿ ಅವರ ತಿದ್ದುಪಡಿಗೆ ನಾನು ಬೆಂಬಲ ಸೂಚಿಸುತ್ತೇನೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಮೌಲಾನಾ ಹಸ್ರತ್ ಮೋಹಾನಿ ಅವರು ಪ್ರಸ್ತಾಪಿಸಿದ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಒಂದು ನಿಮಿಷದ ಹಿಂದೆ ಅವರು ಖುದಾಯಿ 'ಫೌಸ್‌ದಾರ್' ಮಾದರಿ ವರ್ತಿಸುತ್ತಿದ್ದಾರೆ. ನನಗೆ ಅವರೇ ಹೇಳುವಂತೆ ತಾವು ಕಮ್ಯೂನಿಷ್ಟ್ ಇಲ್ಲವೆ ಜಾತಿವಾದಿ ಎಂಬ ವಾಕ್ಯ ನೆನಪಾಯಿತು. ('ಎರಡೂ' ಎಂದು ಕೆಲಗೌರವಾನ್ವಿತ ಸದಸ್ಯರು). ಈಗ ಅವರು ಎರಡೂ ಆಗಿದ್ದು ಕಾರ್ಲ್ ಮಾರ್ಕ್ಸ್ ಮತ್ತು ಯೇಸುಕ್ರಿಸ್ತರ ನಡುವೆ ಏರ್ಪಟ್ಟಿರುವ ಕಂದಕವನ್ನು ಮುಚ್ಚಲು ಪ್ರಯತ್ನಿಸುತ್ತಿದ್ದಾರೆ. ಮೌಲಾನಾ ಅವರು ಅತಿ ದೊಡ್ಡ ವ್ಯಕ್ತಿ. ನಾವೆಲ್ಲರೂ ಅವರ ಘನತೆ ಮತ್ತು ಪ್ರಾಮಾಣಿಕತೆಯನ್ನು ಕಂಡು ಅವರನ್ನು ಭಕ್ತಿ–ಗೌರವದಿಂದ ಕಾಣುತ್ತ ಬಂದಿದ್ದೇವೆ. ಆದರೆ ಅವರು, ಸಂಘಜೀವಿಯಾಗಲು ನಿರಾಕರಿಸುವ ವ್ಯಕ್ತಿ ಎಂಬ ಭಾವನೆ ನನ್ನಲ್ಲಿ ಯಾವಾಗಲೂ ಇದ್ದೇ ಇದೆ. ಅವರೊಬ್ಬ ಏಕಾಂಗಿ. ಸುದೀರ್ಘ ಸಮಾಲೋಚನೆಯ ನಂತರ ಅವರು ಸೇರಿದ ಮುಸ್ಲಿಮ್ ಲೀಗ್ ಪಕ್ಷದಲ್ಲಿ ವರಿಷ್ಠರ ಸಮಿತಿಯಲ್ಲಿ ಅವರ ಹೆಸರು ಸೇರ್ಪಡೆಯಾದರೂ ಒಂಟಿಯಾಗಿ ಉಳಿದರು. ಈಗ ಅವರು ಪ್ರಸ್ತಾವಿಸುತ್ತಿರುವ ತಿದ್ದುಪಡಿಯೂ ಸಹ ತುಂಬ ಹಾಸ್ಯಾಸ್ಪದವೇಕೆಂದರೆ, ನಾವು ಮೊದಲಿಗೆ ಒಕ್ಕೂಟದ ಸಂವಿಧಾನವನ್ನು ಪರಿಶೀಲಿಸಿದರೂ ಅಥವಾ ಪ್ರಾಂತೀಯ ಸಂವಿಧಾನವನ್ನು ಪರಿಗಣಿಸಿದರೂ ಅವೆರಡರಲ್ಲಿ ವ್ಯತ್ಯಾಸವೇನೂ ಕಾಣದು. ಏಕೆಂದರೆ, ನಾವೀಗಾಗಲೆ, ನಿರ್ಣಯವೊಂದರ ಮೂಲಕ ನಮ್ಮ ಧ್ಯೇಯೋದ್ದೇಶಗಳನ್ನು ಅಂಗೀಕರಿಸಿದ್ದೇವೆ, ನಮ್ಮ ಧ್ಯೇಯಕ್ಕೆ ಹೊಂದಿಕೊಳ್ಳುವ ಯಾವುದೇ ಅಂಶವನ್ನು ಎತ್ತಿ ತೋರಲು ಪ್ರತಿಯೊಬ್ಬ ಸದಸ್ಯನಿಗೂ ಸ್ವಾತಂತ್ರ್ಯವಿದ್ದೇ ಇರುತ್ತದೆ, ಅದು ಪ್ರಾಂತೀಯ ಮಾದರಿ ಸಂವಿಧಾನವಾಗಲಿ, ಅಥವಾ ಒಕ್ಕೂಟದ ಸಂವಿಧಾನವಾಗಲಿ ಯಾವುದನ್ನಾದರೂ ಸರಿಪಡಿಸಬಹುದಾದುದರಿಂದ, ಯಾವುದೇ ಸಂವಿಧಾನವನ್ನು ಮೊದಲು

ಮಂಡಿಸಿದರೂ, ಅದರಲ್ಲಿ ವ್ಯತ್ಯಾಸವೇನೂ ಆಗದು. ಮೌಲಾನಾ ಅವರು ಒಂದು ಮೂಲಭೂತ ಪ್ರಶ್ನೆಯನ್ನೆತ್ತಿದರು. ಅದೆಂದರೆ, ಪ್ರಾಂತ್ಯಗಳಿಗೆ ಪ್ರಾಂತೀಯ ಸ್ವಾಯತ್ತತೆಯನ್ನು ಕೊಡುವ ಲಕ್ಷಣವುಳ್ಳ ಸಂವಿಧಾನಬೇಕೆ ಅಥವಾ ಗಣತಂತ್ರ ಸಂವಿಧಾನವೆ ಎಂಬುದು. ಇಡೀ ಸಭೆ ಮೌಲಾನಾ ಅವರ ಈ ಮಾತಿಗೆ ಸಹಮತ ಸೂಚಿಸುವುದಾದರೆ, ಅವರು ಖಂಡಿತ, ಪ್ರಾಂತೀಯ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರಬಹುದು. ತಮಗೆ ಬೇಡವಾದ ಪದಗಳನ್ನು ಬಿಡಬಹುದು. ಇಷ್ಟವಿದ್ದರೆ ರಾಜ್ಯಪಾಲರಿಗೆ ಅಧ್ಯಕ್ಷ ಸ್ಥಾನ ನೀಡಿ, ಪ್ರಾಂತೀಯ ಶಾಸನಸಭೆಗೆ ಎಲ್ಲ ಅಧಿಕಾರಗಳನ್ನು ವಹಿಸಿಕೊಡಬಹುದು. ಅವರ ತಿದ್ದುಪಡಿಗೆ ಸರ್ವಾನುಮತ ದೊರೆಯದಿದ್ದರೆ, ಸಹಜವಾಗಿಯೇ ಒಕ್ಕೂಟದ ಸಂವಿಧಾನವನ್ನು ಮೊದಲು ಪರಿಶೀಲನೆಗೆ ಮಂಡಿಸಬೇಕೆಂಬ ಅವರ ತಿದ್ದುಪಡಿ ನಿಷ್ಪ್ರಯೋಜಕವಾಗುತ್ತದೆ. ವ್ಯತ್ಯಾಸವೆಲ್ಲಿದೆಯೋ ಕಾಣೆ. ನಾವು ಗುಲಾಮರಂತೆ, ಯಾವುದೇ ಸಂವಿಧಾನವನ್ನು ಅನುಸರಿಸಬಾರದೆಂಬ ದೃಢ ಸಂಕಲ್ಪ ಹೊತ್ತಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ಮನಗಾಣಬೇಕು. ಅದು ಅಮೆರಿಕದ ಸಂವಿಧಾನವಾಗಲಿ ಅಥವಾ ಬ್ರಿಟಿಷ್ ಮಾದರಿಯಾಗಲಿ ಯಾವುದೂ ನಮಗೆ ಅನುಕರಣೀಯವಲ್ಲ. ನಾವು ನಮ್ಮ ಅಗತ್ಯಕ್ಕನುಗುಣವಾದ ಸಂವಿಧಾನವನ್ನು ರೂಪಿಸುತ್ತೇವೆ. ಯಾವುದೇ ನಮೂನೆಯ ಸಂವಿಧಾನಕ್ಕೂ ಬಲಿಯಾಗದಂತೆ ನೋಡಿಕೊಳ್ಳುತ್ತೇನೆ.

ಮೌಲಾನಾ ಅವರು ಸೋವಿಯತ್ ರಷ್ಯಾ ಬಗ್ಗೆ ಉಪದೇಶಾತ್ಮಕ ರೀತಿಯಲ್ಲಿ ಮಾತನಾಡಿದ್ದಾರೆ. ಪ್ರಾಯಶಃ ರಷ್ಯಾ ಮತ್ತು ಈ ನತದೃಷ್ಟ ದೇಶದ ನಡುವಣ ವ್ಯತ್ಯಾಸವನ್ನು ಅವರು ಮರೆತಿದ್ದಾರೆ. ಇಲ್ಲಿ ನಾನಾಡುವ ಮಾತಿಗೆ ಮೌಲಾನಾ ವಿರೋಧ ವ್ಯಕ್ತಪಡಿಸುತ್ತಾರೆ; ಅವರ ಮಾತಿಗೆ ನನ್ನ ವಿರೋಧ. ಇಂತಹ ಪರಿಸ್ಥಿತಿಯನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು. ನನಗನಿಸುತ್ತೆ, ನಮ್ಮ ದೇಶ ಫೆಡೆರಲ್ ಸರ್ಕಾರಕ್ಕೂ, ಸಂಯುಕ್ತ ಸರ್ಕಾರಕ್ಕೂ ನಡುವೆ ಒಂದು ಸುವರ್ಣ ಮಾಧ್ಯಮವನ್ನು ಹುಡುಕುವುದಾದರೆ ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯ ನಮಗಿರಬೇಕು. ನಮ್ಮ ದೇಶದಲ್ಲಿ ಎಲ್ಲ ರೀತಿಯ ಎಲ್ಲ ಬಗೆಯ ವಿಭಜನೆಯನ್ನು ಅನ್ವೇಷಿಸುತ್ತಲೆ ಇರುತ್ತೇವೆ. ಇದೊಂದು ಚಾರಿತ್ರಿಕ ಪ್ರತ್ಯೇಕತಾ ಪ್ರವೃತ್ತಿ. ನನ್ನ ಅಭಿಪ್ರಾಯದಂತೆ, ಪ್ರಾಂತ್ಯಗಳಿಗೆ ರಾಷ್ಟ್ರವಿಭಜಕ ಅಧಿಕಾರವನ್ನು ಕೊಡದಂತೆ ಎಚ್ಚರಿಕೆ ವಹಿಸಬೇಕು.

ಪ್ರಾಂತೀಯ ಸಂವಿಧಾನವನ್ನು ಮೊದಲು ಪರಿಶೀಲಿಸುತ್ತೇವೆಯೋ, ಇಲ್ಲವೋ ಒಕ್ಕೂಟದ ಸಂವಿಧಾನ ಮೊದಲೋ ಎಂಬುದರಲ್ಲಿ ವ್ಯತ್ಯಾಸವೇನೂ ಕಾಣದು. ಪ್ರಾಂತೀಯ ಸಂವಿಧಾನವನ್ನು ಗಣತಂತ್ರ ಸಂವಿಧಾನವನ್ನಾಗಿ ಮಾಡಬೇಕೆಂಬ, ಮೌಲಾನಾ ಅವರ ಆಲೋಚನೆಗೆ ಸಭೆಯ ಸಹಮತ ದೊರೆಯುತ್ತದೆನ್ನುವುದೇ ಆದರೆ ಸದನದ ಮುಂದೆ ತಮ್ಮ ಅಭಿಪ್ರಾಯ ಮಂಡಿಸಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ಅದರೊಡನೆ ಅವರು ಚೆಲ್ಲಾಟವಾಡುವ ಹಾಗಿದ್ದರೆ ಅದು ಫಲಕಾರಿಯಾಗದು.

ಮಾನ್ಯರೆ, ನಾನು ಮೌಲಾನಾ ಅವರ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಸನ್ಮಾನ್ಯ ಅಧ್ಯಕ್ಷರೆ, ನಾನು ಮೂಲ ಪ್ರಸ್ತಾವವನ್ನು ಎಂದರೆ ಪ್ರಾಂತೀಯ ಸಂವಿಧಾನವನ್ನು ಮೊದಲು ಪರಿಶೀಲಿಸಬೇಕೆಂಬ ಪ್ರಸ್ತಾವವನ್ನು ಬೆಂಬಲಿಸುತ್ತೇನೆ. ಇದರ ತಿದ್ದುಪಡಿಯ ಆಶಯವೆಂದರೆ, ಒಕ್ಕೂಟದ ಸಂವಿಧಾನವನ್ನು ಪರಿಶೀಲಿಸುವ ಮುನ್ನ ಪ್ರಾಂತೀಯ ಹಾಗೂ ಒಕ್ಕೂಟದ ಸಂವಿಧಾನಗಳೆರಡೂ ಬೇರೆ ಬೇರೆಯೇ ಆಗಿರುವುದೆಂದು ತಿಳಿಸಲಿಚ್ಛಿಸುತ್ತೇನೆ. ಇವೆರಡಲ್ಲಿ ಯಾವುದಾದರೂ ಮೊದಲು, ಪರಿಶೀಲನೆಗೆ ಬರಲಿ. ವ್ಯತ್ಯಾಸವೇನೂ ಆಗದು. ದೋಷಗಳಿದ್ದರೆ, ಭಿನ್ನಾಭಿಪ್ರಾಯಗಳಿದ್ದರೆ ಅದರ ಬಗ್ಗೆ ಯಾರಾದರೂ ಸದಸ್ಯರಿಗೆ ಆಕ್ಷೇಪಣೆ ಇದ್ದರೆ ಅದನ್ನು ಎತ್ತಲು ಅವರಿಗೆ ಸ್ವಾತಂತ್ರ್ಯವಿದೆ. ಸದನದಲ್ಲಿ ಅಗತ್ಯ ತಿದ್ದುಪಡಿಗಳನ್ನು ತರಬಹುದು. ಈಗಾಗಲೇ ತಿಳಿಸಿದಂತೆ, ಒಕ್ಕೂಟದ ಸಂವಿಧಾನದ ಪ್ರತಿಗಳನ್ನು ಆಗಲೆ ಹಂಚಿದ್ದಾಗಿದೆ. ಆದುದರಿಂದ ಆ ಸಂವಿಧಾನದ ಸಂಭಾವ್ಯ ಪ್ರಸ್ತಾವಗಳೇನೆಂಬುದು ನಮಗೆ ಗೊತ್ತಿರುತ್ತೆ.

ಒಕ್ಕೂಟದ ಸಂವಿಧಾನ ಮತ್ತು ಪ್ರಾಂತೀಯ ಸಂವಿಧಾನಗಳೇನೆಂಬುದರ ಸ್ಪಷ್ಟ ಚಿತ್ರಣ ಸದನದ ಮುಂದಿದೆ. ಇಂತಹ ವಿಷಯಗಳಲ್ಲಿ, ಸದನದ ವೇಳೆಯನ್ನು ವ್ಯಯಗೊಳಿಸಬಾರದು. ಯಾವ ಸಂವಿಧಾನವನ್ನು ಮೊದಲು ಪ್ರಸ್ತಾಪಿಸಬೇಕೆಂಬುದು ಮುಖ್ಯವಲ್ಲ. ಈ ಕೆಲವು ಮಾತುಗಳಿಂದ ನಾನು ಮೂಲ ಪ್ರಸ್ತಾವವನ್ನು ಬೆಂಬಲಿಸುತ್ತೇನೆ.

**ಪಂಡಿತ್ ಗೋವಿಂದ್ ಮಾಳವೀಯ :** ಮಾನ್ಯರೆ, ನಾವೀಗ ಚರ್ಚೆಯನ್ನು ಮುಕ್ತಾಯಗೊಳಿಸಬೇಕೆಂದು ಪ್ರಸ್ತಾವ ಮುಂದಿಡುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು :** ಚರ್ಚೆ ಮುಗಿಸುವ ಪ್ರಸ್ತಾವ ನಮ್ಮ ಮುಂದಿದೆ. ಪ್ರಸ್ತಾವ ಹೀಗಿದೆ.

"ಈಗ ನಿಲುವಳಿಯನ್ನು ಅಂಗೀಕರಿಸಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಪ್ರಸ್ತಾವವನ್ನು ಪ್ರಸ್ತಾವಕರು ಚರ್ಚೆಗೆ ಉತ್ತರಿಸುತ್ತಾರೆ.

**ಶ್ರೀ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಪ್ರಸ್ತಾವಕ್ಕೆ ಮೌಲಾನಾ ಹಸ್ರತ್ ಮೋಹಾನಿಯವರು ಮಂಡಿಸಿದ ತಿದ್ದುಪಡಿಯಂತೆ, ಈ ಪ್ರಸ್ತಾವವನ್ನು ಒಕ್ಕೂಟದ ಸಂವಿಧಾನ ರಚನಾಸಮಿತಿಯ ವರದಿಯನ್ನು ಪರಿಶೀಲನೆಯ ನಂತರ ಮಂಡಿಸಬೇಕೆಂಬುದು. ಒಕ್ಕೂಟದ ಸಂವಿಧಾನದ ವರದಿಯನ್ನು ಪ್ರಾಂತೀಯ ಸಂವಿಧಾನ ವರದಿಯನ್ನೂ ಪ್ರಾಯಶಃ ಮೌಲಾನಾ ಅವರು ನೋಡಿರುತ್ತಾರೆ. ಏಕೆಂದರೆ, ಅವರು ಸದನದ ಕಾರ್ಯಕಲಾಪಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದಾರೆ. ಪ್ರಾರಂಭದಲ್ಲಿ ಸದನವು ಅಂಗೀಕರಿಸಿದ ಧ್ಯೇಯೋದ್ದೇಶಗಳ ನಿರ್ಣಯವನ್ನು ಓದಿದ್ದಾರೆ. ಆ ಧ್ಯೇಯದ ಮೂಲ ಅಂಶಗಳಿಗೆ ನಾನೀಗ ಪ್ರಸ್ತಾಪಿಸಿರುವ ನಿರ್ಣಯ ವ್ಯತಿರಿಕ್ತವಾಗಿರುವುದೆ ಎಂಬುದನ್ನು ನಾನು ಅವರಿಂದ ತಿಳಿಯಬಹುದೆ? ಸಂವಿಧಾನವು ಗಣತಂತ್ರ ಲಕ್ಷಣವುಳ್ಳದ್ದೇ ಅಥವಾ ಲಕ್ಷಣ ಶರಿಯತ್‌ವುಳ್ಳದ್ದೇ ಅಥವಾ ಪ್ರಜಾಪ್ರಭುತ್ವ ನಿರೂಪಣೆ ಎಂಬುದರ ಬಗ್ಗೆ ಅವರಿಗೆ ಸಂಶಯ ಹುಟ್ಟಿದ್ದೇಕೆ ಎಂಬುದು ನನಗೆ ತಿಳಿಯುತ್ತಿಲ್ಲ. ನಾವು ಕಾಲಮೇಲೆ ನಿಲ್ಲಬೇಕೋ ತಲೆಯ ಮೇಲೋ ಎಂಬುದು ಮುಖ್ಯ. ನಾವು ಕಾಲಮೇಲೆ ನಿಲ್ಲುವುದು ಉತ್ತಮವೆಂದು ಆಯ್ಕೆ ಮಾಡಿಕೊಂಡಿದ್ದೇವೆ. ಪ್ರಾಂತ್ಯಗಳಿಂದ ಪ್ರಾರಂಭಿಸಿ, ನಾವು ಮೇಲಕ್ಕೆ ಬರೋಣ ಈ ನಿರ್ಣಯವನ್ನು ಪ್ರಸ್ತಾವಕರು ಚಾಣಾಕ್ಷತನದಿಂದ ಮಂಡಿಸುತ್ತಿರುವವರೆಂದು ಮೌಲಾನಾ ಹೇಳುತ್ತಾರೆ, ನಾನು ಯಾವ ಜಾದೂ ಮಾಡಿದ್ದೇನೆಂಬುದು ನನಗೆ ತಿಳಿಯುತ್ತಿಲ್ಲ. ಅಥವಾ ಇಲ್ಲಿ ಚಾಣಾಕ್ಷತನವೆಲ್ಲಿದೆ ಎಂಬುದೂ ತಿಳಿಯುತ್ತಿಲ್ಲ. ತುಂಬ ಸರಳವಾದ ಪ್ರಶ್ನೆ ಎಂದರೆ ನಾನು ಮಂಡಿಸಿದ ನಿರ್ಣಯವನ್ನು ಮಂಡಿಸಬೇಕೋ ಬೇಡವೋ ಎಂಬುದು. ಈ ನಿರ್ಣಯವನ್ನು ಮಂಡಿಸಬಾರದೆಂಬುದಕ್ಕೆ ಅವರು ಯಾವುದೇ ಸಮರ್ಥನೆಯನ್ನು ನೀಡುತ್ತಿಲ್ಲ. ಒಕ್ಕೂಟದ ಸಂವಿಧಾನದಲ್ಲಿ ಏನೋ ಇರಬಹುದೆಂಬುದು ಅವರ ಶಂಕೆ. ಆ ರೀತಿ ಒಕ್ಕೂಟದ ಸಂವಿಧಾನದಲ್ಲೇನಾದರೂ ಅವರ ಕಣ್ಣಿಗೆ ಬಿದ್ದರೆ, ಅದರ ಬಗ್ಗೆ ಸೂಕ್ತ ಸಲಹೆ ನೀಡಲು ಅವರಿಗೆ ಸಾಕಷ್ಟು ಸಮಯವಿರುತ್ತದೆ. ಈ ಪ್ರಸ್ತಾವದಲ್ಲಿ ಸಂಶಯಕ್ಕೆ ಎಡೆಯೇ ಇಲ್ಲ. ಅಥವಾ ಜಿಜ್ಞಾಸೆಗೂ ಆಸ್ಪದವಿಲ್ಲ. ಇದರಂತಹ ಒಂದು ಸರಳವಾದ ಪ್ರಸ್ತಾವಕ್ಕೆ ಇಷ್ಟೊಂದು ದೀರ್ಘವಾದ ಕಾಲ ಹಿಡಿಸಬಾರದು. ಶ್ರೀ ನಝೀರುದ್ದೀನ್ ಅಹ್ಮದ್ ಅವರು ಸ್ಪಷ್ಟಪಡಿಸಿದಂತೆ, ಸದನದ ಅಮೂಲ್ಯ ವೇಳೆ ಅನಗತ್ಯವಾಗಿ ಹಾಳಾಗುತ್ತದೆ. ಎರಡು ಪ್ರತ್ಯೇಕ ಸಂವಿಧಾನಗಳು ಒಂದು ಇನ್ನೊಂದರ ಮೇಲೆ ಅತಿಕ್ರಮಣ ಮಾಡಲಾರದು. ಆದುದರಿಂದ ಸದನದ ವ್ಯವಹಾರಗಳ ಕ್ರಮಾದೇಶದಂತೆ, ಒಂದರ ನಂತರ ಮತ್ತೊಂದನ್ನು ಕುರಿತು ಚರ್ಚಿಸುವುದು ಅನುಕೂಲಕರ. ಆದುದರಿಂದ, ಪ್ರಸ್ತಾವವನ್ನು ವಿಭಜನೆಗೆ ಎಡೆಗೊಡದಂತೆ ಅಂಗೀಕರಿಸಬೇಕು.

**ಮಾನ್ಯ ಅಧ್ಯಕ್ಷರು :** ೩೦ ಏಪ್ರಿಲ್ ೧೯೪೭ ಈ ದಿನಾಂಕ ಸಭೆಯಿಂದ ಅಂಗೀಕೃತವಾದ ನಿರ್ಣಯದ ಮೇರೆಗೆ ನಿಯುಕ್ತವಾದ ಸಮಿತಿಯು ಸಲ್ಲಿಸಿರುವ ಮಾದರಿ ಪ್ರಾಂತೀಯ ನಿಯಮಗಳನ್ನು ಕುರಿತ ವರದಿಯನ್ನು

ಸದನವು ಪರಿಶೀಲಿಸಲು ಮುಂದುವರೆಯಬೇಕು. ಇದಕ್ಕೊಂದು ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ.

"ಮಾದರಿ ಪ್ರಾಂತೀಯ ಸಂವಿಧಾನದ ನಿಯಮಗಳನ್ನು ಒಕ್ಕೂಟದ ಸಂವಿಧಾನದ ನಿಯಮಗಳನ್ನು ಕುರಿತ ವರದಿಯನ್ನು ಪರಿಶೀಲಿಸುವ ಮುನ್ನ ತೆಗೆದುಕೊಳ್ಳಬಾರದು."

ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ತಿರಸ್ಕೃತವಾಯಿತು.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿ ತಿರಸ್ಕೃತವಾಗಿದೆ. ನಾನು ಮೂಲ ಪ್ರಸ್ತಾವವನ್ನೂ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

"೩೦ ಏಪ್ರಿಲ್ ೧೯೪೭, ಈ ದಿನಾಂಕ ಸಭೆಯಿಂದ ಅಂಗೀಕೃತವಾದ ನಿಲುವಳಿ ಮೇರೆಗೆ ನಿಯುಕ್ತವಾದ ಸಮಿತಿಯು ಸಲ್ಲಿಸಿರುವ ಮಾದರಿ ಪ್ರಾಂತೀಯ ನಿಯಮಗಳನ್ನು ಕುರಿತ ವರದಿಯನ್ನು ಸಭೆಯು ಪರಿಶೀಲಿಸಲು ಮುಂದುವರೆಯಬೇಕು."

ನಿಲುವಳಿ ಅಂಗೀಕೃತವಾಯಿತು.

## ಅಧ್ಯಾಯ ೧
## ಖಂಡ ೧

**ಮಾನ್ಯ ಅಧ್ಯಕ್ಷರು :** ನಾವೀಗ, ಖಂಡಗಳನ್ನು ಒಂದರ ಮೇಲೊಂದರಂತೆ ಚರ್ಚೆಗೆ ತೆಗೆದುಕೊಳ್ಳೋಣ.

**ಸರ್ದಾರ್ ವಲ್ಲಭಭಾಯಿ ಪಟೇಲ್ :** ಮಾನ್ಯರೆ, ತಮ್ಮ ಅನುಮತಿ ಬೇಡಿ ನಾನು ವರದಿಯ ಮೊದಲನೆ ಖಂಡವನ್ನು ಮಂಡಿಸುತ್ತೇನೆ.

ಅಧ್ಯಾಯ–೧ ಪ್ರಾಂತೀಯ ಕಾರ್ಯರಿ

"ರಾಜ್ಯಪಾಲರು–೧. ಪ್ರತಿಯೊಂದು ಪ್ರಾಂತ್ಯಕ್ಕೂ ಒಬ್ಬರು ರಾಜ್ಯಪಾಲರಿರುತ್ತಾರೆ. ಅವರು ನೇರವಾಗಿ ಜನತೆಯಿಂದ ವಯಸ್ಕ ಮತಾಧಿಕಾರದ ಆಧಾರದ ಮೇಲೆ ಚುನಾಯಿಸಲ್ಪಡುತ್ತಾರೆ."

(ಟಿಪ್ಪಣಿ: "ಪ್ರಾಂತೀಯ ಶಾಸನಸಭೆಯ ಚುನಾವಣೆಯೊಂದಿಗೆ ರಾಜ್ಯಪಾಲರ ಚುನಾವಣೆಯೂ ಏಕಕಾಲದಲ್ಲಿ ನಡೆಯಬೇಕೆಂದು ಸಮಿತಿಗಳು ಅಭಿಪ್ರಾಯಪಟ್ಟವು. ಇದಕ್ಕೆ ಶಾಸನಬದ್ಧ ಅವಕಾಶ ಕಲ್ಪಿಸುವುದು ಕಷ್ಟವಾಗಬಹುದು. ಶಾಸನಸಭೆಯು ತನ್ನ ಅವಧಿ ಪೂರ್ಣಗೊಳ್ಳುವ ಮುನ್ನವೆ ವಿಸರ್ಜಿಸಲ್ಪಡಬಹುದು.)"

ಈ ಖಂಡದಲ್ಲಿ ಎರಡು ಮುಖ್ಯಾಂಶಗಳಿವೆ. ಮೊದಲನೆಯದಾಗಿ ಪ್ರತಿಯೊಂದು ಪ್ರಾಂತ್ಯಕ್ಕೂ ಒಬ್ಬರು ರಾಜ್ಯಪಾಲರು ಇರುತ್ತಾರೆ. ಅದೊಂದು ಮುಖ್ಯವಾದ ನಿಯಮ. ಇತರ ಮುಖ್ಯ ಅಂಶವೆಂದರೆ ಅವರು ವಯಸ್ಕರ ಮತದಾನದ ರೀತ್ಯಾ ಚುನಾಯಿಸಲ್ಪಡುತ್ತಾರೆ. ರಾಜ್ಯಪಾಲರಿಗೆ ಅತ್ಯಂತ ಸೀಮಿತ ಅಧಿಕಾರವನ್ನು ನೀಡಿರುವುದನ್ನು ತಾವು ಪ್ರಾಂತೀಯ ಸಂವಿಧಾನದಲ್ಲಿ ಕಾಣಬಹುದು. ಆದರೂ ಬಹಳ ಕ್ಲಿಷ್ಟಕರ ಕ್ರಿಯೆಯ ಮೂಲಕ ಅವರನ್ನು ಚುನಾಯಿಸಬೇಕು. ಆದುದರಿಂದ, ಇಲ್ಲೊಂದು ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ರಾಜ್ಯಪಾಲರಿಗೆ ಸೀಮಿತ ಅಧಿಕಾರ ಇರುವುದಾದರೆ, ನಾವೇಕೆ ಇಷ್ಟೊಂದು ಕ್ಲಿಷ್ಟಕರ ಚುನಾವಣಾ ಪ್ರಕ್ರಿಯೆಯನ್ನು ಅಳವಡಿಸಬೇಕು? ಏಕೆಂದರೆ, ವಯಸ್ಕಮತದಾನದ ಆಧಾರದ ಮೇಲೆ ಚುನಾವಣೆ ನಡೆಸುವುದು ಬಹಳ ಕಷ್ಟ. ಜನತಾ ರಾಜ್ಯಪಾಲರ ಘನತೆಗೆ ಅನುಗುಣವಾಗಿ, ಚುನಾವಣೆ ನಡೆಯುವುದು ಅಗತ್ಯವೆಂದು ಭಾವಿಸಲಾಗಿದೆ. ಅವರು ಪ್ರಾಂತ್ಯದ ಎಲ್ಲ ವರ್ಗಗಳ ಜನರಿಂದಲೂ ಬೆಂಬಲವನ್ನು ಪಡೆದು ಚುನಾಯಿತರಾಗಿರುವ ಕಾರಣ ಸಹಜವಾಗಿ ತಮ್ಮ ಪ್ರಭಾವವನ್ನು ಜನತಾ ಮಂತ್ರಿಮಂಡಲದ ಮೇಲೆ ಬೀರಬಲ್ಲವರಾಗಿರುತ್ತಾರೆ, ಹಾಗೂ ಅವರ ಪ್ರಭಾವ ಇಡೀ ಪ್ರಾಂತ್ಯದ ಮೇಲೆ ಬೀರಲ್ಪಡುತ್ತೆ, ಅದರ ಸ್ಥಾನಗೌರವ, ರಾಷ್ಟ್ರದ ಎಲ್ಲ ವರ್ಗಗಳ ಜನತೆಯ ಸರ್ವಾನುಮತ ಬೆಂಬಲವನ್ನು ಬೇಡುತ್ತೆ. ಆದುದರಿಂದ ಈ ಪ್ರಸ್ತಾವದ ಮುಖ್ಯಾಂಶಗಳು ಎರಡು.

ಒಂದು ಮಾದರಿ ಪ್ರಾಂತೀಯ ಸಂವಿಧಾನ ವರದಿಯ ಮೇರೆ ರಾಜ್ಯಪಾಲರ ನೇಮಕಾತಿ ಅವಶ್ಯಕ, ಇನ್ನೊಂದು ವಯಸ್ಕರ ಮತದಾನ. ಆದುದರಿಂದ ನಾನು ಪ್ರಸ್ತಾವವನ್ನು ಮಂಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಈ ಖಂಡಕ್ಕೆ ಹಲವಾರು ತಿದ್ದುಪಡಿಗಳನ್ನು ಸೂಚಿಸಿ, ಕಳುಹಿಸಿರುವ ನೋಟೀಸುಗಳು ನನ್ನ ಕೈ ಸೇರಿವೆ. ಅವುಗಳಲ್ಲಿ ಅನೇಕ ಮುದ್ರಿತ ರೂಪದಲ್ಲಿ ಪರಿಚಲಿತವಾಗಿವೆ. ಆದರೆ ಈಗಲೂ ಕೆಲವು ತಿದ್ದುಪಡಿಗಳು ಬರುತ್ತಿವೆ ಅವುಗಳನ್ನು ನಾನು ಸ್ವೀಕರಿಸುತ್ತಿಲ್ಲ.

**ಓರ್ವ ಗೌರವಾನ್ವಿತ ಸದಸ್ಯ :** ತಮ್ಮ ಅನುಮತಿ ಬೇಡಿ, ನಾನೊಂದು ಪ್ರಶ್ನೆ ಕೇಳಲೆ? ಪ್ರಾಂತೀಯ ಸಂವಿಧಾನ ಸಮಿತಿ ಮತ್ತು ಒಕ್ಕೂಟದ ಸಂವಿಧಾನ ಸಮಿತಿ ಕೂಡಿದ ಒಂದು ಜಂಟಿ ಸಮಿತಿಯ ಸಭೆ ನಡೆಯಿತೆಂದು ಸರ್ದಾರ್ ವಲ್ಲಭಭಾಯಿ ಪಟೇಲರು ತಮ್ಮ ಭಾಷಣದ ನಡುವೆ ತಿಳಿಸಿದರು. ಮತ್ತು ಆ ಜಂಟಿ ಸಭೆಯ ವ್ಯವಹಾರಗಳ ಫಲವಾಗಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಹೇಳಿದರು. ಆ ಸಂದರ್ಭದಲ್ಲಿ ಈ ಖಂಡವನ್ನು ಪರಿಶೀಲಿಸಲಾಯಿತೆ ಎಂಬುದ್ದನ್ನು ತಿಳಿಯಬಹುದೆ? ರಾಜ್ಯಪಾಲರು ವಯಸ್ಕ ಮತದಾನದಿಂದ ನೇರವಾಗಿ ಚುನಾಯಿತರಾಗಬಾರದೆಂದೂ, ಜಂಟಿವರ್ಗಾವಣೀಯ ಮತದ ವಿಧಾನದಿಂದ, ಪ್ರಮಾಣಾನುಸಾರ ಪ್ರಾತಿನಿಧ್ಯದ ತತ್ತ್ವದ ಮೇಲೆ ಚುನಾಯಿಸಲ್ಪಡಬೇಕೆಂದು ಸಮಿತಿ ಅಭಿಪ್ರಾಯಪಟ್ಟದು ನಿಜವೆ?

**ಮಾನ್ಯ ಅಧ್ಯಕ್ಷರು :** ಆ ಪ್ರಶ್ನೆಗೆ ಪ್ರಸ್ತಾವಕರು, ಇಷ್ಟವಿದ್ದರೆ ಉತ್ತರಿಸಬಹುದು.

**ಶ್ರೀ ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್** (ಮದ್ರಾಸು : ಸಾಮಾನ್ಯ) : ನಾನೊಂದು ವಿಷಯಕ್ಕೆ ಸ್ಪಷ್ಟನೆ ಬೇಡುತ್ತೇನೆ. ಪ್ರಾಂತ್ಯಗಳಿಗಾಗಿ ರಚಿಸಿದ ಈ ಸಂವಿಧಾನವನ್ನು ಪ್ರಾಂತ್ಯಗಳು ಅನಿವಾರ್ಯವಾಗಿ ಅಂಗೀಕರಿಸಬೇಕೆ, ಅಥವಾ ಕೆಲ ಬದಲಾವಣೆಗಳೊಂದಿಗೆ ಅಳವಡಿಸುವ ಸ್ವಾತಂತ್ರ್ಯ ಪ್ರಾಂತ್ಯಗಳಿಗಿದೆಯೋ. ಈ ವಿಷಯಕ್ಕೆ ನನಗೆ ಸ್ಪಷ್ಟ ವಿವರಣೆ ಬೇಕಿದೆ.

**ಮಾನ್ಯ ಅಧ್ಯಕ್ಷರು :** ಈ ಎಲ್ಲ ಪ್ರಶ್ನೆಗಳಿಗೆ. ಪ್ರಸ್ತಾವಕರು ಇಷ್ಟವಿದ್ದರೆ, ಉತ್ತರಿಸಬಹುದು.

**ಡಾ. ಪಿ.ಎಸ್. ದೇಶ್‌ಮುಖ್** (ಸಂ. ಪ್ರಾಂ : ಬೆರಾರ್) : ಮಾನ್ಯರೆ, ಈಗ ತಾವು ಸ್ವೀಕರಿಸಿರುವ ತಿದ್ದುಪಡಿಗಳ ಬಗ್ಗೆ ಒಂದು ಮಾತು ಹೇಳುವುದಿದೆ. ತಿದ್ದುಪಡಿಗಳನ್ನು ಮೊದಲೆ ಕಳುಹಿಸುವಂತೆ ನಮಗೆ ತಿಳಿಸಲಾಗಿತ್ತು. ಆದರೆ ಸಮಗ್ರವಾದ ಸಾರಭೂತ ಪ್ರಸ್ತಾವವನ್ನು ಈಗಷ್ಟೆ ಮಂಡಿಸಲಾಗಿದೆ. ಅದರ ನಂತರವೆ, ಯಾವುದೇ ತಿದ್ದುಪಡಿಗಳನ್ನು ಕಳುಹಿಸುವ ಹಕ್ಕು ಸದಸ್ಯರಿಗಿದೆ. ಆದುದರಿಂದ ತಮ್ಮಲ್ಲಿ ನಾನು ಕೋರುವುದೆಂದರೆ, ಈಗ ತಮಗೆ ಕಳುಹಿಸಿಕೊಟ್ಟಿರುವ ಮತ್ತು ಮುಂದೆ ೬ ಘಂಟೆಯವರೆಗೆ ಕಳುಹಿಸುವ ತಿದ್ದುಪಡಿಗಳನ್ನು ಅಂಗೀಕರಿಸಿ ಪರಿಶೀಲಿಸಬೇಕು. ಇಲ್ಲವಾದರೆ ಅದು ನ್ಯಾಯಸಮ್ಮತ ಕ್ರಮವಾಗುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಅದರರ್ಥ, ತಿದ್ದುಪಡಿಗಳಿಗೆ ಸದಸ್ಯರು ನೋಟೀಸ್ ಕೊಟ್ಟು ಮತ್ತೆ ಅವುಗಳನ್ನು ನಂತರ ಪರೀಶಿಲಿಸಲು, ಸದನದ ವ್ಯವಹಾರವನ್ನು ನಾಳೆಗೆ ಮುಂದೂಡಬೇಕೆಂತಲೆ, ಡಾ. ದೇಶಮುಖ್?

**ಡಾ. ಪಿ.ಎಸ್. ದೇಶ್‌ಮುಖ್ :** ಇಲ್ಲ ಮಾನ್ಯರೆ, ಈಗಾಗಲೆ ತಲುಪಿರುವ ಮುದ್ರಿತ ನೋಟೀಸುಗಳನ್ನು ಚರ್ಚೆಗೆ ತೆಗೆದುಕೊಂಡು ವ್ಯವಹಾರ ಮುಂದುವರೆಸೋಣ. ಹಾಗೊಮ್ಮೆ ದಿನದ ಕಲಾಪಗಳ ನಡುವೆ ನೋಟೀಸುಗಳನ್ನು ಕಳುಹಿಸಿಕೊಟ್ಟರೆ ಅವುಗಳನ್ನು ಪರಿಶೀಲಿಸೋಣ ಎಂದು ನನ್ನ ಸಲಹೆ. ಮೊದಲನೇ ಖಂಡಕ್ಕೆ ಅಸಂಖ್ಯ ತಿದ್ದುಪಡಿಗಳಿವೆ. ಅವುಗಳನ್ನು ಪರಿಶೀಲಿಸುವುದಕ್ಕೆ ಸಾಕಷ್ಟು ಕಾಲ ಹಿಡಿಯುತ್ತೆ. ಹೊಸ ನೋಟೀಸುಗಳನ್ನು ಸ್ವೀಕರಿಸುವುದರಿಂದ, ವೇಳೆ ವ್ಯರ್ಥವಾಗದು.

**ಮಾನ್ಯ ಅಧ್ಯಕ್ಷರು :** ನೀವು ನೋಟೀಸು ಕಳುಹಿಸಿರುವ ತಿದ್ದುಪಡಿಗಳಿಗೆ ಪರಿಶೀಲನೆಗಾಗಿ, ಸದಸ್ಯರಿಗೆ ಕಾಲಾವಕಾಶವಿದ್ದರೆ, ನಾನು ಅದಕ್ಕೆ ಅಡ್ಡಿ ಬರಲಾರೆ. ಆದರೆ ಸದಸ್ಯರಿಗೆ ತಿದ್ದುಪಡಿಗಳನ್ನು ಪರಿಶೀಲಿಸಲು ಕಾಲಾವಕಾಶ ಕೊಡದೆ, ನೋಟೀಸು ಕಳುಹಿಸಿದರೆ ನಾನವುಗಳನ್ನು ಅಂಗೀಕರಿಸಲಾರೆ.

**ಶ್ರೀ ಮಹಾವೀರ್ ತ್ಯಾಗಿ :** ಒಂದು ಕ್ರಿಯಾಲೋಪ ಮಾನ್ಯರೆ,

**ಮಾನ್ಯ ಅಧ್ಯಕ್ಷರು :** ಕ್ರಿಯಾಲೋಪ ಯಾವುದರ ಮೇಲೆ?

**ಶ್ರೀ ಮಹಾವೀರ್ ತ್ಯಾಗಿ :** ನಿಯಮಗಳ ವ್ಯಾಖ್ಯಾನದ ಬಗ್ಗೆ ತಮಗೊಂದು ಪ್ರಶ್ನೆ. ಪ್ರಸ್ತಾವ ಮಂಡಿಸುವ ದಿನಕ್ಕೆ ಒಂದು ದಿನ ಮುಂಚೆ ನೋಟೀಸು ಕಳುಹಿಸಬೇಕೆಂದು ನಿಯಮ ಇದೆ. 'ಪ್ರಸ್ತಾವ' ಎಂದರೆ ಇಡೀ ವರದಿಯ ಅಥವಾ ಪ್ರತಿಯೊಂದು ಖಂಡವೂ ಒಂದು ಪ್ರಸ್ತಾವವಾಗುವುದೆ? ನನಗೆ ತಿಳಿದಂತೆ, ನಮ್ಮ ಪ್ರಾಂತೀಯ ಶಾಸನಸಭೆಯಲ್ಲಿ ಪ್ರಸ್ತಾವ ಎಂದರೆ ಸದನಕ್ಕೆ ಹಾಕಿದ ಪ್ರಶ್ನೆ; ಅಥವಾ ಸದನದ ಮುಂದೆ ಚರ್ಚೆಗೆ ಬರುವ ಪ್ರಶ್ನೆ. ಹಾಗಾಗಿ ಪ್ರತಿಯೊಂದು ಪ್ರಶ್ನೆಯೂ ತನ್ನದೆ ರೀತಿಯಲ್ಲಿ ಪ್ರಸ್ತಾವವಾಗುತ್ತದೆ. ಮಾನ್ಯರೆ, ಈ ವರದಿಯ ೨೧ನೇ ವಾಕ್ಯಖಂಡಕ್ಕೆ ನಾನೊಂದು ತಿದ್ದುಪಡಿಯನ್ನು ಕಳುಹಿಸಿದರೆ, ಅದು ನಾಳಿದ್ದು ಚರ್ಚೆಗೆ ಬರುವ ನಿರೀಕ್ಷೆಯಿದೆ ಮತ್ತು ಅದರ ನೋಟೀಸನ್ನು ಇಂದು ಕಳುಹಿಸಿದರೆ, ಅದು ಕ್ರಮಬದ್ಧವಾಗಿದೆ ಎಂದುಕೊಂಡಿದ್ದೇನೆ. ಮಾನ್ಯರೆ, ಏಕೆಂದರೆ, ಒಂದು ಇಡೀ ದಿನದ ಮುಂಗಡ ನೋಟೀಸು ಕಳುಹಿಸಿರುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ೩೨ನೇ ನಿಯಮ ಹೀಗಿದೆ.

"ಅಧ್ಯಕ್ಷರು ಅನುಮತಿಸಿದ ಹೊರತು, ಪ್ರಸ್ತಾವಕ್ಕೆ ಯಾವುದೇ ತಿದ್ದುಪಡಿಯನ್ನು ಸೂಚಿಸಿ, ನೋಟೀಸು ಕಳುಹಿಸುವುದಾದರೆ ಸ್ಪಷ್ಟವಾಗಿ ಒಂದು ದಿನ ಮುಂಚೆ ಕಳುಹಿಸಬೇಕು."

ಈಗಾಗಲೆ ಪ್ರಸ್ತಾಪಿಸಲಾದ ಪ್ರಸ್ತಾವದ ನೋಟೀಸನ್ನು ಕೆಲದಿನಗಳ ಹಿಂದೆಯೇ ಪರಿಚಲಿಸಲಾಗಿತ್ತು ಎಂದುಕೊಂಡಿದ್ದೇನೆ. ತಿದ್ದುಪಡಿಗಳಿಗೆ ೨೪ ತಾಸುಗಳ ಕಾಲಾವಕಾಶ ಸದಸ್ಯರಿಗೆ ಸಾಕಾಗುತ್ತದೆ. ಆದುದರಿಂದ ಈಗ ಕಳುಹಿಸುವ ನೋಟೀಸನ್ನು ನಾನು ಅಂಗೀಕರಿಸಲಾರೆ ಎಂದು ಹೇಳಿದೆ.

**ಶ್ರೀ ಮಹಾವೀರ್ ತ್ಯಾಗಿ :** ನಾನು ಕೇಳಿದ್ದು ಮೂರು ದಿನಗಳು ಕಳೆದು, ೨೧ನೇ ಖಂಡವನ್ನು ಪ್ರಸ್ತಾವಿಸಿದರೆ ಅದು ಪ್ರಸ್ತಾವವಾಗುತ್ತದೆಯೇ ಇಲ್ಲವೆ. ಸದನದ ವಶದಲ್ಲಿ ಆ ಪ್ರಸ್ತಾವ ಇರುತ್ತದೆ. ೩ ದಿನಗಳು ಕಳೆದ ನಂತರ ಅದನ್ನು ಕುರಿತು ಚರ್ಚಿಸುತ್ತದೆ. ಆದುದರಿಂದ, ನಾನೊಂದು ತಿದ್ದುಪಡಿಯನ್ನು ತರುವ ಹಕ್ಕು ನನಗಿರುತ್ತದೆ. ಏಕೆಂದರೆ, ಸ್ಪಷ್ಟವಾದ ಒಂದು ದಿನಕ್ಕೆ ಮುಂಚೆಯೇ ಕೊಟ್ಟಿರುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ನಾನಾಗಲೆ ಹೇಳಿದಂತೆ, ತಿದ್ದುಪಡಿ ಸಕಾಲಕ್ಕೆ ಸದಸ್ಯರ ಕೈ ಸೇರಿದರೆ, ಅವರಿಗೆ ಸದನಕ್ಕೆ ಬರುವ ಮುನ್ನ ಅದರ ಅಧ್ಯಯನಕ್ಕೆ ಕಾಲಾವಕಾಶವಿರುತ್ತದೆ. ನಾನು ಸ್ವೀಕರಿಸಬಹುದು. ಆದರೆ ಮುದ್ರಿಸಿದ ಮತ್ತು ಸದಸ್ಯರ ನಡುವೆ ಪರಿಚಲಿಸದ ತಿದ್ದುಪಡಿಗಳನ್ನು ಅಂಗೀಕರಿಸಲಾರೆ; ಆದರೆ ಈಗ ನೋಟೀಸು ಕೊಟ್ಟು, ಪ್ರಸ್ತಾವ ತಿದ್ದುಪಡಿ ಮೂರುದಿನ ಕಳೆದು ಸಭೆಯ ಮುಂದೆ ಬರುವುದಾದರೆ, ನನಗೆ ಅಡ್ಡಿಯಿಲ್ಲ.

**ಶ್ರೀ ಮಹಾವೀರ ತ್ಯಾಗಿ :** ಧನ್ಯವಾದಗಳು ಮಾನ್ಯರೆ, ನನ್ನ ಉದ್ದೇಶ ಈಡೇರಿತು.

**ಮಾನ್ಯ ಅಧ್ಯಕ್ಷರು :** ನಾವು ತಿದ್ದುಪಡಿಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

**ಶ್ರೀ ನಜೀರುದ್ದೀನ್ ಅಹ್ಮದ್ :** ಮಾನ್ಯರೆ, ತಿದ್ದುಪಡಿಗಳ ಪ್ರತಿಗಳು ಇಂದು ಬೆಳಗ್ಗೆ ತಾನೆ ನಮ್ಮ ಕೈಸೇರಿದೆ ಎಂದು ತಿಳಿಸಲು ಬಯಸುತ್ತೇನೆ. ಇದರಲ್ಲಿ ಸಮೀಕ್ಷಿಸಿದ ವಿಷಯಗಳು ಕ್ಲಿಷ್ಟವೂ ಗಹನವೂ ಆಗಿದೆ. ನಮಗೆ ಈ ತಿದ್ದುಪಡಿಗಳ ಅಧ್ಯಯನಕ್ಕೆ ಕಾಲಾವಕಾಶವಿಲ್ಲದಾಗಿದೆ. ಆದುದರಿಂದ, ಇವುಗಳನ್ನು ಪರಾಮರ್ಶಿಸಲು ಕನಿಷ್ಠ ಇಪ್ಪತ್ನಾಲ್ಕು ತಾಸುಗಳ ಕಾಲಾವಕಾಶ ಒದಗಿಸಬೇಕೆಂದು ನನ್ನ ನಿವೇದನೆ, ನಂತರ ಅವುಗಳನ್ನು ಅನುಮೋದಿಸಲು ಯಾ ತಿರಸ್ಕರಿಸಲು ಯಾ ನಮ್ಮ ಅನಿಸಿಕೆಗಳನ್ನೂ ತಿಳಿಸಲು ನಾವು ಸಿದ್ಧರಿರಬಹುದು. ಅದೊಂದೆ ನನ್ನ ಕೋರಿಕೆ.

**ಮಾನ್ಯ ಅಧ್ಯಕ್ಷರು :** ನನಗೆ ತಿಳಿದುಬಂದಂತೆ ಅವುಗಳನ್ನು ನಿನ್ನೆ ರಾತ್ರಿಯೇ ಹಂಚಲಾಗಿತ್ತಲ್ಲವೆ?

**ಶ್ರೀ ನಜೀರುದ್ದೀನ್ ಅಹ್ಮದ್ :** ಆದರೆ ಅದು ನಮಗೆ ತಲುಪಿದ್ದು ಇಂದು ಬೆಳಗ್ಗೆಯಷ್ಟೆ. ನಮ್ಮಲ್ಲಿ ಕೆಲವರಿಗೆ, ಸಭಾಂಗಣಕ್ಕೆ ಬರುವಾಗ ಸಿಕ್ಕಿದ್ದು.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿಗಳನ್ನು ಕಳುಹಿಸುವುದಕ್ಕೆ ನಿನ್ನೆ ಸಂಜೆಯವರೆಗೆ ಸದಸ್ಯರಿಗೆ ಕಾಲಾವಕಾಶ ಕೊಟ್ಟಿದ್ದೆ. ಅದರ ಮುದ್ರಣಕ್ಕೆ ಸಾಕಷ್ಟು ಸಮಯ ಹಿಡಿದಿದೆ. ಸದಸ್ಯರಲ್ಲಿ ಪ್ರತಿಗಳ ಪರಿಚಲನೆಯಲ್ಲಿ ವಿಳಂಬವಾಗಿದೆ. ಕೆಲವರಿಗೆ ಪ್ರತಿಗಳು ದೊರೆತಿವೆ ಆದರೆ ತಡವಾಗಿ. ಸದಸ್ಯರಿಗೆ, ಪ್ರತಿಗಳನ್ನು ಅಧ್ಯಯನ ಮಾಡಲು, ಕಾಲಾವಕಾಶ ಬೇಕೆನ್ನುವುದಾದರೆ, ಅವರ ಪರಿಶೀಲನೆಯನ್ನು ಮುಂದೂಡಬಹುದು. ಆದರೆ ನಮಗಿನ್ನೂ ೪೦ ನಿಮಿಷಗಳ ಕಾಲಾವಕಾಶವಿದೆ. ಅವರ ಪರಿಶೀಲನೆಗಳನ್ನು ನಾವೀಗ ಅಂಗೀಕರಿಸಬಹುದೆಂದು ನನ್ನ ಸಲಹೆ. ಒಂದೆರಡು ತಿದ್ದುಪಡಿಗಳಿಗಿಂತ ಹೆಚ್ಚು ನಾನು ಪರಿಶೀಲನೆಗೆ ತೆಗೆದುಕೊಳ್ಳಲಾಗದು. ತೊಂದರೆಯಿದ್ದರೆ, ಅವುಗಳನ್ನು ಮುಂದೂಡುವ ವಿಷಯವನ್ನು ಪರಿಶೀಲಿಸಬಹುದು.

**ಶ್ರೀ ನವಾಬ್ ಮುಹಮ್ಮದ್ ಇಸ್ಮಾಯಿಲ್ ಖಾನ್ :** (ಸಂಯುಕ್ತ ಪ್ರಾಂತ್ಯಗಳು–ಮುಸ್ಲಿಮ್) ಈ ತಿದ್ದುಪಡಿಗಳನ್ನು ಇಂದು ಮಧ್ಯಾಹ್ನವಷ್ಟೆ ಸಭೆಯ ಗಮನಕ್ಕೆ ತರಲಾಯಿತು. ಇವುಗಳ ಹಿನ್ನೆಲೆಯಲ್ಲಿ ಮಸೂದೆಯನ್ನು ಪರಿಶೀಲಿಸಲು ನಮಗೆ ಸಮಯ ಸಾಲದಾಗಿದೆ. ನನಗನಿಸುತ್ತೆ, ಸದಸ್ಯರಿಗೆ ಸಾಕಷ್ಟು ಸಮಯವೊದಗಿಸಿ, ಮಸೂದೆಯ ಅಧ್ಯಯನದ ನಂತರ ತಿದ್ದುಪಡಿಗಳನ್ನು ಒಂದರ ನಂತರ ತೆಗೆದುಕೊಳ್ಳಬಹುದು.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿಗಳ ಪರಿಚಲನೆ ಕಳೆದ ರಾತ್ರಿಯೆ ಆಗಿರುವುದೆಂದುಕೊಂಡಿದ್ದೆ.

**ಶ್ರೀ ನವಾಬ್ ಮುಹಮ್ಮದ್ ಇಸ್ಮಾಯಿಲ್ ಖಾನ್ :** ನಮಗೆ ಈ ಮಧ್ಯಾಹ್ನವಷ್ಟೆ ಈ ಪುಸ್ತಕ ಕೈಸೇರಿತು.

**ಶ್ರೀ ಕೆ.ಎಂ. ಮುನ್ಷಿ :** ಆದರೆ ಬಹುತೇಕ ಸದಸ್ಯರಿಗೆ ನಿನ್ನೆ ರಾತ್ರಿಯೇ ತಲುಪಿದೆ.

**ಮಾನ್ಯ ಅಧ್ಯಕ್ಷರು :** ಇತ್ತೀಚೆಗೆ ತಿದ್ದುಪಡಿಗಳ ಪರಿಚಲನೆಗೆ ತಡವಾಗುತ್ತಿದೆ. ಕಾರಣ, ಕೆಲವು ಸದಸ್ಯರ ವಿಳಾಸಗಳು ಕಛೇರಿಗೆ ಗೊತ್ತಿರಲಿಲ್ಲ. ಕೆಲವು ಸದಸ್ಯರಿಗೆ ಈ ಮಧ್ಯಾಹ್ನ ತಡವಾಗಿ ತಲುಪಿದೆ. ಈ ತಿದ್ದುಪಡಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆ ಎಂಬುದನ್ನು ಸದನಕ್ಕೇ ಬಿಡುತ್ತೇನೆ.

(ಕಿಂಚಿತ್ ಮೌನ–ನಂತರ)

ನಾನೀಗ ಮೌಲಾನಾ ಹಸ್ರತ್ ಮೋಹಾನಿ ಅವರನ್ನು ತಮ್ಮ ತಿದ್ದಪಡಿಯನ್ನು ಪ್ರಸ್ತಾಪಿಸುವಂತೆ ಕೋರುತ್ತೇನೆ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** (ಮದ್ರಾಸ್ : ಮುಸ್ಲಿಮ್) : ನಿನ್ನೆ ತಮ್ಮಲ್ಲಿ ನಾನೊಂದು ಕೋರಿಕೆ ಸಲ್ಲಿಸಿದ್ದೆ. ಅದನ್ನೀಗ ನೆನಪು ಮಾಡಲು ಬಯಸುತ್ತಿದ್ದೇನಷ್ಟೆ, ಸದಸ್ಯರಲ್ಲಿ ಬಹುಸಂಖ್ಯಾತರು ಆಂಗ್ಲಭಾಷೆಯನ್ನುಳಿದು ಬೇರಾವ ಭಾಷೆಯನ್ನೂ ಅರ್ಥಮಾಡಿಕೊಳ್ಳಲಾರರು. ಆದುದರಿಂದ, ಭಾಷಣಗಳನ್ನು ಇಂಗ್ಲಿಷ್‌ನಲ್ಲಿ ಸಿದ್ಧಪಡಿಸುವಂತೆ ಕೋರಿದ್ದೆ, ಮಾನ್ಯರೆ, ಮೌಲಾನಾ ಅವರು ಉರ್ದು ಭಾಷೆಯಲ್ಲಿ ಮಾತನಾಡಲಿರುವ ಕಾರಣ, ಅವರ ಅಮೂಲ್ಯ ಭಾಷಣದ ಇಂಗ್ಲಿಷ್ ಆವೃತ್ತಿಯನ್ನು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಮೌಲಾನಾ ಹಸ್ರತ್ ಮೋಹಾನಿ :** ನಾನು ೧ನೇ ಖಂಡಕ್ಕೆ ನನ್ನ ತಿದ್ದುಪಡಿಯನ್ನು ಪ್ರಸ್ತಾವಿಸುತ್ತೇನೆ. ನನಗೆ ಪರಕೀಯ ಭಾಷೆಯೊಂದರಲ್ಲಿ ಅಭಿವ್ಯಕ್ತಿಸಲು ತುಸು ತ್ರಾಸವಾಗುತ್ತೆ. ಆದರೂ ನನ್ನ ಮದ್ರಾಸಿನ ಮಿತ್ರರ ಸೌಲಭ್ಯಕ್ಕಾಗಿ ನಾನು ಆಂಗ್ಲ ಭಾಷೆಯಲ್ಲಿ ಮಾತನಾಡಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ, ನಾನೀಗ ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿದ್ದೇನೆ.

“೧ನೇ ಖಂಡದಲ್ಲಿ ‘ಒಬ್ಬರು ರಾಜ್ಯಪಾಲರು’ ಎಂಬ ಪದಕ್ಕೆ ಬದಲಾಗಿ ‘ಒಬ್ಬರು ಅಧ್ಯಕ್ಷರು’ ಎಂಬ ಪದವನ್ನು ಪ್ರತಿಯೋಜಿಸಬೇಕು.

ಇದರ ಮೂಲಕ, ತಮ್ಮಲ್ಲಿ ಅಂತರ್ಗತವಾಗಿರುವ ಹಕ್ಕನ್ನು ಚಲಾಯಿಸುವುದು ನಮ್ಮ ಉದ್ದೇಶ. ಪ್ರತಿಯೊಂದು ಪ್ರಾಂತ್ಯಕ್ಕೂ ಒಂದು ಪ್ರಾಂತೀಯ ಗಣತಂತ್ರವಿರಬೇಕೆಂದು ಒತ್ತಾಯಿಸುವುದು. ಈ ಎಲ್ಲ ಘಟಕ ಪ್ರಾಂತ್ಯಗಳ ಎಲ್ಲ ಸದಸ್ಯರ ಹಕ್ಕು. ನಾವು, ಭಾರತೀಯ ಗಣತಂತ್ರದ ಒಕ್ಕೂಟ ನಮಗೆ ಲಭಿಸುವ ನಿರೀಕ್ಷೆಯಲ್ಲಿದ್ದೆವು; ನಾವು ಬಯಸಿದ್ದು ಅದೇನೆ. ಕಳೆದ ಅಧಿವೇಶನದಲ್ಲಿ ನನ್ನ ಮಿತ್ರರಾದ ತ್ರಿಪಾಠಿಯವರು, ಒಂದು ತಿದ್ದುಪಡಿಯನ್ನು ಪ್ರಸ್ತಾವಿಸಿದ್ದರು; 'ಸಮಾಜವಾದ' ಎಂಬ ಪದವನ್ನು ಸೇರಿಸಲು ಅವರು ಉದ್ದೇಶಿಸಿದ್ದರು, ಅದಕ್ಕೆ ಸದನದ ಬೆಂಬಲ ದೊರೆಯಲಿಲ್ಲ, ನಾನು ಅದರ ಬಗ್ಗೆ ಅನಂತರ ವಿಚಾರಿಸಿಕೊಳ್ಳುತ್ತೇನೆ. ನಮಗೊಂದು ಫೆಡರಲ್ ಗಣತಂತ್ರವಿದ್ದರೆ ಅದನ್ನು 'ಸಮಾಜವಾದಿ ಗಣತಂತ್ರ' ಗಣರಾಜ್ಯವನ್ನಾಗಿ ಮಾಡುತ್ತಿರೋ ಇಲ್ಲವೋ ಅದು ಮುಖ್ಯವಲ್ಲ. ಮೊದಲಿಗೆ ನೀವು ಒಂದು ರಾಷ್ಟ್ರವಾದಿ ಸಂವಿಧಾನವನ್ನು ಹೊಂದಬಹುದು. ಜೊತೆಗೆ ಬಹುಸಂಖ್ಯಾತ ರಾಷ್ಟ್ರವಾದಿ ಸದಸ್ಯರನ್ನೂ. ಆದರೆ, ನಮ್ಮಲ್ಲಿರುವ ಪ್ರತಿಯೊಬ್ಬರಂತೆ, ಜಗತ್ತಿನ ಸರ್ವಸಾಮಾನ್ಯ ಪ್ರವೃತ್ತಿ ಸಮಾಜವಾದಿ ಯಾಗುವುದು. ನಾವು ಒಂದು ಸುಸಂಘಟಿತ, ದೃಢವಾದ ವಾಮಪಂಥೀಯರನ್ನು ಹೊಂದುವ ಕಾಲ ಸನ್ನಿಹಿತವಾಗಿದೆ ಎಂದು ನನಗನಿಸುತ್ತದೆ. ನನ್ನ ಎಣಿಕೆಯಂತೆ, ಅತಿ ಶೀಘ್ರದಲ್ಲಿ ಮುಂದಿನ ಚುನಾವಣೆಯೊಳಗೆ ಇಡೀ ಸಂಸ್ಥೆಯನ್ನು ವಶಪಡಿಸಿಕೊಳ್ಳುತ್ತೇವೆ. ಪ್ರತಿಯೊಂದು ಪ್ರಾಂತ್ಯವನ್ನು ನೀವು ಗಣತಂತ್ರವನ್ನಾಗಿ ಮಾಡಿದರೆ, ನೀವು ಸಮಾಜವಾದಿ ಅದನ್ನು ಗಣರಾಜ್ಯವನ್ನಾಗಿ ಮಾಡುತ್ತಿರೋ ಬಿಡುತ್ತಿರೋ ನಿಮ್ಮ ಒಪ್ಪಿಗೆ ನನಗೆ ಲೆಕ್ಕಕ್ಕಿಲ್ಲ. ನಾವದನ್ನು ಸಮಾಜವಾದಿ ಗಣರಾಜ್ಯವನ್ನಾಗಿ ಮಾಡುತ್ತೇವೆ. ಆದರೆ ಒಂದು ಮಾತು ಹೇಳಬೇಕು. ನೀವು ಈ ಪ್ರಶ್ನೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ. ನಮಗೆ ಕೇವಲ ಒಂದು ಗಣರಾಜ್ಯ ಮಾತ್ರ ಕೇಂದ್ರದಲ್ಲಿರಬೇಕು. ನಾವು ಈ ಯಾವುದೇ ಪ್ರಾಂತ್ಯವನ್ನು ಗಣರಾಜ್ಯವಾಗಲು ಬಿಡೆವು ಎಂದು ಹೇಳಲಾಗದು. ನಾನಾಗಲೆ ಹೇಳಿದಂತೆ, ಪ್ರತಿಯೊಂದು ಪ್ರಾಂತ್ಯದಲ್ಲೂ ಒಬ್ಬರು ರಾಜ್ಯಪಾಲರು ಇರಬೇಕು ಎಂದು ಆ ಪದವನ್ನು ಒಪ್ಪಿದರೆ ಅದೊಂದು ಕುತಂತ್ರ. ನಾನು ಅದನ್ನು ರಾಜ್ಯಪಾಲ ಎನ್ನುವ ಬದಲು ಅಧ್ಯಕ್ಷರು ಎಂದು ಕರೆಯುತ್ತೇನೆ. ನೀವು ಅಧ್ಯಕ್ಷರು ಎಂಬ ಪದವನ್ನು ಅಂಗೀಕರಿಸಿದರೆ ಅದರ ಅರ್ಥ ನೀವು ಪ್ರತಿಯೊಂದು ಪ್ರಾಂತ್ಯವನ್ನು ಗಣರಾಜ್ಯವನ್ನಾಗಿ ಮಾಡುತ್ತಿದ್ದೀರಿ ಎಂದಾಗುತ್ತದೆ. ನೀವು 'ಅಧ್ಯಕ್ಷರು' ಎಂಬ ಪದವನ್ನು ನಿರಾಕರಿಸಿದರೆ, ಆ ಪ್ರಾಂತ್ಯಗಳನ್ನು ಕೇವಲ ಸ್ವಾಯತ್ತ ಪ್ರಾಂತ್ಯಗಳಾಗಿ ಉಳಿಸಿಕೊಳ್ಳಲು ತಾವು ಕಂಕಣಬದ್ಧರಾಗಿದ್ದೀರಿ ಎಂದರ್ಥ: ನೀವು ಕೇವಲ ಪ್ರಾಂತೀಯ ಸ್ವಾಯತ್ತತೆಯನ್ನು ಮುಂಜೂರು ಮಾಡುತ್ತೀರೇ ಹೊರತು ಮತ್ತೇನನ್ನೂ ಇಲ್ಲ. ಅದು ನಿಮ್ಮ ಉದ್ದೇಶವಾಗಿದ್ದರೆ ನಾನದನ್ನ ಕಟುವಾಗಿ ವಿರೋಧಿಸುತ್ತೇನೆ. ತೀಕ್ಷ್ಣವಾದ ಪದಗಳನ್ನು ಬಳಸುತ್ತಿಲ್ಲವಾದರೆ, ಈ ತೆರವಾದ ವರ್ತನೆ, ಪ್ರಾಂತೀಯ ಜನತೆಯ ಮೇಲೆ ತತ್ರಾಪಿ ನನ್ನ ಸಂಯುಕ್ತ ಪ್ರಾಂತ್ಯದ ಜನರ ಮೇಲಣ ವಿಡಂಬನೆ ಎಂದುಕೊಳ್ಳುತ್ತೇನೆ, ಇಲ್ಲಿ ನನ್ನ ಮಿತ್ರ ನೆಹರೂ ಹೇಳುತ್ತಾರೆ. 'ನಂತರ ಒಕ್ಕೂಟದ ಸಂವಿಧಾನಕ್ಕೆ ಯಾವುದೇ ತಿದ್ದುಪಡಿ ತರಬಹುದೆ'ನ್ನುತ್ತಾರೆ. ನಾನಿಲ್ಲಿ ಈಗಲೆ ರಾಜ್ಯಪಾಲ ಶಬ್ದವನ್ನು ತೆಗೆದುಹಾಕಿ ಅಧ್ಯಕ್ಷ ಎಂಬ ಪದವನ್ನು ಪ್ರತಿಸ್ಥಾಪಿಸಿ ಎನ್ನುತ್ತೇನೆ. ಮುಂದೆ ನಾನೇದರೂ ಮತ್ತೊಂದು ತಿದ್ದುಪಡಿ ತರಲೆತ್ನಿಸಿದಾಗ ಇಡೀ ಪ್ರಶ್ನೆಯನ್ನು ಮತ್ತೆ ತೆರೆದಿಡಲಾರೆ ಎಂದು ನೀವು ವಾದಿಸಲಾಗದು. ಆಗ ಸಮಸ್ಯೆ ಮತ್ತೆ ತಲೆದೋರುತ್ತದೆ. ನನ್ನ ಮಿತ್ರ ಸರ್ದಾರ್ ಪಟೇಲರು ಹೇಳುತ್ತಾರೆ. 'ರಾಜ್ಯಪಾಲ' 'ಅಧ್ಯಕ್ಷ' ಎರಡರಲ್ಲಿ ಯಾವ ವ್ಯತ್ಯಾಸವೂ ಕಾಣೆ. ಆದರೆ ಅದರಲ್ಲಿ ಅಗಾಧ ವ್ಯತ್ಯಾಸವಿದೆ. ಒಮ್ಮೆ ನೀವು ಆಗದು ನಮಗೆ ಕೇವಲ 'ರಾಜ್ಯಪಾಲ'ರನ್ನು ಮಾತ್ರ ಇರಲಿ ಎನ್ನುವುದಾದರೆ, ನೀವು ಕೇವಲ ಪ್ರಾಂತೀಯ ಸ್ವಾಯತ್ತತೆಯನ್ನು ಮಾತ್ರ ಕೊಡಲು ಬಯಸುತ್ತೀರಿ ಎಂದಾಯಿತು. ಹಲವಾರು ಪ್ರಾಂತ್ಯಗಳನ್ನು ಒಂದು ಹೆಜ್ಜೆ ಮುಂದಿಡಲು ನೀವು ಬಿಡಲಾರಿರಿ, ನಿಮ್ಮ ಒಕ್ಕೂಟದ ವರದಿಯನ್ನು ನಾನು ಅತಿ ಜಾಗರೂಕತೆಯಿಂದ ಓದಿದ್ದೇನೆ. ಈ ವರದಿಯ ೧೨ನೇ ಪುಟದಲ್ಲಿ ೯ನೇ ಖಂಡ ಹೀಗಿದೆ:

ಫೆಡರಲ್ ಅಧಿಕಾರವು ಅನ್ಯಥಾ ಉಪಬಂಧಿಸುವವರೆಗೆ ಫೆಡರಲ್ ವಿಷಯಗಳಿಗೆ ಸಂಬಂಧಿಸಿದಂತೆ

ಒಂದು ಫೆಡರಲ್ ರಾಜ್ಯದ ದೊರೆಯ ಕಾರ್ಯ ನಿರ್ವಾಹಕ ಅಧಿಕಾರ ಮುಂದುವರೆದು ಆ ರಾಜ್ಯದಲ್ಲಿ ಚಲಾಯಿಸಲ್ಪಡುತ್ತದೆ."

ಈ ಖಂಡಕ್ಕೆ ಒಂದು ಟಿಪ್ಪಣಿಯನ್ನು ಸೇರಿಸಲಾಗಿದೆ.

"ಈ ಸಂಬಂಧವಾಗಿ ಪ್ರಾಂತೀಯ ಘಟಕಗಳ ನೆಲೆ ಭಿನ್ನರೀತಿಯಲ್ಲಿರುತ್ತದೆ. ಫೆಡರಲ್ ಕಾನೂನು ವಹಿಸಿದ ಕಾರ್ಯಕಾರಿ ಅಧಿಕಾರದ ಹೊರತಾಗಿ ಇವುಗಳಿಗೆ ಬೇರಾವ ಕಾರ್ಯಕಾರಿ ಅಧಿಕಾರವಿರುವುದಿಲ್ಲ."

ಭಾರತೀಯ ರಾಜ್ಯಗಳ ವಿಷಯದಲ್ಲಿ ನೀವೊಂದು ಮಾತನ್ನಾಡುತ್ತೀರಿ. ಆದರೆ, ಪ್ರಾಂತೀಯ ಘಟಕಗಳ ನೆಲೆ ಭಿನ್ನ ಎಂತಲೂ ಹೇಳುತ್ತೀರಿ. ವಿಶೇಷ ವಿಷಯಗಳಲ್ಲಿ ಅವುಗಳಿಗೆ ಯಾವುದೇ ಉಳಿಕೆ ಅಧಿಕಾರ ಇರುವುದಿಲ್ಲ. ಪ್ರಾಂತೀಯ ವಿಷಯವನ್ನು ಮಾತ್ರ ನಿಗದಿಪಡಿಸಿದ್ದೀರಿ, ನೀವು ಈ ವಾಕ್ಯಖಂಡವನ್ನು ಅಂಗೀಕರಿಸಬೇಕೆನ್ನುತ್ತೀರಿ. ನಿಜ, ನೀವು ಬಹುಸಂಖ್ಯೆಯಲ್ಲಿದ್ದೀರಿ. ಘನನ್ನಾದರೂ ನಿಮ್ಮಿಷ್ಟದಂತೆ ಅಂಗೀಕರಿಸ ಬಹುದು. ನ್ಯಾಯ ಮತ್ತು ಔಚಿತ್ಯದ ನೆಲೆಗಟ್ಟಿನ ಮೇಲೆ ನಾನು ಕೇಳುವುದಿಷ್ಟೆ. ಒಕ್ಕೂಟದ ಫೆಡರಲ್ ಪ್ರಾಂತಗಳು ಗಣರಾಜ್ಯಗಳಾಗುವುದನ್ನು ತಡೆಯಲು ನಿಮಗೇನು ಹಕ್ಕಿದೆ? ಫೆಡರಲ್ ಗಣರಾಜ್ಯ ಮಾತ್ರವಲ್ಲ; 'ಸಮಾಜವಾದಿ ಫೆಡರಲ್ ಗಣರಾಜ್ಯ'. ಹಿಂದೆ, ಸಭೆಯ ಅಧಿವೇಶನದಲ್ಲಿ ಈ ಕುಚೋದ್ಯವಾದ ಒಂದು ತಿದ್ದುಪಡಿಯನ್ನು ಮಂಡಿಸಿದೆ. ನೀವದನ್ನು ಅಂಗೀಕರಿಸಲಿಲ್ಲ. ಆಗ ಪರಿಸ್ಥಿತಿ ಬೇರೆಯೇ ಆಗಿತ್ತು. ಪಾಕಿಸ್ತಾನದ ಮಂದಿ, ಕುಚೇಷ್ಟೆ ಮಾಡಿಯಾರೆಂದು ತಾವು ಸಂದೇಹಿಸುತ್ತಿದ್ದಿರಿ. ಆದರೆ ಈಗ ಪ್ರತ್ಯೇಕಗೊಂಡಿದ್ದಾರೆ. ಕೆಲ ಮುಸ್ಲಿಮ್ ಲೀಗ್ ಸದಸ್ಯರು ಆಕ್ಷೇಪಣೆ ಎತ್ತಿದ್ದರು, "ಪಾಕಿಸ್ತಾನ ಹಿಂದೂಸ್ತಾನ ವಿಭಜನೆಯಾದ ಮೇಲೆ ಅಖಿಲ ಭಾರತ ಮುಸ್ಲಿಮ್ ಲೀಗ್‌ನ ಅರ್ಥವೇನು" ಅಖಿಲ ಭಾರತ ಮುಸ್ಲಿಂ ಲೀಗ್ ಎಂದರೆ, ಭಾರತದ ಮುಸ್ಲಿಮ್ ಲೀಗ್ ಎಂದರೆ ಅಲ್ಪಸಂಖ್ಯಾತ ಪ್ರಾಂತ್ಯಗಳು ಹಾಗಾಗಿ ಅವರು ಹೇಳಿದ್ದಿಷ್ಟೆ. ನಿಮಗೆ ಮುಸ್ಲಿಮ್ ಲೀಗ್ ಬೇಕಿದ್ದರೆ, ಹೋಗಿ ಅಲ್ಲಿ ಪಾಕಿಸ್ತಾನಕ್ಕೆಂತಲೆ ಒಂದು ಲೀಗ್ ಸ್ಥಾಪಿಸಿ. ಅಲ್ಲಿ ಮುಸ್ಲಿಮ್ ಅಲ್ಪ ಸಂಖ್ಯಾತ ಪ್ರಾಂತ್ಯಗಳ ಮುಸ್ಲಿಮರಾದ ನಾವು ಯಾವುದೇ ಪ್ರಭಾವ ಬೀರಲಾಗುವುದಿಲ್ಲ.

ಜಿನ್ನಾ ನಿರ್ಧರಿಸಿದಂತೆ ಅಖಿಲ ಭಾರತ ಮುಸ್ಲಿಮ್ ಲೀಗ್ ಇನ್ನೂ ಅಸ್ತಿತ್ವದಲ್ಲಿದೆ. ಹೊಸ ಸದಸ್ಯರ ಸೇರ್ಪಡೆಯಾಗಿದೆ. ನಾನು ಸಂಯುಕ್ತ ಪ್ರಾಂತ್ಯದ ಸದಸ್ಯ (ಸಭೆಯಲ್ಲಿ ಗಲಭೆ)

**ಮಾನ್ಯ ಅಧ್ಯಕ್ಷರು** : ಸದ್ದು ಸದ್ದು.

**ಓರ್ವ ಗೌರವಾನ್ವಿತ ಸದಸ್ಯ** : ಇದೇನು ಅಖಿಲ ಭಾರತ ಮುಸ್ಲಿಮ್ ಲೀಗ್ ಎಂದು ಭಾಷಣಕಾರರು ಭಾವಿಸಿದ್ದಾರೆಯೊ?

**ಮೌಲಾನಾ ಹಸ್ರತ್ ಮೋಹಾನಿ** : ಇಲ್ಲ ಇಲ್ಲ. ನಾನು ಹೇಳಿದ್ದು ನನಗೂ ಪಾಕಿಸ್ತಾನಕ್ಕೂ ಯಾವುದೇ ಸಂಬಂಧವಿಲ್ಲ. ಅಖಿಲ ಭಾರತ ಮುಸ್ಲಿಮ್ ಲೀಗ್ ಪರಿಷತ್ತಿನ ಸದಸ್ಯನಾಗಿದ್ದೇನಷ್ಟೆ, ನಾವು ಒಕ್ಕೂಟದ ಸಂವಿಧಾನವನ್ನು ಮೊದಲು ಪರಿಶೀಲನೆಗೆ ತೆಗೆದುಕೊಂಡರೆ, ತೊಂದರೆಯೇನು? ತಾವು ಉದ್ದೇಶಪೂರ್ವಕವಾಗಿಯೇ, ಪ್ರಾಂತೀಯ ಸಂವಿಧಾನವನ್ನು ಮೊದಲು ತೆಗೆದುಕೊಂಡಿದ್ದೀರಿ, ಏನದರ ಅರ್ಥ? ಈ ಮಾದರಿಯನ್ನು ತರಾತುರಿಯಿಂದ ಪರಿಶೀಲಿಸುವುದರಿಂದ ನಮಗೆ ಅತೀವ ಅನ್ಯಾಯ ಮಾಡುತ್ತಿದ್ದೀರಿ, ನಿಜ. ನೀವದನ್ನು ಅಂಗೀಕರಿಸಬಹುದು. ಆದರೆ ನೀವು ಪ್ರಾಂತೀಯ ಸಂಸ್ಥಾನಗಳ ಸ್ವಾತಂತ್ರ್ಯದ ಬೇಡಿಕೆಯನ್ನು ನಿಷೇಧಿಸಲಾಗದು. ಅವುಗಳು ಗಣರಾಜ್ಯವಾಗುವುದನ್ನು ತಡೆಯಲಾಗದು. ನೀವು ಹೇಳಿದ್ದೀರಿ, ನಮಗೆ ಕೇವಲ ಸಂಯುಕ್ತ ಗಣರಾಜ್ಯ ಬೇಕು, ಹಾಗಿದ್ದರೆ ನಿಮ್ಮ ವರದಿಯಲ್ಲಿ 'ಒಕ್ಕೂಟ' ಎಂಬ ಪದವನ್ನು ಸೇರಿಸಿದ್ದೀರಿ? ಅದು ನಿಮ್ಮ ಉದ್ದೇಶ ಈಡೇರಲಿಕ್ಕೆಂದು ಅದು ಸಾರ್ವಜನಿಕರನ್ನು ಮೋಸಗೊಳಿಸುವ ಯತ್ನ. ನಿಮಗೆ ಸಂಯುಕ್ತ ಎಂಬ ಪದದ ಬಳಕೆಯಲ್ಲಿ ಅಳುಕು. ಆದುದರಿಂದಲೆ, ಪ್ರಾಂತೀಯ ಗಣರಾಜ್ಯ

ಬೇಡವೆಂದು ತಡೆದಿದ್ದೀರಿ. ಆದರೆ ನಾನು ಹೇಳ್ತೇನೆ. ನೀವು ಅವರನ್ನು ಆಗ್ರಹ ಪಡಿಸಲಾಗದು. ನಿಮ್ಮ ಅಧಿಕಾರವನ್ನು ಅವರ ಮೇಲೆ ಹೇರಲಾಗದು. ನಮಗೆ ಸಮಾಜವಾದಿ ರಿಪಬ್ಲಿಕನ್ನರ ಒಕ್ಕೂಟ ಬೇಕು. ನೀವು ನಿಮ್ಮ ಪ್ರಾಂತ್ಯಗಳಲ್ಲಿ ರಾಷ್ಟ್ರವಾದವನ್ನು ಮತ್ತು ರಾಷ್ಟ್ರವಾದಿ ಸಂವಿಧಾನವನ್ನು ಹೇರಿದರೆ, ನೀವು ಈ ಭೂಮಿಯಿಂದ ಸಂಪೂರ್ಣ ನಾಶವಾಗುತ್ತೀರಿ.

(ಶ್ರೀಯುತರಾದ ಎಂ. ಅನಂತಶಯನಂ ಅಯ್ಯಂಗಾರ್, ಖುರ್ಷದ್ ಲಾಲ್, ಶ್ರೀ ಮುನಿಸ್ವಾಮಿ ಪಿಳ್ಳೈ, ಡಾ. ಸಿ ಸುಬ್ಬರಾಯನ್, ಬಿ. ಎ ರಾಮಲಿಂಗಮ್ ಚೆಟ್ಟಿಯಾರ್, ಅಜಿತ್ ಪ್ರಸಾದ್ ಜೈನ್, ಆರ್ ಕೆ ಸಿಧ್ವಾ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಸನ್ಮಾನ್ಯ ಅಧ್ಯಕ್ಷರು :** ೧ನೇ ಖಂಡಕ್ಕೆ ನನಗೆ ತಲುಪಿದ ತಿದ್ದುಪಡಿಗಳು ಇವಿಷ್ಟೆ, ಕೆಲವು ಸದಸ್ಯರು ತಿದ್ದುಪಡಿಗಳನ್ನು ತರುವ ಇಚ್ಛೆ ವ್ಯಕ್ತ ಪಡಿಸಿದ್ದರು. ಅವರ ಕೋರಿಕೆಯನ್ನು ಪರಿಶೀಲಿಸಲು ಬಯಸಿದ್ದೆ. ಆದುದರಿಂದ ನಾನು ಒಂದು ತಿದ್ದುಪಡಿಯನ್ನು ಮಂಡಿಸಲು ಅನುಮತಿ ನೀಡಿದ್ದೇನೆ. ಉಳಿದವು ಇನ್ನು ಪ್ರಸ್ತಾವಿಸಲ್ಪಟ್ಟಿಲ್ಲ. ಆ ತಿದ್ದುಪಡಿಯನ್ನು ನಾಳೆ ಪರಿಶೀಲಿಸಲಾಗುವುದು.

ಒಕ್ಕೂಟದ ಸಂವಿಧಾನದ ವರದಿಯನ್ನು ಈಗಾಗಲೆ ಸದಸ್ಯರಲ್ಲಿ ಪರಿಚಲಿಸಲಾಗಿದೆ ಎಂದು ತಿಳಿದುಬರುತ್ತದೆ. ಆ ವರದಿಗೆ ಗುರುವಾರ ಸಂಜೆಯ ವೇಳೆಗೆ ನೋಟೀಸನ್ನು ಕಳುಹಿಸುವಂತೆ ಸದಸ್ಯರನ್ನು ಕೋರುತ್ತೇನೆ.

ನಾನೀಗ, ಸಭೆಯನ್ನು ನಾಳೆ ಮಧ್ಯಾಹ್ನ ೩ ಘಂಟೆಯವರೆಗೆ ಮುಂದೂಡುತ್ತೇನೆ.

ನಂತರ ಸಭೆಯು ೧೬ ಜುಲೈ ೧೯೪೭ರ ಬುಧವಾರ ಮಧ್ಯಾಹ್ನ ೩ ಘಂಟೆಗೆ ಮುಂದೂಡಲ್ಪಟ್ಟಿತು.

*[ಹಿಂದೂಸ್ತಾನಿ ಭಾಷಣದ ಆಂಗ್ಲಭಾಷಾಂತರ]

# ಅನುಬಂಧ

ನಂ. ಸಿ. ಎ ೬೪/ಕಾಸಂವಿನ್ಸ್/೪೭
ಭಾರತದ ಸಂವಿಧಾನ ರಚನಾಸಭೆ
ಪರಿಷತ್ ಸದನ
ನವದೆಹಲಿ, ೨೭ ಜೂನ್ ೧೯೪೭

ಇಂದ
ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್
ಅಧ್ಯಕ್ಷರು, ಪ್ರಾಂತೀಯ ಸಂವಿಧಾನ ಸಮಿತಿ

ಗೆ,
ಅಧ್ಯಕ್ಷರು
ಭಾರತದ ಸಂವಿಧಾನ ರಚನಾಸಭೆ

ಮಾನ್ಯರೇ,

ಮಾದರಿ ಪ್ರಾಂತೀಯ ಸಂವಿಧಾನದ ನಿಯಮಗಳನ್ನು ಕುರಿತ ವರದಿ ಮಾಡಲು ೩೦ ಏಪ್ರಿಲ್ ೧೯೪೭ರಂದು ಸಂವಿಧಾನ ರಚನಾಸಭೆಯು ಅಂಗೀಕರಿಸಿದ ನಿರ್ಣಯದಂತೆ ಗೌರವಾನ್ವಿತ ಅಧ್ಯಕ್ಷರಿಂದ ನೇಮಕಗೊಂಡ ಸಮಿತಿಯ ಪರವಾಗಿ ಇದರೊಡನೆ ಲಗತ್ತಿಸಿದ ಜ್ಞಾಪನಾಪತ್ರವನ್ನು ಸಲ್ಲಿಸುವ ಗೌರವ ನನ್ನದಾಗಿದೆ. ಇದರಲ್ಲಿ ಸಮಿತಿಯ ಶಿಫಾರಸ್ಸುಗಳು ಮತ್ತು ವಿವರಣಾತ್ಮಕವಾದ ಆವಶ್ಯಕ ಟಿಪ್ಪಣಿಗಳು ಅಗತ್ಯವಿರುವೆಡೆ ಸೇರಿವೆ.

ತಮ್ಮ ವಿಧೇಯನಾದ
ವಲ್ಲಭಭಾಯಿ ಪಟೇಲ್
ಅಧ್ಯಕ್ಷ

**ಭಾರತದ ಸಂವಿಧಾನ ರಚನಾಸಭೆ**

ಪ್ರಾಂತೀಯ ಸಂವಿಧಾನ ರಚನಾಸಭೆ

ಮಾದರಿ ಪ್ರಾಂತೀಯ ಸಂವಿಧಾನದ ಮೂಲತತ್ತ್ವಗಳ ಮನವಿ ಪತ್ರ

ಭಾಗ–೧

ರಾಜ್ಯಪಾಲರ ಪ್ರಾಂತ್ಯಗಳು

## ಅಧ್ಯಾಯ ೧

## ಪ್ರಾಂತೀಯ ಕಾರ್ಯಾಂಗ

**ರಾಜ್ಯಪಾಲ :** ಪ್ರತಿಯೊಂದು ಪ್ರಾಂತ್ಯಕ್ಕೂ ವಯಸ್ಕರ ಮತಾಧಿಕಾರದ ಆಧಾರದ ಮೇಲೆ ನೇರವಾಗಿ ಒಬ್ಬ ರಾಜ್ಯಪಾಲರು ಚುನಾಯಿತರಾಗುವರು.

(ಟಿಪ್ಪಣಿ: ರಾಜ್ಯಪಾಲರ ಚುನಾವಣೆಯೂ ಪ್ರಾಂತೀಯ ಶಾಸನಸಭೆಯ ಸಾಮಾನ್ಯ ಚುನಾವಣೆಯೂ ಏಕಕಾಲದಲ್ಲಿ ನಡೆಯಬೇಕೆಂದು ಸಮಿತಿಯ ಸದಸ್ಯರು ಅಭಿಪ್ರಾಯಪಟ್ಟರು. ಶಾಸನಬದ್ಧವಾಗಿ ಇದು ನಡೆಯುವುದು ಕಷ್ಟವಾಗಬಹುದು. ಏಕೆಂದರೆ, ಶಾಸನಸಭೆಯು ತನ್ನ ಅವಧಿ ಮುಗಿಯುವ ಮುನ್ನ ವಿಸರ್ಜಿಸಲ್ಪಡಬಹುದು)

೨. ಅಧಿಕಾರಾವಧಿ: (೧) ರಾಜ್ಯಪಾಲರ ಅಧಿಕಾರಾವಧಿಯು ನಾಲ್ಕು ವರುಷಗಳಾಗಿರತಕ್ಕದು. ಅವರ ನಿಧನ, ರಾಜೀನಾಮೆ ಅಥವಾ ವಜಾಸಂದರ್ಭದಲ್ಲಿ ಹೊರತುಪಡಿಸಿ.

ರಾಜ್ಯಪಾಲರು, ಅನುಚಿತ ವರ್ತನೆಯ ಆಪಾದನೆಯ ಮೇರೆಗೆ, ಸದನದಿಂದ ಮಹಾಭಿಯೋಗಕ್ಕೆ ಗುರಿಯಾಗಿ ವಜಾಗೊಳ್ಳಬಹುದು. ಆಪಾದನೆಯನ್ನು ಶಾಸನಸಭೆ ಹೊರಿಸಬಹುದು. ಅಥವಾ ಉಭಯ ಸದನಗಳಿರುವೆಡೆ ಪ್ರಾಂತೀಯ ಶಾಸನಸಭೆಯ ಕೆಳಮನೆ ಆಪಾದನೆ ಹೊರಿಸಬಹುದು ಮತ್ತು ಫೆಡರಲ್ ಮೇಲ್ಮನೆ ವಿಚಾರಣೆ ನಡೆಸಬಹುದು. ಆ ಬಗ್ಗೆ ಅಂಗೀಕೃತವಾಗುವ ನಿರ್ಣಯಕ್ಕೆ ಸಂಬಂಧಿಸಿದ ಸದನದ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಮೂರನೇ ಎರಡು ಭಾಗಗಳಿಗಿಂತ ಕಡಿಮೆ ಇರದಂತೆ ಸದಸ್ಯರ ಬೆಂಬಲ ದೊರೆಯಬೇಕು.

ಎ) ರಾಜ್ಯಪಾಲರು ನಿರಂತರ ಗೈರುಹಾಜರಿಯಿಂದ ತಮ್ಮ ಸ್ಥಾನವನ್ನು ತೆರವುಗೊಳಿಸಿದುದಾಗಿ ಪರಿಗಣಿಸಲ್ಪಡುತ್ತಾರೆ. ಅಥವಾ ನಾಲ್ಕು ತಿಂಗಳಿಗೆ ಮೀರಿದ ಅವಧಿಯವರೆಗೆ ಅಥವಾ ಮುಂದುವರೆದ ಕಾರ್ಯನಿರ್ವಹಣಾ ಅಸಾಮರ್ಥ್ಯ ಅಥವಾ ವೈಫಲ್ಯದಿಂದಲೂ, ಅಧಿಕಾರ ಸ್ಥಾನವನ್ನು ತೆರವು ಮಾಡಿದಂತೆ ಪರಿಗಣಿಸಲ್ಪಡುತ್ತಾರೆ.

ಬಿ) ರಾಜ್ಯಪಾಲರಿಗೆ ಮರು ಚುನಾಯಿತರಾಗುವ ಹಕ್ಕಿದೆ, ಆದರೆ ಒಮ್ಮೆ ಮಾತ್ರ.

**೩. ಸಾಂದರ್ಭಿಕವಾಗಿ ಖಾಲಿ ಬಿದ್ದ ಸ್ಥಾನಗಳು:**

ಎ) ರಾಜ್ಯಪಾಲರ ಹುದ್ದೆಗಳು ಖಾಲಿ ಬಿದ್ದರೆ, ಜಂಟಿ ವರ್ಗಾವಣೀಯ ಮತದಾನ ವಿಧಾನದಿಂದ ಪ್ರಮಾಣಾನುಸಾರ ಪ್ರಾತಿನಿಧ್ಯದ ಪದ್ಧತಿಯಲ್ಲಿ ಪ್ರಾಂತೀಯ ಶಾಸನಸಭೆ ಭರ್ತಿ ಮಾಡುತ್ತದೆ.

ಬಿ) ನಾಲ್ಕು ತಿಂಗಳಿಗೆ ಮೀರಿದಂತೆ, ರಾಜ್ಯಪಾಲರು ಕಛೇರಿಗೆ ಗೈರುಹಾಜರಾದ ಸಂದರ್ಭದಲ್ಲಿ ಅಥವಾ ಕಾರ್ಯನಿರ್ವಹಣಾ ಅಸಾಮರ್ಥ್ಯ ಅಥವಾ ವೈಫಲ್ಯದ ಕಾರಣದಿಂದ, ಅವರ ಸ್ಥಾನ ಖಾಲಿ ಬಿದ್ದರೆ, ರಾಷ್ಟ್ರಪತಿಗಳು ರಾಜ್ಯಪಾಲರ ವಾಪಸಾತಿಯ ವರೆಗೆ ಅಥವಾ ಹೊಸ ರಾಜ್ಯಪಾಲರ ಚುನಾವಣೆಯ

ವರೆಗೆ, ಆಸ್ಥಾನದಲ್ಲಿ ಕಾರ್ಯನಿರ್ವಹಿಸಬಲ್ಲ ಸಕ್ಷಮ ವ್ಯಕ್ತಿಯೆಂದು ಅವರಿಗೆ ತೋರಿಬಂದಂತೆ ನೇಮಕ ಮಾಡಬಹುದು.

೪) ವಯೋ ಅರ್ಹತೆ: ೩೫ನೇ ವರುಷ ವಯಸ್ಸಾದ ಪ್ರತಿ ಭಾರತದ ಒಕ್ಕೂಟದ ಪ್ರತಿಯೊಬ್ಬ ವ್ಯಕ್ತಿಯೂ ರಾಜ್ಯಪಾಲನಾಗಿ ನೇಮಕಗೊಳ್ಳಲು ಅರ್ಹನಾಗಿರುತ್ತಾನೆ.

೫) **ಚುನವಾಣೆ ಕುರಿತ ವಿವಾದಗಳು** : ರಾಜ್ಯಪಾಲರ ಚುನಾವಣೆಗೆ ಸಂಬಂಧಿಸಿದ ವಿವಾದಗಳು ಕುರಿತು ಒಕ್ಕೂಟದ ಸರ್ವೋಚ್ಚನ್ಯಾಯಾಲಯ ವಿಚಾರಣೆ ನಡೆಸಿ, ತೀರ್ಪು ನೀಡುವುದು.

**೬. ಎ) ರಾಜ್ಯಪಾಲರ ಹುದ್ದೆಯ ನಿಬಂಧನೆಗಳು** ರಾಜ್ಯಪಾಲರು ಶಾಸನಸಭೆಯ ಸದಸ್ಯನಾಗಿರಬಾರದು ಹಾಗೊಮ್ಮೆ ಶಾಸನಸಭೆಯ ಸದಸ್ಯರೊಬ್ಬರು ರಾಜ್ಯಪಾಲರಾಗಿ ಚುನಾಯಿತರಾದರೆ, ಅವರು ತಮ್ಮ ಶಾಸನ ಸಭಾ ಸದಸ್ಯತ್ವವನ್ನು ತೆರವುಗೊಳಿಸಿರುವುದಾಗಿ ಪರಿಗಣಿಸಲ್ಪಡುತ್ತಾರೆ,

ಬಿ) ರಾಜ್ಯಪಾಲರು ಮತ್ತಾವುದೇ ವೇತನಾಧಾರಿತ ಹುದ್ದೆ ಅಥವಾ ಸ್ಥಾನವನ್ನು ಹೊಂದಿರಬಾರದು.

ಸಿ) ರಾಜ್ಯಪಾಲರು ತಮ್ಮ ಅಧಿಕೃತ ನಿವಾಸದಲ್ಲಿರತಕ್ಕದು; ಪ್ರಾಂತೀಯ ಶಾಸನಸಭೆ ಅಧಿನಿಯಮದಿಂದ ನಿರ್ಧರಿಸಲ್ಪಟ್ಟ ವೇತನ ಮತ್ತು ಭತ್ಯೆಯನ್ನು ಪಡೆಯತಕ್ಕದ್ದು. ಅಲ್ಲಿಯವರೆಗೆ ಅನುಬಂಧದಲ್ಲಿ ನಿಯಮಿಸಲ್ಪಟ್ಟ ವೇತನ ಮತ್ತು ಭತ್ಯೆಯನ್ನು ಪಡೆಯತಕ್ಕದ್ದು.

**೭. ಪ್ರಾಂತ್ಯದ ಕಾರ್ಯಾಂಗ ಅಧಿಕಾರ** : ಪ್ರಾಂತ್ಯದ ಕಾರ್ಯಾಂಗ ಅಧಿಕಾರವನ್ನು ರಾಜ್ಯಪಾಲರು ನೇರವಾಗಿಯೇ ಇಲ್ಲವೆ ಅವರ ಅಧೀನ ಅಧಿಕಾರಗಳ ಮುಖಾಂತರವೋ ಚಲಾಯಿಸಬೇಕು: ಆದ್ದರಿಂದ ಫೆಡರಲ್ ಸಂಸತ್ ಸಭೆಯಾಗಲಿ ಶಾಸನಸಭೆಯಾಗಲಿ ಅದರ ಅಧೀನ ಅಧಿಕಾರಿಗಳಿಗೆ ಪ್ರಕಾರ್ಯಗಳನ್ನು ವಹಿಸಿಕೊಡಲು ಇದು ಅಡ್ಡಿ ಬರುವುದಿಲ್ಲ. ಅಥವಾ ಯಾವುದೇ ಭಾರತೀಯ ಕಾನೂನು ರೀತ್ಯಾ ಯಾವುದಾದರೂ ನ್ಯಾಯಾಲಯಕ್ಕೆ, ನ್ಯಾಯಧೀಶರು ಅಥವಾ ಸ್ಥಳೀಯ ಅಥವಾ ಇತರ ಅಧಿಕಾರಿಗೆ ವಹಿಸಿದ ಪ್ರಕಾರ್ಯಗಳನ್ನು ರಾಜ್ಯಪಾಲರಿಗೆ ವರ್ಗಾವಣೆ ಮಾಡಿರುವುದಾಗಿ ಪರಿಗಣಿಸಲ್ಪಡುವುದಿಲ್ಲ.

**೮. ಪ್ರಾಂತ್ಯದ ಕಾರ್ಯಾಂಗ ಅಧಿಕಾರ ವ್ಯಾಪ್ತಿ** : ಈ ಸಂವಿಧಾನದ ಉಪಬಂಧಗಳಿಗೆ ಅಥವಾ ಯಾವುದೇ ವಿಶೇಷ ಒಪ್ಪಂದಕ್ಕೆ ಬದ್ಧವಾಗಿ ಪ್ರತಿಯೊಂದು ಪ್ರಾಂತ್ಯದ ಕಾರ್ಯಾಂಗ ಅಧಿಕಾರ ಶಾಸನಸಭೆ ರಚಿಸುವ ಕಾನೂನು ವ್ಯಾಪ್ತಿಗೆ ವಿಸ್ತರಿಸುತ್ತದೆ.

[ಟಿಪ್ಪಣಿ: 'ವಿಶೇಷ ಒಪ್ಪಂದ' ಎಂಬ ಪದದ ಉಲ್ಲೇಖ ಒಂದು ವಿವರಣೆಯನ್ನು ಬೇಡುತ್ತದೆ. ಭವಿಷ್ಯದಲ್ಲಿ ನಿರ್ದಿಷ್ಟ ಉಭಯ ಸಾಮಾನ್ಯ ಆಸಕ್ತಿಯುಳ್ಳ ವಿಷಯಗಳಲ್ಲಿ, ಭಾರತೀಯ ರಾಜ್ಯಗಳ ಅಥವಾ ರಾಜ್ಯಗಳ ಸಮೂಹ, ಸರ್ವಸಾಮಾನ್ಯ ಆಡಳಿತವನ್ನು ಹೊಂದಲು ಇಚ್ಛೆ ವ್ಯಕ್ತಪಡಿಸಬಹುದು. ಅಂತಹ ಸಂದರ್ಭಗಳಲ್ಲಿ ಆಳುವ ಅರಸರು, ಒಂದು ವಿಶೇಷ ಒಪ್ಪಂದಕ್ಕೆ ಬದ್ಧರಾಗಿ ಅಗತ್ಯವೆನಿಸುವಂತೆ ತಮ್ಮ ಅಧಿಕಾರಿ ವ್ಯಾಪ್ತಿಯನ್ನು ಆಯಾ ಪ್ರಾಂತ್ಯಕ್ಕೆ ಬಿಟ್ಟು ಕೊಡಬಹುದು. ಇದು ಒಕ್ಕೂಟದೊಡನೆ, ರಾಜ್ಯವಾಗಲಿ ರಾಜ್ಯಗಳಾಗಲಿ ಒಗ್ಗೂಡಲು ತಡೆಯುಂಟುಮಾಡುವುದಿಲ್ಲವೆಂಬುದನ್ನು ಪ್ರತ್ಯೇಕವಾಗಿ ತಿಳಿಸುವ ಅಗತ್ಯವಿಲ್ಲ. ಏಕೆಂದರೆ, ಒಕ್ಕೂಟದೊಡನೆ ಒಗ್ಗೂಡುವಿಕೆ, ಫೆಡರಲ್ ವಿಷಯಗಳಿಗೆ ಸಂಬಂಧಿಸಿದ್ದು. ಆದರೆ ಇಲ್ಲಿ ಒಪ್ಪಂದದ ಮೇರೆಗೆ ಅಧಿಕಾರವ್ಯಾಪ್ತಿಯ ವಿಸ್ತರಣೆ ಪ್ರಾಂತೀಯ ವಿಷಯಗಳಿಗೆ ಸಂಬಂಧಿಸಿದ್ದು.

**೯. ಮಂತ್ರಿಮಂಡಲ** : ಈ ಸಂವಿಧಾನದ ಅಡಿಯಲ್ಲಿ, ರಾಜ್ಯಪಾಲರು ತಮ್ಮ ವಿವೇಚನಾನುಸಾರ ತನ್ನ ಪ್ರಕಾರ್ಯಗಳಲ್ಲಿ, ತೊಡಗುವ ಸಂದರ್ಭದಲ್ಲಿ ಹೊರತುಪಡಿಸಿ, ರಾಜ್ಯಾಡಳಿತದಲ್ಲಿ ಅವರಿಗೆ ನೆರವಾಗಿ, ಸಲಹೆ ನೀಡಲು ಮಂತ್ರಿಗಳ ಮಂಡಲವೊಂದು ರಚನೆಯಾಗಬೇಕು. [ಟಿಪ್ಪಣಿ : ಬಹುತೇಕ, ರಾಜ್ಯಪಾಲರು, ಮಂತ್ರಿಮಂಡಲದ ಸಲಹೆ ಸೂಚನಾನುಸಾರ ವರ್ತಿಸುತ್ತಾರೆ, ಆದರೆ ಕೆಳಕಂಡ ಸಂದರ್ಭಗಳಲ್ಲಿ, ತಮ್ಮ ವಿವೇಚನಾನುಸಾರ ನಡೆಯತಕ್ಕದು.

(೧) ಪ್ರಾಂತ್ಯದ ಅಥವಾ ಅದರ ಯಾವುದೇ ಒಂದು ಭಾಗದ ಶಾಂತಿ ಮತ್ತು ನೆಮ್ಮದಿಗೆ ಭಂಗತರುವ ಗಂಭೀರ ಸ್ವರೂಪದ ಉಪದ್ರವವನ್ನು ನಿವಾರಿಸುವುದು.

(ಈ ಭಾಗದ ೧೫ (೨)ನೇ ವಾಕ್ಯಖಂಡ)

(೨) ಶಾಸನಸಭೆಯನ್ನು ಕರೆಯುವುದು ಮತ್ತು ವಿಸರ್ಜಿಸುವುದು (ಈ ಭಾಗದ ೨೦ನೇ ಖಂಡ)

(೩) ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ (ಈ ಭಾಗದ ೨೨ನೇ ಖಂಡ, ೨ನೇ ಪರಂತುಕ)

ಪ್ರಾಂತೀಯ ಲೋಕ ಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ಮತ್ತು ಪ್ರಾಂತೀಯ ಮಹಾ ಲೋಕಾಪಾಲರ ನೇಮಕಾತಿ (ಭಾಗ ೩)

ಇಲ್ಲಿ ಒಂದು ಅಂಶ ಗಮನಾರ್ಹ. ರಾಜ್ಯಪಾಲರು ತಮ್ಮ ವಿವೇಚನಾಧಿಕಾರವನ್ನು ದುರುಪಯೋಗ ಮಾಡಿಕೊಳ್ಳದಂತಿರಲು, ಉದ್ದೇಶಿತ ಸಂವಿಧಾನದ ಅಡಿಯಲ್ಲಿ ಅವರು ನೇರವಾಗಿ ಪ್ರಜೆಗಳಿಂದ ಚುನಾಯಿಸಲ್ಪಡಬೇಕು.

೧೦. ರಾಜ್ಯಪಾಲರ ವಿವೇಚನಾನುಸಾರ ಕೈಗೊಂಡ ಕ್ರಮದ ಬಗ್ಗೆ ಪ್ರಶ್ನೆ ಎದ್ದಾಗ, ರಾಜ್ಯಪಾಲರ ವಿವೇಚನೆಯ ನಿರ್ಧಾರವೇ ಅಂತಿಮ.

೧೧. ಮಂತ್ರಿಮಂಡಲ ರಾಜ್ಯಪಾಲರಿಗೆ ಸಲಹೆ ನೀಡಿತ್ತೆ ಅಥವಾ ನೀಡಿದ್ದರೆ ಅದರ ಬಗ್ಗೆ ವಿಚಾರಿಸುವ ಹಕ್ಕು ಯಾವುದೇ ನ್ಯಾಯಾಲಯಕ್ಕೂ ಇಲ್ಲ.

**೧೧) ಮಂತ್ರಿಗಳ ಇತರ ಸೌಲಭ್ಯಗಳು :** ರಾಜ್ಯಪಾಲರ ಮಂತ್ರಿಗಳು ಅವರಿಂದಲೆ ಆಯ್ಕೆಗೊಂಡು, ಅವರ ಇಚ್ಛಾನುಸಾರ ಆ ಸ್ಥಾನದಲ್ಲಿರುತ್ತಾರೆ.

೧೩. ಒಬ್ಬ ಮಂತ್ರಿ ಆರು ತಿಂಗಳ ಅವಧಿಯವರೆಗೆ, ಶಾಸನಸಭೆಯ ಸದಸ್ಯನಾಗಿರದಿದ್ದರೆ, ಅವಧಿ ಮುಗಿದನಂತರ ಮಂತ್ರಿಪದವಿಯನ್ನು ಕಳೆದುಕೊಳ್ಳುತ್ತಾನೆ.

(ಬಿ) ಅಧಿನಿಯಮದ ಅಡಿಯಲ್ಲಿ ಪ್ರಾಂತೀಯ ಶಾಸನಸಭೆ ನಿರ್ಧರಿಸಿದಂತೆ ಮಂತ್ರಿಗಳ ವೇತನ ನಿಗದಿಯಾಗುತ್ತದೆ. ಶಾಸನಸಭೆ ನಿರ್ಧರಿಸುವವರೆಗೆ ಅವರ ವೇತನವನ್ನು ರಾಜ್ಯಪಾಲರು ನಿರ್ಧರಿಸುತ್ತಾರೆ.

ಪರಂತು, ಮಂತ್ರಿಯ ಅಧಿಕಾರಾವಧಿಯಲ್ಲಿ ಅವರ ವೇತನದಲ್ಲಿ ಬದಲಾವಣೆಯಾಗದು.

**೧೩) ಜವಾಬ್ದಾರಿಯುತ ಸರ್ಕಾರ ಪಾಲಿಸಬೇಕಾದ ಶಿಷ್ಟಾಚಾರ :**

ಮಂತ್ರಿಗಳು ಮತ್ತು ಅವರ ಸಂಬಂಧಿಕರ ನೇಮಕಾತಿಯ ವಿಷಯದಲ್ಲಿ, ಅನುಬಂಧದಲ್ಲಿ ನಿರೂಪಿಸಿರುವಂತೆ, ಜವಾಬ್ದಾರಿಯುತ ಸರ್ಕಾರ ಪಾಲಿಸಬೇಕಾದ ಶಿಷ್ಟಾಚಾರಗಳು ರಾಜ್ಯಪಾಲರಿಗೆ ಮಾರ್ಗಸೂಚಿಯಾಗುತ್ತವೆ.....

ಆದರೆ ಈ ಸಂಪ್ರದಾಯಗಳಿಗೆ ವ್ಯತಿರಿಕ್ತವಾಗಿ ಯಾವುದೇ ಕ್ರಮ ಕೈಗೊಂಡಿದ್ದರೂ, ಅದರ ಮಾನ್ಯತೆಯ ಬಗ್ಗೆ ರಾಜ್ಯಪಾಲರನ್ನು ಪ್ರಶ್ನಿಸಲಾಗದು.

[ಟಿಪ್ಪಣಿ: ರಾಜ್ಯಪಾಲರಿಗೆ ಈಗ ನೀಡಲಾಗಿರುವ ಸೂಚನಾಪತ್ರದ ಬದಲಿಗೆ ಅನುಬಂಧವನ್ನು ಪ್ರತಿಸ್ಥಾಪಿಸಲಾಗುವುದು]

**೧೪) ರಾಜ್ಯಪಾಲರ ವಿಶೇಷ ಜವಾಬ್ದಾರಿಗಳು**

ಎ) ರಾಜ್ಯಪಾಲರು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಾಗ ಮುಂದಿನ ವಿಶೇಷ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಅದೆಂದರೆ, ಪ್ರಾಂತ್ಯದ ಅಥವಾ ಅದರ ಯಾವುದೇ ಭಾಗದ ಶಾಂತಿ ಮತ್ತು ನೆಮ್ಮದಿಗೆ ಭಂಗತರುವ ಗಂಭೀರ ಸ್ವರೂಪದ ಉಪದ್ರವವನ್ನು ನಿವಾರಿಸುವುದು.

ಬಿ) ತಮ್ಮ ವಿಶೇಷ ಜವಾಬ್ದಾರಿಯನ್ನು ನಿರ್ವಹಿಸುವಾಗ ರಾಜ್ಯಪಾಲರು ತಮ್ಮ ವಿವೇಚನಾನುಸಾರ ವರ್ತಿಸತಕ್ಕದು.

ಪರಂತು, ರಾಜ್ಯಪಾಲರು ತಮ್ಮ ವಿಶೇಷ ಜವಾಬ್ದಾರಿಯನ್ನು ನಿರ್ವಹಿಸುವಾಗ, ಶಾಸನದಲ್ಲಿ ಸೂಕ್ತ ಉಪಬಂಧದ ಅಗತ್ಯ ಕಂಡುಬಂದಿದ್ದು, ಅದು ದೊರೆಯದಿದ್ದಲ್ಲಿ, ಅದರ ವರದಿಯನ್ನು ಒಕ್ಕೂಟದ ರಾಷ್ಟ್ರಪತಿಗೆ

ಸಲ್ಲಿಸಬೇಕು. ರಾಷ್ಟ್ರಪತಿಗಳು ತಮ್ಮ ತುರ್ತು ಅಧಿಕಾರವನ್ನು ಚಲಾಯಿಸಿ, ತಮಗೆ ಸೂಕ್ತವೆನಿಸಿದ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು.

**೧೫) ಪ್ರಾಂತ್ಯಕ್ಕೆ ಅಡ್ವೋಕೇಟ್ ಜನರಲ್ ಅವರ ನೇಮಕಾತಿ :**

ಎ) ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗುವ ಅರ್ಹತೆಯುಳ್ಳ ವ್ಯಕ್ತಿಯನ್ನು ರಾಜ್ಯಪಾಲರು ಪ್ರಾಂತ್ಯದ ಅಡ್ವೋಕೇಟ್ ಜನರಲ್ ಆಗಿ ನೇಮಕಮಾಡುತ್ತಾರೆ. ಅವರು ಕಾನೂನು ವಿಷಯಗಳಲ್ಲಿ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಾರೆ.

ಬಿ) ಪ್ರಧಾನಿಯವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡುತ್ತಿದ್ದಂತೆ, ಅಡ್ವೋಕೇಟ್ ಜನರಲ್ ನಿವೃತ್ತರಾಗುತ್ತಾರೆ. ಆದರೆ ಹೊಸದಾಗಿ ಅಡ್ವೋಕೇಟ್ ಜನರಲ್ ಬಬ್ಬರನ್ನು ನೇಮಕ ಮಾಡುವವರೆಗೆ, ಅವರು ತಮ್ಮ ಹುದ್ದೆಯಲ್ಲಿ ಮುಂದುವರೆಯಬಹುದು.

ಸಿ) ರಾಜ್ಯಪಾಲ ನಿರ್ಧಾರದ ಮೇರೆಗೆ ಅಡ್ವೋಕೇಟ್ ಜನರಲ್ ಅವರ ವೇತನ ನಿಗದಿಯಾಗುತ್ತದೆ.

**೧೬. ಪ್ರಾಂತೀಯ ಸರ್ಕಾರದ ವ್ಯವಹಾರ ನಿರ್ವಹಣೆ:**

ಒಂದು ಪ್ರಾಂತ್ಯದ ಎಲ್ಲ ಕಾರ್ಯಾಂಗ ಕರ್ತವ್ಯಗಳು ರಾಜ್ಯಪಾಲರ ಹೆಸರಿನಲ್ಲಿ ನಡೆಯುತ್ತಿರುವುದಾಗಿ ವ್ಯಕ್ತವಾಗಬೇಕು.

**೧೭. ವ್ಯವಹಾರ ನಿಯಮಗಳು:** ಪ್ರಾಂತೀಯ ಸರ್ಕಾರದ ವ್ಯವಹಾರ ಸುಗಮಗೊಳ್ಳಲು ಹಾಗೂ ಮಂತ್ರಿಗಳಿಗೆ ಕರ್ತವ್ಯಗಳನ್ನು ಹಂಚಲು ರಾಜ್ಯಪಾಲರು ನಿಯಮಗಳನ್ನು ರೂಪಿಸುತ್ತಾರೆ.

## ಅಧ್ಯಾಯ ೨

## ಪ್ರಾಂತೀಯ ಶಾಸನಸಭೆ

**೧೮. ಪ್ರಾಂತೀಯ ಶಾಸನಸಭೆಗಳ ಸಂವಿಧಾನ**

ಎ) ಪ್ರತಿಯೊಂದು ಪ್ರಾಂತ್ಯದಲ್ಲೂ ಒಂದು ಪ್ರಾಂತೀಯ ಶಾಸನಸಭೆ ಇರಬೇಕು. ಅದು ರಾಜ್ಯಪಾಲರು ಮತ್ತು ವಿಧಾನಸಭೆಯನ್ನು ಒಳಗೊಂಡಿರಬೇಕು. ಮುಂದೆ ಕಾಣಿಸಿದ ಪ್ರಾಂತ್ಯಗಳಲ್ಲಿ, ಹೆಚ್ಚುವರಿ ವಿಧಾನ ಪರಿಷತ್ತು ಇರುತ್ತದೆ.

ಬಿ) (ಇಲ್ಲಿ ವಿಧಾನ ಪರಿಷತ್ತನ್ನು ಹೊಂದಲು ಇಚ್ಛಿಸುವ ಪ್ರಾಂತ್ಯಗಳನ್ನು ನಮೂದಿಸುವುದು.)

ವಿಭಿನ್ನ ರಾಜ್ಯ ಕ್ಷೇತ್ರಗಳ ಪ್ರಾತಿನಿಧ್ಯ ಶಾಸನಸಭೆಯಲ್ಲಿ ಜನಸಂಖ್ಯಾಧಾರದ ಮೇಲೆ ಇರುತ್ತದೆ. ಒಂದು ಲಕ್ಷ ಜನಸಂಖ್ಯೆಗೆ ಒಂದಕ್ಕೆ ಮೀರದಂತೆ ಪ್ರಾತಿನಿಧ್ಯವಿರಬೇಕು.

ಇದು ಯಾವುದೇ ಪ್ರಾಂತ್ಯದಲ್ಲಿ ಕನಿಷ್ಠ ೫೦ಕ್ಕೆ ಸೀಮಿತವಾಗಿರಬೇಕು.

ವಿಧಾನಸಭೆಗೆ ಚುನಾವಣೆ ನಡೆಯುವುದು. ವಯಸ್ಕ ಮತಾಧಿಕಾರದ ಆಧಾರದ ಮೇಲೆ; ಮತದಾರನ ವಯಸ್ಸು ೨೧ ವರುಷಗಳಿಗಿಂತ ಕಡಿಮೆ ಇರಬಾರದು.

ಸಿ) ಪ್ರತಿಯೊಂದು ಪ್ರಾಂತ್ಯದ ಪ್ರತಿ ವಿಧಾನಸಭೆಯೂ, ಅವಧಿಗೆ ಮುಂಚೆ ವಿಸರ್ಜಿಸಲ್ಪಡದಿದ್ದರೆ, ಸಭೆ ನಿಯುಕ್ತವಾದ ದಿನಾಂಕದಿಂದ ನಾಲ್ಕು ವರುಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ.

ಡಿ) ಯಾವುದೇ ಪ್ರಾಂತ್ಯದಲ್ಲಿ ಮೇಲ್ಮನೆ ಇರುವುದಾದರೆ, ಅದರ ರಚನೆ ಕೆಳಕಂಡಂತೆ ಇರುತ್ತದೆ.

i) ಮೇಲ್ಮನೆಯ ಸದಸ್ಯರ ಸಂಖ್ಯೆ ಕೆಳಮನೆಯ ಸಂಖ್ಯೆಯ ಶೇಕಡ ೨೫ಕ್ಕಿಂತ ಮೀರಿರಬಾರದು.

ii) ಐರ್ಲೆಂಡ್‌ನ ಸಂವಿಧಾನದ ಮಾದರಿಯಲ್ಲಿ, ಕೆಲ ಪ್ರಕಾರ್ಯಗಳ ಸಂಬಂಧ ಪ್ರಾತಿನಿಧ್ಯ

ಮೇಲ್ಮನೆಯಲ್ಲಿರತಕ್ಕದು. ಹಂಚಿಕೆ ಮುಂದೆ ತಿಳಿಸಿದಂತಿದೆ ಐರಿಷ್ ಮಾದರಿಯಲ್ಲಿ ಔಪಚಾರಿಕ ಪ್ರಾತಿನಿಧ್ಯದ ಮೇಲೆ ಅರ್ಧದಷ್ಟು ಸ್ಥಾನಗಳನ್ನು ಚುನಾವಣೆಯ ಮೂಲಕ ತುಂಬಬೇಕು. ಮೂರನೆ ಒಂದು ಭಾಗದಷ್ಟು ಕೆಳಮನೆಯಿಂದ ಚುನಾಯಿಸಲ್ಪಡಬೇಕು. (ಪ್ರಮಾಣಾನುಸಾರ ಪ್ರಾತಿನಿಧ್ಯದ ಆಧಾರದ ಮೇಲೆ) ಆರನೆ ಒಂದು ಭಾಗದಷ್ಟು ಮಂತ್ರಿಗಳ ಸಲಹಾನುಸಾರ ರಾಜ್ಯಪಾಲರಿಂದ ನಾಮ ನಿರ್ದೇಶಿತವಾಗಬೇಕು.

(ಟಿಪ್ಪಣಿ: ಈಗಿರುವ ಸಂವಿಧಾನದಂತೆ, ಮದ್ರಾಸು, ಬಾಂಬೆ, ಬಂಗಾಳ, ಸಂ. ಪ್ರಾಂ. ಬಿಹಾರ ಮತ್ತು ಅಸ್ಸಾಂನಲ್ಲಿ ಎರಡು ಸದನಗಳಿವೆ. ಮಿಕ್ಕಂತೆ ಒಂದು. ಒಂದು ಒಪ್ಪಂದದ ಮೇರೆಗೆ ಸಂವಿಧಾನ, ಪ್ರತಿಯೊಂದು ಪ್ರಾಂತ್ಯದಿಂದ ಸಂವಿಧಾನ ರಚನಾಸಭೆಯ ಸದಸ್ಯರು ಪ್ರತ್ಯೇಕವಾಗಿ ಮತದಾನ ಮಾಡಿ ಆಯಾ ಪ್ರಾಂತ್ಯದಲ್ಲಿ ಮೇಲ್ಮನೆ ಇರಬೇಕೆ ಎಂಬುದನ್ನು ನಿರ್ಧರಿಸಬೇಕು. ವಿಧಾನಸಭೆಯಲ್ಲಿ ವಿಶ್ವವಿದ್ಯಾಲಯ ಅಥವಾ ಕಾರ್ಮಿಕ ವರ್ಗ ಅಥವಾ ಮಹಿಳೆಯರಿಂದ ವಿಶೇಷ ಪ್ರಾತಿನಿಧ್ಯವಿರಕೂಡದು.

**೧೯. ಪ್ರಾಂತೀಯ ಶಾಸನಸಭೆಗಳ ರಚನೆ ಇತ್ಯಾದಿ:** ಪ್ರಾಂತೀಯ ಶಾಸನ ಸಭೆಯನ್ನು ಕರೆಯುವುದು, ಮುಂದೂಡುವುದು, ಮತ್ತು ವಿಸರ್ಜನೆ ಎರಡು ಸದನಗಳ ಸಂಬಂಧ (ಉಭಯ ಸದನಗಳು ಇರುವೆಡೆ), ಮತದಾನ ವಿಧಾನ, ಸದಸ್ಯರ ಹಕ್ಕುಗಳು ಸದಸ್ಯತ್ವದ ಅನರ್ಹತೆ

**ಸಂಸದೀಯ ಪ್ರಕ್ರಿಯೆ :** ಹಣಕಾಸು ವಿಷಯಗಳ ಪ್ರಕ್ರಿಯೆ ಒಳಗೊಂಡಂತೆ ಇತ್ಯಾದಿಗೆ ಉಪಬಂಧಗಳು ೧೯೩೫ರ ಅಧಿನಿಯಮದ ಉಪಬಂಧಗಳಿಗೆ ಸಮವರ್ತಿಯಾಗಿರುತ್ತದೆ.

**೨೦. ಭಾಷೆ :** ಪ್ರಾಂತೀಯ ಶಾಸನಸಭೆಯಲ್ಲಿ ವ್ಯವಹಾರಗಳು ಪ್ರಾಂತೀಯ ಭಾಷೆಗಳಲ್ಲಿ ಅಥವಾ ಹಿಂದುಸ್ತಾನಿ (ಹಿಂದೀ ಮತ್ತು ಉರ್ದು) ಅಥವಾ ಆಂಗ್ಲ ಭಾಷೆಯಲ್ಲಿ ನಡೆಯತಕ್ಕದ್ದು. ಮೇಲ್ಮನೆ ಇರುವಲ್ಲಿ ಅಧ್ಯಕ್ಷರು ಅಥವಾ ಸಭಾಧ್ಯಕ್ಷರು ಒಬ್ಬ ಸದಸ್ಯ ಆಡುವ ಭಾಷೆಗಿಂತ ಹೊರತಾದ ಭಾಷೆಯಲ್ಲಿ ಮಾಡಿದ ಭಾಷಣದ ಸಾರಾಂಶವನ್ನು ಸದನಕ್ಕೆ (ತನಗೆ ಸೂಕ್ತವೆನಿಸನಿದೆಡೆ) ಒದಗಿಸುವ ಏರ್ಪಾಡು ಮಾಡಬೇಕು. ಆ ಸಾರಾಂಶವನ್ನು ಸದನದ ವ್ಯವಹಾರಗಳ ದಾಖಲೆಯೊಳಗೆ ಅಡಕಗೊಳಿಸಬೇಕು.

**೨೧. ಪ್ರಾಂತೀಯ ಶಾಸನಸಭೆಗೆ ಮತಾಧಿಕಾರ :**

ಕೆಳಕಂಡ ಎಲ್ಲ ಅಥವಾ ಯಾವುದಾದರೂ ವಿಷಯಗಳಿಗೆ ಸಂಬಂಧಿಸಿದಂತೆ, ಪ್ರಾಂತೀಯ ಶಾಸನ ಸಭೆ ಕಾಲಕಾಲಕ್ಕೆ ಉಪಬಂಧಗಳನ್ನು ಕಲ್ಪಿಸತಕ್ಕದು:

ಎ) ರಾಜ್ಯಕ್ಷೇತ್ರಗಳ ಸೀಮಾ ನಿರ್ಣಯ

ಬಿ) ಮತಾಧಿಕಾರ ಪಡೆಯಲು ಅರ್ಹತೆ ಮತ್ತು ಮತಪಟ್ಟಿ ತಯಾರಿಕೆ.

ಸಿ) ಎರಡು ಸದನಗಳಲ್ಲೊಂದಕ್ಕೆ ಸದಸ್ಯನಾಗಿ ಚುನಾಯಿಸಲ್ಪಡಲು ಅರ್ಹತೆ

ಡಿ) ಎರಡು ಸದನಗಳಲ್ಲಿ ಯಾವುದಾದರೂ ಒಂದಕ್ಕೆ ಸಾಂದರ್ಭಿಕ ಖಾಲಿ ಸ್ಥಾನಗಳ ಭರ್ತಿ

ಇ) ಸಂವಿಧಾನದ ಅಡಿಯಲ್ಲಿ ಚುನಾವಣೆ ನಡೆಸುವುದು ಮತ್ತು ಮತದಾನ ವಿಧಾನ

ಎಫ್) ಅಂತಹ ಚುನಾವಣೆಗಳಲ್ಲಿ ಅಭ್ಯರ್ಥಿಯ ಖರ್ಚು–ವೆಚ್ಚಗಳು

ಜಿ) ಅಂತಹ ಚುನಾವಣೆಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ ಮತ್ತಿತರ ಅಪರಾಧಗಳು;

ಎಚ್) ಅಂತಹ ಚುನಾವಣೆಗಳಿಗೆ ಸಂಬಂಧಿಸಿದಂತೆ ಸಂದೇಹ ನಿವೃತ್ತಿಗೆ ಯಾ ವಿವಾದಗಳ ಬಗೆಹರಿಸಲು ಕೈಗೊಂಡ ನಿರ್ಧಾರ.

(ಐ) ಮೇಲೆ ತಿಳಿಸಿದ ವಿಷಯಗಳಿಗೆ ಪೂರಕವಾದ ವಿಷಯಗಳು

ಪರಂತು

೧) ಕೆಳಮನೆಯ ಸದಸ್ಯನ ವಯಸ್ಸು ೨೫ ವರುಷಕ್ಕಿಂತ ಕಡಿಮೆ ಇರಬಾರದು. ಮೇಲ್ಮನೆಯ ಸದಸ್ಯನ ವಯಸ್ಸು ೩೫ ವರುಷಕ್ಕಿಂತ ಕಡಿಮೆ ಇರಬಾರದು.

೨) ಚುನಾವಣಾ ನ್ಯಾಯಾಧಿಕರಣದ ನೇಮಕವೂ ಒಳಗೊಂಡಂತೆ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವನ್ನು ರಾಜ್ಯಪಾಲರ ವಿವೇಚನೆಗೆ ಬಿಡತಕ್ಕದು.

## ಅಧ್ಯಾಯ ೩

## ರಾಜ್ಯಪಾಲರ ಶಾಸನಸಭಾಧಿಕಾರ

೨೩. (೧) ಪ್ರಾಂತೀಯ ಶಾಸನಸಭೆಯ ಅಧಿವೇಶನವಿಲ್ಲದಿರುವಾಗ, ತತ್‌ಕ್ಷಣದ ಕ್ರಮ ಜರುಗಿಸುವಂತಹ ಸನ್ನಿವೇಶ ಉದ್ಭವಿಸಿರುವುದಾಗಿ ರಾಜ್ಯಪಾಲರಿಗೆ ಮನವರಿಕೆಯಾದರೆ, ಅಂತಹ ಸನ್ನಿವೇಶಗಳಿಗೆ ಅಗತ್ಯವಿರುವ ಅಧ್ಯಾದೇಶವನ್ನು ಹೊರಡಿಸಬಹುದು ಹೊರಡಿಸಿದ.

ಈ ಖಂಡದ ಅಡಿಯಲ್ಲಿ ಅಧ್ಯಾದೇಶಕ್ಕೆ ಪ್ರಾಂತೀಯ ಶಾಸನಸಭಾಧಿ ನಿಯಮದ (ರಾಜ್ಯಪಾಲರು ಅನುಮೋದಿಸಿದ ಅಧಿನಿಯಮ) ದಷ್ಟೆ ಬಲವಿರುತ್ತದೆ.

ಆದರೆ ಅಂತಹ ಪ್ರತಿಯೊಂದು ಅಧ್ಯಾದೇಶವೂ

ಎ) ಪ್ರಾಂತೀಯ ಶಾಸನಸಭೆಯ ಮುಂದೆ ಮಂಡಿಸಲ್ಪಡಬೇಕು. ಮತ್ತು ಪ್ರಾಂತೀಯ ಶಾಸನಸಭೆಯ ಮರು ಸಮಾವೇಶದಿಂದ ಆರು ವಾರಗಳು ಕಳೆದ ಕೂಡಲೆ ಅಧ್ಯಾದೇಶದ ಕಾರ್ಯಾಚರಣೆ ಕೊನೆಗೊಳ್ಳುತ್ತದೆ. ಅಥವಾ ಆರು ವಾರಗಳ ಅವಧಿ ಮುಗಿಯುವ ಮುನ್ನ ಅಂತಹ ಅಧ್ಯಾದೇಶವನ್ನು ಅನುಮೋದಿಸದ ನಿಲುವಳಿಗಳನ್ನು ಶಾಸನಸಭೆಯಲ್ಲಿ ನಿರ್ಣಯ ಅನುಮೋದಿಸಿದ ಪರಿಣಾಮವಾಗಿ, ಅಧ್ಯಾದೇಶದ ಕಾರ್ಯಾಚರಣೆ ನಿಲ್ಲುತ್ತದೆ. ಮತ್ತು

ಬಿ) ರಾಜ್ಯಪಾಲರೇ ಆ ಅಧ್ಯಾದೇಶವನ್ನು ಯಾವುದೇ ಸಂದರ್ಭದಲ್ಲಿ ಹಿಂತೆಗೆದುಕೊಳ್ಳಬಹುದು.

೨) ಈ ಖಂಡದ ಅಡಿಯಲ್ಲಿ ಒಂದು ಆಧ್ಯಾದೇಶವನ್ನು ಹೊರಡಿಸಿ, ಅದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಪ್ರಾಂತೀಯ ಶಾಸನಸಭೆ, ಅಧಿನಿಯಮನಗೊಳಿಸಲು ಸಕ್ಷಮವಾಗಿಲ್ಲದಿದ್ದರೆ, ಆಗ ಅಂತಹ ಅಧ್ಯಾದೇಶ ಅಸಿಂಧುವಾಗುತ್ತದೆ.

[ಟಿಪ್ಪಣಿ: ಈ ಸಂವಿಧಾನದ ಅಡಿಯಲ್ಲಿ ಅಧ್ಯಾದೇಶವನ್ನು ಹೊರಡಿಸುವ ಅಧಿಕಾರ ತೀವ್ರವಾದ ಟೀಕೆಗೆ ಗುರಿಯಾಗಿದೆ. ಆದರೂ ಒಂದು ಕಾನೂನನ್ನು ತತ್‌ಕ್ಷಣದಲ್ಲಿ ಹೊರಡಿಸುವುದು ಅತ್ಯಗತ್ಯ ಎಂಬಂತೆ, ಸನ್ನಿವೇಶಗಳು ಒತ್ತಾಯಪಡಿಸಬಹುದು ಎಂಬ ಅಂಶವನ್ನು ಗಮನದಲ್ಲಿಡಬೇಕು. ಮತ್ತು ಪ್ರಾಂತೀಯ ಶಾಸನಸಭೆಯನ್ನು ಕರೆಯುವಷ್ಟು ಕಾಲಾವಕಾಶ ಇರಲಾರದು. ೧೯೨೫ರಲ್ಲಿ ಹತ್ತಿಯ ಮೇಲಣ ಸುಂಕವನ್ನು ರದ್ದುಗೊಳಿಸುವ ಅಧ್ಯಾದೇಶವನ್ನು ಲಾರ್ಡ್ ರೀಕಿಂಗ್ ಅವರು ಹೊರಡಿಸಲೇಬೇಕೆಂಬ ಅನಿವಾರ್ಯತೆ ಏರ್ಪಟ್ಟಿತ್ತು. ಇದು ರಾಷ್ಟ್ರದ ಹಿತದೃಷ್ಟಿಯಿಂದ ತತ್‌ಕ್ಷಣ ಕಡ್ಡಾಯವಾಗಿ ಹೊರಡಿಸಲೇಬೇಕಾದ ಅಧ್ಯಾದೇಶವಾಗಿದ್ದಿತು. ರಾಜ್ಯಪಾಲರು ಜನತೆಯಿಂದ ಚುನಾಯಿಸಲ್ಪಟ್ಟವರು. ಶಾಸನಸಭೆಗೆ ಹೊಣೆಗಾರರಾದ ಮಂತ್ರಿಗಳ ಸಲಹೆಯ ಮೇರೆಗೆ ಅವರು ಸ್ವಾಭಾವಿಕವಾಗಿ ಕಾರ್ಯನಿರ್ವಹಿಸುವಾಗ, ಯಾವುದೇ ಅಧ್ಯಾದೇಶವನ್ನು ಅವರು ದುರುಪಯೋಗಮಾಡುವ ಸಂಭವ ಇರುವುದಿಲ್ಲ. ಆದುದರಿಂದ ಅಧ್ಯಾದೇಶವನ್ನು ಹೊರಟಿಸುವ ಅಧಿಕಾರವನ್ನು ಅವರಿಗೆ ವಹಿಸಿಕೊಡಬಹುದು. ಆ ಕಾರಣಕ್ಕಾಗಿ ಈ ಉಪಬಂಧವನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ.

## ಅಧ್ಯಾಯ ೪

## ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶಗಳು

[ಈ ಅಧ್ಯಾಯಕ್ಕೆ ಸಲಹಾ ಸಮಿತಿಯ ವರದಿ ಬರುವವರೆಗೆ, ಉಪಬಂಧಗಳನ್ನು ರಚಿಸಲಾಗದು]

### ಭಾಗ ೨

### ಪ್ರಾಂತೀಯ ನ್ಯಾಯಿಕ ವ್ಯವಸ್ಥೆ

೧) ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರದ ೧೯೩೫ರ ಅಧಿನಿಯಮದ ಉಪಬಂಧಗಳನ್ನು ಯಥೋಚಿತ ಬದಲಾವಣೆಗಳೊಡನೆ ಅಳವಡಿಸಬೇಕು. ಆದರೆ, ರಾಷ್ಟ್ರಪತಿಗಳು ಒಕ್ಕೂಟದ ಸರ್ವೋಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ ಹಾಗೂ ಪ್ರಾಂತೀಯ ರಾಜ್ಯಪಾಲರು ಮತ್ತು ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ ನ್ಯಾಯಾಧೀಶರ ನೇಮಕಮಾಡಬೇಕು. (ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೆ ಸ್ವತಃ ನೇಮಕಗೊಳ್ಳಬೇಕಾದ ಸಂದರ್ಭವೊಂದನ್ನು ಹೊರತುಪಡಿಸಿ)

೨) ಉಚ್ಚನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಭತ್ಯೆಯನ್ನು ಪ್ರಾಂತೀಯ ಶಾಸನಸಭೆಯ ಅಡಿ ನಿಯಮಾನುಸಾರ ನಿಗದಿಪಡಿಸಲಾಗುವುದು. ಅಲ್ಲಿಯವರೆಗೆ ಅನುಬಂಧದಲ್ಲಿ ನಿಯಮಿಸಿದಂತೆ ಪಾವತಿಯಾಗಬೇಕು........

೩) ನ್ಯಾಯಾಧೀಶರ ವೇತನ ಹಾಗೂ ಭತ್ಯೆಯನ್ನು ಅವರ ಸೇವಾವಧಿಯಲ್ಲಿ ಕಡಿತಗೊಳಿಸಲಾಗದು.

### ಭಾಗ ೩

### ಪ್ರಾಂತೀಯ ಲೋಕಸೇವಾ ಆಯೋಗ ಮತ್ತು ಪ್ರಾಂತೀಯ ಮಹಾಲೇಚಾಪಾಲರು

೧೯೩೫ರ ಅಧಿನಿಯಮದ ಉಪಬಂಧಗಳ ಮಾದರಿಯಲ್ಲೆ ಲೋಕಸೇವಾ ಆಯೋಗ ಮತ್ತು ಮಹಾಲೇಖಪಾಲರ ಉಪಬಂಧಗಳನ್ನು ಸೇರಿಸಬೇಕು. ಪ್ರತಿ ಲೋಕಸೇವಾ ಆಯೋಗ ಮತ್ತು ಮಹಾಲೇಖಪಾಲರ ನೇಮಕಾತಿಯನ್ನು ರಾಜ್ಯಪಾಲರ ವಿವೇಚನೆಗೆ ಬಿಡತಕ್ಕದು.

### ಭಾಗ ೪

### ಸ್ಥಿತ್ಯಂತರ ಉಪಬಂಧಗಳು

೧) ಈ ಸಂವಿಧಾನ ಜಾರಿಗೊಳ್ಳುವ ಕ್ಷಣಕ್ಕೆ ಮುನ್ನ ಯಾವುದೇ ಪ್ರಾಂತ್ಯದ ರಾಜ್ಯಪಾಲರ ಹುದ್ದೆಯಲ್ಲಿರುವ ವ್ಯಕ್ತಿ ಅದೇ ಹುದ್ದೆಯಲ್ಲಿ ಮುಂದುವರೆಯುತ್ತಾರೆ. ಸಂವಿಧಾನದ ಅಡಿಯಲ್ಲಿ ಉತ್ತರಾಧಿಕಾರಿಯ ನೇಮಕವಾಗುವ ವರೆಗೆ, ಆ ಪ್ರಾಂತ್ಯದ ರಾಜ್ಯಪಾಲರಾಗಿರುವುದಾಗಿ ಪರಿಗಣಿಸಲ್ಪಡುತ್ತಾರೆ.

೨) ಮೇಲ್ಮನೆಯನ್ನು ಹೊಂದಲು ನಿರ್ಧರಿಸುವ ಪ್ರಾಂತ್ಯಗಳಲ್ಲಿ, ಮಂತ್ರಿಮಂಡಲ, ವಿಧಾನಸಭೆ ಮತ್ತು ವಿಧಾನಪರಿಷತ್ತಿಗೆ ಯಥೋಚಿತ ಬದಲಾವಣೆಯೊಡನೆ ಇಂತಹವೇ ಉಪಬಂಧಗಳಿರತಕ್ಕದು.

(ಟಿಪ್ಪಣಿ: ಈ ಸಂವಿಧಾನವು ಕಾರ್ಯರೂಪಕ್ಕೆ ಬರುತ್ತಿದ್ದಂತೆ, ಅಧಿಕಾರ ವಹಿಸಿಕೊಳ್ಳಲು ಸಿದ್ಧವಾಗಿರಲು ಈ ಉಪಬಂಧಗಳು ಅಗತ್ಯ)

೩) ಎಲ್ಲ ಆಸ್ತಿ, ಆದಾಯ, ಹಕ್ಕು ಮತ್ತು ಹೊಣೆಗೆ ಸಂಬಂಧಿಸಿದಂತೆ, ಸಂವಿಧಾನ ಜಾರಿಗೊಳ್ಳುವ ಕ್ಷಣಕ್ಕೆ ಮುನ್ನ ಪ್ರತಿ ರಾಜ್ಯಪಾಲರ ಪ್ರಾಂತ್ಯದ ಸರ್ಕಾರ ಅದರ ಸಂವಾದಿ ಪ್ರಾಂತ್ಯದ ಸರ್ಕಾರಕ್ಕೆ ಉತ್ತರಾಧಿಕಾರಿಯಾಗಿ ಇರತಕ್ಕದು.